# ಯುಗರಶ್ಮಿ

- ಈದ್ ಆಚರಣೆ
- ಮಹಾತ್ಮ ಗೌತಮಬುದ್ಧ
- ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
- ಯೇಸುಕ್ರಿಸ್ತರನ್ನು ದಫನ ಮಾಡಿದ್ದು ಎಲ್ಲಿ?
- ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

ತ್ರೈಮಾಸಿಕ

ಡಿಸೆಂಬರ್ 1977

ಫತಹ್ 1356

ಬೆಲೆ: ರೂ. 1-00

"ನಿಮ್ಮ ಸಂಪತ್ತನ್ನು ಅನ್ಯಾಯವಾದ ರೀತಿಯಲ್ಲಿ ನೀವು ಪರಸ್ಪರ ತಿನ್ನಬೇಡಿರಿ. ಅನ್ಯರ ಸೊತ್ತಿನಲ್ಲಿ ಒಂದು ಭಾಗವನ್ನು ನ್ಯಾಯವಿರುದ್ಧವಾಗಿ ಕೈವಶಪಡಿಸಲಿಕ್ಕಾಗಿ ನೀವು ಅಧಿಕಾರಸ್ಥರಿಗೆ ಲಂಚ ಕೊಡಲೂ ಬಾರದು".

—ಪವಿತ್ರ ಖುರ್‌ಆನ್ (2 : 189)

# ಯುಗರಶ್ಮಿ

## ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು-575001.

ಸಂಪುಟ: 3 ಸಂಚಿಕೆ: 3

ಅಕ್ಟೋಬರ್-ಡಿಸೆಂಬರ್ 1977/ಇಖಾ-ಫತಹ್ 1356

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು

## ವಿಷಯ ಸೂಚಿಕೆ:

* ಹಜ್ ಕರ್ಮಾನುಷ್ಠಾನ
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು
* ಈದ್ ಆಚರಣೆ
* ಮಹಾತ್ಮ ಗೌತಮಬುದ್ಧ
* ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
* ಯೇಸುಕ್ರಿಸ್ತರನ್ನು ದಫನ ಮಾಡಿದ್ದು ಎಲ್ಲಿ ?
* ಅಹ್ಮದಿಯಾ ವಾರ್ತೆಗಳು
* ಸಂಪಾದಕರಿಗೆ ಪತ್ರ
* ಪುಸ್ತಕ ವಿಭಾಗ — ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?
* ಪಶ್ಚಿಮ ದಿಕ್ಕಿನಿಂದ ಸೂರ್ಯೋದಯ - 3.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


| ಸಂಪುಟ: 3 | ಅಕ್ಟೋಬರ್-ಡಿಸೆಂಬರ್ 1977 / ಇಖಾ-ಫತಹ್ 1356 | ಸಂಚಿಕೆ: 3 |
| --- | --- | --- |


## ಹಜ್ ಕರ್ಮಾನುಷ್ಠಾನ

"ಇಸ್ಲಾಂ ನಿರ್ದೇಶಿಸುವ ಆರಾಧನಾಕರ್ಮಗಳಲ್ಲೊಂದು ಹಜ್ ಅಥವಾ ಮಕ್ಕಾ ತೀರ್ಥ ಯಾತ್ರೆಯಾಗಿದೆ. ನ್ಯಾಯವೋ ಅನ್ಯಾಯವೋ ಆದ ಯಾವುದಾದರೂ ರೀತಿಯಲ್ಲಿ ಸಂಪಾದಿಸಿದ ಹಣವನ್ನು ಖರ್ಚುಮಾಡಿ ಸಮುದ್ರ ದಾಟಿ ಹೋಗಿ ಆ ಪುಣ್ಯಕ್ಷೇತ್ರವನ್ನು ಸಂದರ್ಶಿಸಿ ಕೇವಲ ಆಚಾರಕ್ಕಾಗಿ ಕೆಲವು ಕೃತ್ಯಗಳನ್ನು ನಿರ್ವಹಿಸಿ ಹಿಂತಿರುಗಿ ಬರುವುದಾದರೆ ಹಜ್‌ಕರ್ಮ ಪೂರ್ಣ ವಾಗಲಿಕ್ಕಿಲ್ಲ. ಇಂತಹ ಬಾಹ್ಯಾಚಾರಣೆಯಲ್ಲಿ ಮಾತ್ರ ಅಭಿಮಾನಿಸುವುದರಿಂದ ಪರಮಾತ್ಮನು ಈ ಪುಣ್ಯಕರ್ಮವನ್ನು ವಿಧಿಸಿದುದರ ಉದ್ದೇಶ ಪೂರ್ತಿಯಾಗಲಿಕ್ಕಿಲ್ಲ. ಯಥಾರ್ಥದಲ್ಲಿ ಈ ಕರ್ಮವು ಮೋಕ್ಷಮಾರ್ಗದಲ್ಲಿರುವ ಅಂತಿಮವಾದ ಒಂದು ಯಾತ್ರಾಘಟ್ಟವನ್ನು ಸೂಚಿಸುತ್ತದೆ. ಆತ್ಮ ಮಾರ್ಗದ ಪಥಿಕನಾದ ಮುಮುಕ್ಷು ಕೆಳಮಟ್ಟದ ಲೌಕಿಕ ಬಂಧಗಳನ್ನು ಬೇರ್ಪಡಿಸಿ ದೈವಾನುರಾಗ ದಲ್ಲಿ ಮಗ್ನನಾಗುತ್ತಾನೆ. ನಿಜವಾದ ದೈವಪ್ರೇಮಿಯು ತನ್ನ ದಿವ್ಯವಾದ ಆ ಪ್ರೇಮದಲ್ಲಿ ಮುಳುಗಿ, ಆ ಪ್ರೇಮಪಾತ್ರಕ್ಕಾಗಿ ತನ್ನ ಹೃದಯವನ್ನೂ ಆತ್ಮವನ್ನೂ ಬಲಿಯರ್ಪಿಸುತ್ತಾನೆ. "ಕಅಬಾ" ದೈವಾಲಯಕ್ಕೆ ಮಾಡುವ ಪ್ರದಕ್ಷಿಣೆಯು ಈ ಆತ್ಮ ತ್ಯಾಗದ ಒಂದು ಬಾಹ್ಯಚಿಹ್ನೆಯಾಗಿದೆ. ಭೂಮಿ ಯಲ್ಲಿರುವ ಈ ದೈವಾಲಯ (ಬೈತುಲ್ಲಾಹ್)ದಂತೆಯೇ ಸ್ವರ್ಗದಲ್ಲೂ ಒಂದು ದೈವಾಲಯವಿದೆ, ಆ ಸ್ವರ್ಗೀಯ ದೈವಾಲಯವನ್ನು ಸುತ್ತುಬರದ ಕಾಲದ ವರೆಗೆ ಭೂಮಿಯಲ್ಲಿರುವ ಈ ದೈವಾಲ ಯಕ್ಕೆ ಮಾಡುವ ಪ್ರದಕ್ಷಿಣೆಯು ಯಥಾರ್ಥ ಕರ್ಮವಾಗಿರದು. "ಕಅಬಾ" ಪ್ರದಕ್ಷಿಣೆ ಮಾಡುವ ಭಕ್ತನು ತನ್ನ ಸಾಮಾನ್ಯ ವಸ್ತ್ರಗಳನ್ನು ತೆಗೆದಿಟ್ಟು ಒಂಟಿ ವಸ್ತ್ರವನ್ನು ಧರಿಸುತ್ತಾನೆ. ಸ್ವರ್ಗದಲ್ಲಿರುವ ದೈವಾಲಯವನ್ನು ಪ್ರದಕ್ಷಿಣೆ ಮಾಡುವ ದೈವಪ್ರೇಮಿ ತನ್ನ ಬಾಹ್ಯಾಲಂಕಾರಗಳನ್ನು ದೈವನಾಮ ದಲ್ಲಿ ಪರಿತ್ಯಜಿಸುವುದರೊಂದಿಗೆ ತನ್ನ ಹೃದಯಮಾಲಿನ್ಯಗಳನ್ನೆಲ್ಲಾ ಸ್ವಚ್ಛಗೊಳಿಸಿ ಪಾವನ ಹೃದಯಿ ಯಾಗಿ ದೈವಸನ್ನಿಧಿಯಲ್ಲಿ ಹಾಜರಾಗುತ್ತಾನೆ. ಹೀಗೆ ದೈವಪ್ರೇಮಿ ತನ್ನ ಪ್ರೇಮಾತಿರೇಕವನ್ನು ಈ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ದುರ್ಭಾಗ್ಯ ಬಂದಾಗ ನಿಮ್ಮಲ್ಲಿ ಯಾರೂ ಮರಣವನ್ನು ಇಚ್ಛಿಸಬಾರದು. ಗತ್ಯಂತರವಿಲ್ಲವೆಂದು ಕಂಡರೆ ಅವನು ಪ್ರಾರ್ಥಿಸಲಿ: "ದೇವರೆ, ನನಗೆ ಗುಣಕರ ವಾಗುವ ತನಕ ನೀನು ನನಗೆ ಜೀವಿತವನ್ನು ಕೊಡು. ಮರಣವು ನನಗೆ ಗುಣಕರವಾಗುವಾಗ ನನ್ನ ಜೀವವನ್ನು ನೀನು ತೆಗೆದುಕೋ".

2. ಶರೀರದಲ್ಲಿ ರಕ್ತ ಸಂಚರಿಸುವ ಹಾಗೆ ಸೈತಾನ್ ಮನುಷ್ಯರೆಡೆಯಲ್ಲಿ ಚಲಿಸುತ್ತಾನೆ.

3. ಹಿಂತಿರುಗಿಸಿ ಕೊಡುವ ಉದ್ದೇಶದಿಂದ ಸಾಲ ತೆಗೆದುಕೊಳ್ಳುವವನಿಗೆ ಸಾಲ ತೀರಿಸಲು ಪರಮಾತ್ಮನು ಮಾರ್ಗವನ್ನುಂಟುಮಾಡುತ್ತಾನೆ. ನಷ್ಟವನ್ನುಂಟುಮಾಡಲು ಬಯಸಿ ಸಾಲ ಕೊಳ್ಳುವವನಿಗೆ ಪರಮಾತ್ಮನು ನಾಶವನ್ನುಂಟುಮಾಡುತ್ತಾನೆ.

4. ಪಾಪವನ್ನು ನೆನೆಸಿ ಪಶ್ಚಾತ್ತಾಪಪಡುತ್ತಾ ಇರುವವನು ಪಾಪವನ್ನು ಮಾಡದವನ ಹಾಗೆ.

5. ನ್ಯೂನತೆಯುಳ್ಳ ಒಂದು ವಸ್ತುವನ್ನು ಅದರ ದೋಷವನ್ನು ಬಯಲುಗೊಳಿಸದೆ ಮಾರುವವನು ದೇವರ ಕೋಪಕ್ಕೆ ಗುರಿಯಾಗುತ್ತಾನೆ. ದೇವದೂತರು ಅವನನ್ನು ಶಪಿಸುವರು.

6. ದೈವಮಾರ್ಗದಲ್ಲಿ ಖರ್ಚು ಮಾಡುವವನಿಗೆ ಏಳುನೂರು ಪಾಲು ಪ್ರತಿಫಲವಿದೆ.

7. ಅನ್ಯನ ಸಂಪತ್ತನ್ನು ಬಯಸುವವನು ನಮ್ಮ ಪೈಕಿಯವನಲ್ಲ.

8. ಪರಿಶುದ್ಧನಾಗಿ, ನಿರ್ಮಲನಾಗಿ ಪರಮಾತ್ಮನನ್ನು ಪಡೆಯಲು ಇಚ್ಛಿಸುವವನು ವಿವಾಹವನ್ನು ಮಾಡಿಕೊಳ್ಳಲಿ.

9. ವಿವಾಹಿತನಾದವನು ತನ್ನ ಮತಧರ್ಮದ ಅರ್ಧವನ್ನು ಪೂರ್ತಿ ಮಾಡಿದನು.

10. ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವವನು ನಿಮ್ಮಲ್ಲಿ ಅತ್ಯಂತ ಶ್ರೇಷ್ಠನು.

---

(1ನೇ ಪುಟದಿಂದ)

ಪ್ರದಕ್ಷಿಣೆಕರ್ಮ ಮೂಲಕ ಪ್ರಕಟಗೊಳಿಸುತ್ತಾನೆ. ಅಂದರೆ ತನ್ನ ಸ್ವಂತ ಇಚ್ಛೆಗಳೂ ಅಭಿರುಚಿಗಳೂ ತನ್ನಲ್ಲಿ ಬಾಕಿಯುಳಿಯದಂತೆ ಒಂದು ಪ್ರೇಮಾಗ್ನಿಯನ್ನು ತನ್ನಲ್ಲಿ ಉಂಟುಮಾಡುತ್ತಾನೆ ಎಂದು ಭಕ್ತನು ಈ ಬಾಹ್ಯಕರ್ಮದ ಮೂಲಕ ವ್ಯಕ್ತಗೊಳಿಸುತ್ತಾನೆ. ದೈವಾನುರಾಗಿಯಾದ ಭಕ್ತನು ತನ್ನ ಆ ಪ್ರೇಮಕೇಂದ್ರವನ್ನು ಸುತ್ತುತ್ತಲೇ ಇರುತ್ತಾನೆ. ಹಜ್‌ಕರ್ಮದ ನಿಜಾರ್ಥ ಇದೇ ಆಗಿದೆ. ಆದುದರಿಂದ ಶಾರೀರಿಕವಾದ ಈ ಕರ್ಮದೊಂದಿಗೆ ಆತ್ಮಿಕವಾದ ಆ ಪುಣ್ಯಕರ್ಮವನ್ನೂ ನಿರ್ವಹಿಸದಿದ್ದರೆ ಆತನ ಬಾಹ್ಯಚೇಷ್ಟೆಗಳೆಲ್ಲಾ ಅರ್ಥಶೂನ್ಯವಾಗುವುದು". (ಇಸ್ಲಾಮಿನ ಐದು ಕರ್ಮಗಳು ಪುಟ 16–18).

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಈದ್ ಆಚರಣೆ

—ಮುಹಮ್ಮದ್ ಯೂಸುಫ್.

ಏನಾದರೊಂದು ಪ್ರತ್ಯೇಕ ಕಾರಣದ ಆಧಾರದಿಂದ ವರ್ಷದಲ್ಲಿ ಒಂದೋ ಅದಕ್ಕಿಂತ ಹೆಚ್ಚೋ ವಿಶೇಷ ದಿನಗಳನ್ನು ಎಲ್ಲಾ ಮತಸ್ಥರೂ ಸಮುದಾಯದವರೂ ಆಚರಿಸುತ್ತಾರೆ. ವರ್ಷದಲ್ಲಿ ಒಂದು ದಿನವನ್ನಾದರೂ ವಿಶೇಷ ದಿನವಾಗಿ ಆಚರಿಸುವ ಸ್ವಭಾವವು ಮನುಷ್ಯ ಸಹಜವಾಗಿದ್ದು ಏಕ ಪ್ರಕಾರವಾದ ಜೀವಿತಕ್ರಮದಲ್ಲಿ ಕೆಲವೊಮ್ಮೆ ವ್ಯತ್ಯಾಸವನ್ನುಂಟುಮಾಡಲು ಕೆಲವು ವ್ಯವಸ್ಥೆಗಳನ್ನು ಅವರು ಅಂಗೀಕರಿಸಿರುತ್ತಾರೆ.

ಈ ನೈಸರ್ಗಿಕ ಸ್ವಭಾವಕ್ಕನುಗುಣವಾದ ವಿಶೇಷ ದಿನಾಚರಣೆಯನ್ನು ಇಸ್ಲಾಂ ಅದರ ಅನುಯಾಯಿಗಳಿಗೂ ನಿರ್ದೇಶಿಸಿರುತ್ತದೆ. ಇಸ್ಲಾಮಿನ ಎಲ್ಲಾ ಉಪದೇಶಗಳು ಪ್ರಕೃತಿಗೆ ಅನುಯೋಜ್ಯವಾಗಿರುತ್ತವೆ. ಈದ್ ಆಚರಣೆ ಕುರಿತಿರುವ ಅದರ ಉಪದೇಶಗಳಿಂದಲೂ ಈ ವಾಸ್ತವಾಂಶವನ್ನು ತಿಳಿಯಬಹುದು. ಇಸ್ಲಾಂ ಅದರ ಅನುಯಾಯಿಗಳಿಗೆ ಆಚರಿಸಲು ನಿರ್ದೇಶಿಸಿದ ಹಬ್ಬಗಳು ಮುಹಮ್ಮದ್ ಪೈಗಂಬರರ ಜೀವನವನ್ನೋ ಮರಣವನ್ನೋ ಅವರಿಗೆ ಲಭಿಸಿದ ವಿಜಯವನ್ನೋ ಅವಲಂಬಿಸಿಕೊಂಡಿರದೆ ಮನುಷ್ಯನ ಸ್ವಾಭಾವಿಕ ಗುಣಗಳನ್ನು ಆಧರಿಸಿಕೊಂಡಿವೆ.

ಇಸ್ಲಾಂ ಧರ್ಮದಲ್ಲಿ ಆಚರಿಸಲು ನಿರ್ದೇಶಿಸಲಾದ ಹಬ್ಬಗಳು ಎರಡು. ಒಂದು "ಈದುಲ್ ಫಿತರ್;" ಮತ್ತೊಂದು "ಈದುಲ್ ಅಝ್‌ಹಾ". ಈ ಎರಡು ಹಬ್ಬಗಳೂ ಇಸ್ಲಾಮಿನ ಎರಡು ಮೌಲಿಕ ಕರ್ಮಾನುಷ್ಠಾನಗಳನ್ನು ಅನುಬಂಧಿಸಿಕೊಂಡಿವೆ. ಒಂದನೆಯದು ಪರಮಾತ್ಮನ ಪ್ರೀತಿಯನ್ನು ಪಡೆಯಬೇಕೆಂಬ ವಾಂಛೆಯಿಂದ ರಂಝಾನ್ ಮಾಸದಲ್ಲಿಡೀ ವ್ರತವನ್ನನುಷ್ಠಿಸಿದ ಬಳಿಕ ಆಚರಿಸಲ್ಪಡುವುದಾಗಿದೆ. ಎರಡನೆಯದು ಅಲ್ಲಾಹುವಿನ ಸ್ನೇಹವನ್ನು ಸಂಪಾದಿಸಲು ಸ್ವದೇಶವನ್ನೂ ಸ್ವಂತ ಸುಖವನ್ನೂ ಉಪೇಕ್ಷಿಸುವುದು ಮಾತ್ರವಲ್ಲ, ಆತ್ಮ ಪರಿತ್ಯಾಗಕ್ಕೂ ಸನ್ನದ್ಧನಿರಬೇಕೆಂದು ಸೂಚಿಸುವ, ಹಾಗೆಯೇ ನಿಜವಾಗಿಯೂ ಆತ್ಮ ಪರಿತ್ಯಾಗವನ್ನು ಮಾಡಿದ ಶ್ರೇಷ್ಠಾತ್ಮರ ಮಾದರಿಯನ್ನು ಅನುಕರಿಸುವ "ಹಜ್" ಪುಣ್ಯಕರ್ಮಾನುಷ್ಠಾನದ ನಂತರ ಆಚರಿಸಲ್ಪಡುತ್ತದೆ.

ಹೀಗೆ ಇಸ್ಲಾಂ ನಿರ್ದೇಶಿಸಿರುವ ಹಬ್ಬಗಳೆರಡೂ ಕ್ಲಿಷ್ಟಕರವೂ ತ್ಯಾಗಪರವೂ ಆದ ಎರಡು ಪ್ರಧಾನ ಕರ್ಮಾನುಷ್ಠಾನಗಳ ಬಳಿಕ ಬರುವವುಗಳಾಗಿವೆ. ವ್ರತಾನುಷ್ಠಾನ ಸಂದರ್ಭದಲ್ಲಿ ಮುಸ್ಲಿಮನು ಹಗಲೆಲ್ಲಾ ಆಹಾರ ಪಾನೀಯಗಳನ್ನು ಉಪೇಕ್ಷಿಸಿ ರಾತ್ರಿಯನ್ನು ಪ್ರಾರ್ಥನೆಯಲ್ಲೂ ದೈವಸ್ಮರಣೆಯಲ್ಲೂ ಕಳೆಯುತ್ತಾನೆ. ಹೀಗೆ ಅವನು ಒಂದು ತಿಂಗಳ ಕಾಲ ಪವಿತ್ರವಾದ ಜೀವನವನ್ನು ಕೈಗೊಂಡು ಹಸಿವು ಮತ್ತು ಕಷ್ಟಕ್ಲೇಶಗಳ ರುಚಿಯನ್ನು ಅನುಭವಿಸಿದ ಕಾರಣದಿಂದ ಬಡಜನರ ಮೇಲೆ ಅನುಕಂಪವನ್ನು ತೋರಿಸಲೂ ಅವರಿಗೆ ಸಹಾಯ ಸವಲತ್ತುಗಳನ್ನು ಮಾಡಿಕೊಡಲೂ ಪರಿಶೀಲಿಸಿದ ನಂತರ ಮರುದಿನ ಒಂದು ಹಬ್ಬವನ್ನಾಚರಿಸಲು ಇಸ್ಲಾಂ ಅವನಿಗೆ ನಿರ್ದೇಶಿಸುತ್ತದೆ. ಇದರಿಂದಾಗಿ ಈ ಹಬ್ಬವನ್ನು ಆಚರಿಸುವ ಉದ್ದೇಶವು ಒಂದು ತಿಂಗಳ ಕಾಲ ಇಂತಹ ಪುಣ್ಯಕರ್ಮಗಳನ್ನು ಅನುಷ್ಠಿಸಲು ಲಭಿಸಿದ ಸ್ಮಾರಕ್ಕೋಸ್ಕರವಾಗಿದೆಯೆಂದು ತಿಳಿಯಬೇಕಾಗಿದೆ. ಹಾಗೆ ಹಬ್ಬ ಅಥವಾ ಸಂತೋಷದ ದಿವಸವು ತೀವ್ರಯತ್ನ ಹಾಗೂ ಕಷ್ಟಕ್ಲೇಷಗಳನ್ನು ಅನುಭವಿಸಿದ ನಂತರ ಮಾತ್ರವೇ ಲಭ್ಯವಾಗುವುದೆಂದು ಪ್ರತಿಯೋರ್ವ ಮುಸ್ಲಿಂ ತನ್ನ ಪ್ರವೃತ್ತಿಯ ಮೂಲಕ ತೋರಿಸಬೇಕಾಗಿದೆಯೆಂದು ಇಸ್ಲಾಂ ಈ ಏರ್ಪಾಡಿನ ಮುಖಾಂತರ ಬೋಧಿಸುತ್ತದೆ.

ಹಜ್, ಪರಮಾತ್ಮನ ಹೆಸರಿನಲ್ಲಿ ಆತ್ಮ ಪರಿತ್ಯಾಗಕ್ಕೆ ಸಹ ಸಿದ್ಧನಿರಬೇಕೆಂಬ ಪಾಠವನ್ನು ಒಳಗೊಂಡಿರುವ ತ್ಯಾಗಕರ್ಮವಾಗಿದೆ. ದೈವಮಾರ್ಗದಲ್ಲಿ ಆತ್ಮಾರ್ಪಣೆ ಮಾಡುವುದು ಒಂದು ದೊಡ್ಡ ಪುಣ್ಯಕರ್ಮವೆಂದೂ ತಾನು ಅದಕ್ಕೂ ಸನ್ನದ್ಧನೆಂದೂ ತನ್ನ ಪ್ರವೃತ್ತಿಯ ಮೂಲಕ ಮುಸ್ಲಿಮನು ಸಾಕ್ಷೀಕರಿಸುತ್ತಾನೆ.

ಹಬ್ಬ ದಿನದಂದು ಬಾಹ್ಯರೂಪದಲ್ಲೂ ಸಂತೋಷವನ್ನು ಪ್ರಕಟಿಸಲು ಇಸ್ಲಾಂ ಹೇಳುವುದಾದರೂ ಯಥಾರ್ಥವಾದ ಹಬ್ಬವು ದೈವಪ್ರೀತಿಯನ್ನು ಸಂಪಾದಿಸುವುದರಲ್ಲಿ ನೆಲೆಗೊಂಡಿರುವುದೆಂದೂ ಅದನ್ನು ಗಳಿಸುವ ಮಾರ್ಗವು ಪರಮಾತ್ಮನ ನಿಯಮ ನಿರ್ದೇಶನಗಳನ್ನನುಸರಿಸಿ ಅವನನ್ನು ಭಜಿಸುವುದಾಗಿದೆಯೆಂದೂ ಈದ್ ಆಚರಣೆಯ ಕುರಿತು ಇಸ್ಲಾಂ ನೀಡಿರುವ ನಿರ್ದೇಶನಗಳಿಂದ ವ್ಯಕ್ತವಾಗಿ ತಿಳಿಯುತ್ತದೆ.

ಈದ್ ಆಚರಣೆಯ ಸಂದರ್ಭಗಳಲ್ಲಿ ಇತರ ದಿವಸಗಳಿಗಿಂತ ಹೆಚ್ಚಾದ ಪ್ರಾರ್ಥನೆಯೂ ದೈವಾರಾಧನೆಯೂ ದೈವಧ್ಯಾನವೂ ಬೇಕೆಂದು ಇಸ್ಲಾಂ ಕಲಿಸುತ್ತದೆ. ಅದಲ್ಲದೆ ಈದುಲ್ ಫಿತರ್‌ನಲ್ಲಿ ಬಡವರಿಗೆ ಸಹಾಯಧನವಾಗಿ "ಸದಖತುಲ್ ಫಿತರ್" ಎಂದು ಕರೆಯಲ್ಪಡುವ ಒಂದು ನಿಶ್ಚಿತ ಮೊತ್ತವನ್ನು ಕೊಡಬೇಕಾಗಿದೆಯೆಂದೂ ಈದುಲ್ ಅಝ್‌ಹಾದಂದು ಆತ್ಮಪರಿತ್ಯಾಗದ ಸನ್ನದ್ಧತೆಯ ಸಂಕೇತವಾಗಿ ಮೃಗ ಬಲಿ ಕೊಡಬೇಕೆಂದೂ ಇಸ್ಲಾಂ ವಿಧಿಸಿರುತ್ತದೆ. ಇದರಿಂದಾಗಿ ಇಸ್ಲಾಮಿಕ ಹಬ್ಬಗಳು ಹಲವು ಪುಣ್ಯಕರ್ಮಗಳನ್ನು ಮಾಡಲು ಪ್ರೇರೆಪಿಸುವುದೆಂದು ವ್ಯಕ್ತವಾಗುತ್ತದೆ. ಸಂಕ್ಷಿಪ್ತವಾಗಿ, ಆತ್ಮೋನ್ನತಿಗಾಗಿ ಹಲವು ರೀತಿಯ ತ್ಯಾಗಗಳೂ ಕಷ್ಟಾನುಭವಗಳೂ ಅತ್ಯಾವಶ್ಯಕವೆಂದೂ ಹಾಗೆ ತೀವ್ರಯತ್ನ ಹಾಗೂ ತ್ಯಾಗಗಳನ್ನು ಮಾಡದೆ ಪರಮಾನಂದವನ್ನು ಪಡೆಯಲು ಸಾಧ್ಯವಿಲ್ಲವೆಂದೂ ಈ ಎರಡೂ ಹಬ್ಬಗಳು ಬೋಧಿಸುತ್ತವೆ. ಅದೇ ಪ್ರಕಾರ ಪರಮಾತ್ಮನನ್ನು ಹೆಚ್ಚು ಹೆಚ್ಚಾಗಿ ಭಜಿಸುವುದರಲ್ಲಿಯೂ ಸಮಸೃಷ್ಟಿಗಳೊಡನೆ ಅನುಕಂಪವನ್ನು ತೋರಿವುದರಲ್ಲಿಯೂ ತನ್ನ ಈದ್ ನೆಲೆಗೊಂಡಿರುವುದೆಂದು ಒಬ್ಬ ಯಥಾರ್ಥ ಭಕ್ತನು ತಿಳಿದಿರಬೇಕೆಂದು ನೆನಪು ಮಾಡಿ ಕೊಡುತ್ತವೆ.

ನಮ್ಮ ಐಹಿಕ ಜೀವಿತವು ಪಾರತ್ರಿಕ ಜೀವಿತವನ್ನು ರೂಪುಗೊಳಿಸುವ ಒಂದು ಉಪಕರಣವಾಗಿದೆ. ಇಹದಲ್ಲಿ ನಾವು ವರ್ತಿಸುವುದರ ಪ್ರತಿಫಲವನ್ನು ಪರಲೋಕದಲ್ಲಿ ಅನುಭವಿಸುತ್ತೇವೆ. ಇಲ್ಲಿಯ ಹಬ್ಬವು ಪರಲೋಕದಲ್ಲಿ ಅನಂತಕಾಲ ಅನುಭವಿಸಬೇಕಾದ ಯಥಾರ್ಥ ಉಲ್ಲಾಸ ಜೀವಿತದ ಅಣುಮಾತ್ರದ ಒಂದು ಮಾದರಿಯಾಗಿದೆ. ತ್ಯಾಗಪರವಾದ ಎರಡು ಮಹತ್ಕಾರ್ಯಗಳ ನಂತರ ಇಲ್ಲಿ ಹಬ್ಬವನ್ನಾಚರಿಸಲು ಇಸ್ಲಾಂ ನಿರ್ದೇಶಿಸುತ್ತಾ ಪರಲೋಕದಲ್ಲಿ ಅನುಭವಿಸಬೇಕಾದ ಹಬ್ಬ ದೊಡ್ಡದೊಡ್ಡ ತ್ಯಾಗ ಮತ್ತು ಕಷ್ಟಾನುಭವಗಳ ನಂತರ ಮಾತ್ರವೇ ಲಭ್ಯವಾಗುವುದೆಂದು ಬೋಧಿಸುತ್ತದೆ. ರಂಝಾನ್ ಮಾಸದಲ್ಲಿ ವ್ರತವನ್ನಾಚರಿಸದೆಯೂ ಸದಖತುಲ್ ಫಿತರ್ ಕೊಡದೆಯೂ ಉಪವಾಸಕ್ಕೂ ಹಬ್ಬಕ್ಕೂ ಇರುವ ಸಂಬಂಧವೇನೆಂದು ತಿಳಿಯದೆಯೂ ಹಜ್‌ಕರ್ಮದ ಉದ್ದೇಶವೇನೆಂದು ಅರಿಯದೆಯೂ ಹೊಸ ಉಡುಪನ್ನು ಧರಿಸಿ, ಮೃಷ್ಟಾನ್ನ ಭೋಜನವನ್ನು ಉಂಡು ಈದ್ ಆಚರಿಸುವುದು ಅಸಮಂಜಸವೂ ಅರ್ಥಶೂನ್ಯವೂ ಆಗಿದೆ.

ಐಹಿಕದಲ್ಲಿ ದೇಹಕ್ಕೂ ಆತ್ಮಕ್ಕೂ ಗಾಢವಾದ ಸಂಬಂಧವಿರುವುದರಿಂದಾಗಿ ಒಂದರ ಪ್ರವೃತ್ತಿಯು ಮತ್ತೊಂದರ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಆದುದರಿಂದ ಇಸ್ಲಾಂ ಆಧ್ಯಾತ್ಮಿಕ ಹಾಗೂ ಪಾರತ್ರಿಕ ಶ್ರೇಯಸ್ಸಿಗಾಗಿ ಬಾಹ್ಯವೂ ಆಂತರಿಕವೂ ಆದ ಕೆಲವು ಕರ್ಮಾನುಷ್ಠಾನಗಳನ್ನು ನಿರ್ದೇಶಿಸುತ್ತದೆ. ಪ್ರಸ್ತುತ ನಿಯಮವನ್ನನುಸರಿಸಿ ಈದ್ ದಿನದಂದು ಆಧ್ಯಾತ್ಮಿಕವಾಗಿ ನಾವು ಆಚರಿಸುವ ಸಂತೋಷಕ್ಕೆ ಶರೀರ ಸಹಭಾಗಿಯಾಗಿರುವುದರಿಂದ ಆ ಸಂದರ್ಭದಲ್ಲಿ ಒಳ್ಳೆಯ ಆಹಾರವನ್ನು ಭಕ್ಷಿಸಲೂ ಒಳ್ಳೆಯ ಉಡುಪುಗಳನ್ನು ಧರಿಸಲೂ ಇಸ್ಲಾಂ ಉಪದೇಶಿಸುತ್ತದೆ. ಆದರೆ ಈದ್‌ನ ಯಥಾರ್ಥತೆಯು ಈ ಬಾಹ್ಯಾಡಂಬರಗಳಲ್ಲ; ಬದಲಾಗಿ ಆಂತರಿಕ ಕರ್ಮಗಳಲ್ಲಿ ನೆಲೆಗೊಂಡಿದೆಯೆಂದು ಈದ್ ಆಚರಣೆಗೆ ಸಂಬಂಧಿಸಿದ ಇಸ್ಲಾಮಿಕ ನಿರ್ದೇಶನಗಳಿಂದ ತಿಳಿದುಬರುತ್ತದೆ. ಆದರೆ ಈ ಕಾಲದ ಮುಸ್ಲಿಮರಲ್ಲಿ ಹೆಚ್ಚಿನವರು ಆಂತರ್ಯವನ್ನು ಗ್ರಹಿಸದೆ ಕೇವಲ ಬಾಹ್ಯಕರ್ಮವೆಂಬಂತೆ ಈದನ್ನು ಆಚರಿಸುತ್ತಾರೆ. ಈ ಆಚರಣೆಯಲ್ಲಿ ಒಳಗೊಂಡಿರುವ ಆತ್ಮಿಕ ತಾತ್ಪರ್ಯವನ್ನು ಗ್ರಹಿಸಿರುತ್ತಿದ್ದಾರೆ ಎಂದಿಗೂ ಅವರು ಈ ರೀತಿ ವರ್ತಿಸುತ್ತಿರಲಿಲ್ಲ.

ಮಹತ್ತಾದ ಪುಣ್ಯಕರ್ಮಗಳ ನಂತರ ಈದ್ ಆಚರಿಸಲಿಕ್ಕೂ ಆ ಸಂದರ್ಭದಲ್ಲೇ ಬೇರೆ ಕೆಲವು ಪುಣ್ಯಕರ್ಮಗಳನ್ನು ಅನುಷ್ಠಿಸಲಿಕ್ಕೂ ಇಸ್ಲಾಂ ನಿರ್ದೇಶಿಸುತ್ತಾ ಯಥಾರ್ಥ ಈದ್ ಏನೆಂದೂ ಅದು ಲಭ್ಯವಾಗಬೇಕಾದರೆ ಏನು ಮಾಡಬೇಕೆಂದೂ ಮುಂದಟ್ಟು ಮಾಡಿಕೊಟ್ಟಿರುತ್ತದೆ.

ಇಸ್ಲಾಂ ನಿರ್ದೇಶಿಸುವ ಈದ್ ಪಾರತ್ರಿಕ ಸುಖಕ್ಕೆ ದೃಷ್ಟಾಂತವಾಗಿರುವಂತೆಯೇ ಅದು ಸಾಮೂಹಿಕ ಜೀವಿತವನ್ನು ಸುಖಕರವನ್ನಾಗಿ ಮಾರ್ಪಡಿಸಲು ಪರ್ಯಾಪ್ತವಾದ ನಿರ್ದೇಶಗಳಿಂದ ಕೂಡಿಕೊಂಡಿದೆ. ಇಸ್ಲಾಮಿನ ಒಂದು ಈದ್ ದಾನಧರ್ಮಗಳಿಂದ ಬಡವರಿಗೆ ಸಹಾಯಮಾಡಬೇಕೆಂದು ಕಲಿಸುವುದಾದರೆ ಇನ್ನೊಂದು ತ್ಯಾಗಪೂರ್ಣವಾದ ಜೀವಿತವೇ ಮೋಕ್ಷಪ್ರಾಪ್ತಿಗೆ ಸಾಧಕವಾಗುವುದೆಂಬ ತತ್ವವನ್ನು ಪ್ರಬೋಧಿಸುತ್ತದೆ. ಈದ್ ದಿನದಂದು ಜನರು ಒಂದು ಸ್ಥಳದಲ್ಲಿ ಒಟ್ಟುಗೂಡಿ ದೈವಾರಾಧನೆಯನ್ನು ಮಾಡಬೇಕೆಂದು ವಿಧಿಸುತ್ತಾ ಐಕ್ಯ, ಸಮತೆ ಮೊದಲಾದ ಗುಣಗಳು ಸಮುದಾಯದ ಕ್ಷೇಮಾಭಿವೃದ್ಧಿಗೆ ಅತ್ಯಾವಶ್ಯಕವೆಂದು ಇಸ್ಲಾಂ ತಿಳಿಸುತ್ತದೆ. ಹೀಗೆ ಇಸ್ಲಾಮಿಕ ಹಬ್ಬ ಆಚರಣೆಯಲ್ಲಿ ಆಂತರಿಕವೂ ಬಾಹ್ಯವೂ ಆದ ಹಲವು ತತ್ವಗಳು ಒಳಗೊಂಡಿವೆ. ●

# ಮಹಾತ್ಮ ಗೌತಮ ಬುದ್ಧ

—ಇ. ಖಾಲಿದ್.

"ಓರ್ವ ಪ್ರವಾದಿ ಆಗಮಿಸದೆ ಇರುವ ಒಂದು ಸಮುದಾಯವೂ ಇಲ್ಲ" ಎಂದೂ, "ಅವರ ಪೈಕಿ ಕೆಲವರ ಕುರಿತು ನಿನಗೆ ತಿಳಿಸಲಾಗಿದೆ: ಕೆಲವರ ಕುರಿತು ತಿಳಿಸಲಾಗಿಲ್ಲ" ಎಂದೂ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಹೇಳುತ್ತಾನೆ. ಈ ಖುರ್‌ಆನ್ ಸೂಕ್ತಗಳ ಆಧಾರದಿಂದ ಮತ್ತು ವಾಗ್ದತ್ತ ಲೋಕೋದ್ಧಾರಕ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರ ಉಪದೇಶಗಳನ್ನನುಸರಿಸಿ ಅಹ್ಮದಿಯರು ಇತರ ಸಮುದಾಯಗಳಲ್ಲಿ ಆವಿರ್ಭವಿಸಿದ ಆಧ್ಯಾತ್ಮಿಕ ಆಚಾರ್ಯರಲ್ಲಿ ವಿಶ್ವಾಸಗೊಂಡು ಅವರನ್ನು ಗೌರವಿಸುತ್ತಾರೆ. ಮನುಷ್ಯ ವಂಶವನ್ನು ಅಧಃಪತನದೆಡೆಗೆ ಕೊಂಡೊಯ್ಯುವ ಭೌತಿಕ ವಿಚಾರಗಳು ಶಕ್ತಿಗೊಂಡು ಪೂರ್ವ ಪ್ರವಾದಿಗಳು ಸೃಷ್ಟಿಸಿದ ಧಾರ್ಮಿಕತೆಯ ಅಸ್ತಿವಾರಕ್ಕೆ ಕುಂದು ಬಾಧಿಸುವ ಸಂದರ್ಭಗಳಲ್ಲಿ ದಿವ್ಯ ಪ್ರಭಾವಿತರಾದ ಮಹಾಪುರುಷರು ಭೂತಲದಲ್ಲಿ ಆವಿರ್ಭವಿಸುವರು. ಸರ್ವಚರಾಚರಗಳನ್ನು ಸೃಷ್ಟಿಸಿ ರಕ್ಷಿಸುತ್ತಿರುವ ಪರಮಾತ್ಮನ ಸರ್ವೋತ್ಕೃಷ್ಟ ಶಕ್ತಿವಿಲಾಸಗಳನ್ನು ಈ ಎಲ್ಲಾ ಆಧ್ಯಾತ್ಮಿಕ ಆಚಾರ್ಯರು ಘೋಷಿಸುತ್ತಾರೆ. ಸರಳ ಜೀವಿತದಲ್ಲೂ ಪರಿಮಿತ ಸುಖಗಳಲ್ಲೂ ಸಂತೃಪ್ತಿ ಪಡೆಯಲು, ಶಾಶ್ವತ ಸತ್ಯಕ್ಕೂ ಸದಾಚಾರಕ್ಕೂ ಅನುಸಾರವಾಗಿ ಜೀವನವನ್ನು ರೂಪುಗೊಳಿಸಿ ಪರಮಾತ್ಮನ ಅನುಗ್ರಹಗಳಿಗೆ ಪಾತ್ರರಾಗಲು ಅವರು ಜನರಿಗೆ ಉಪದೇಶಿಸಿದರು. ಈ ಉಪದೇಶ ಸಂಹಿತೆಗಳನ್ನು ಒಂದಲ್ಲವಾದರೆ ಇನ್ನೊಂದು ರೀತಿಯಲ್ಲಿ ಚರಿತ್ರೆಯ ಆರಂಭದಿಂದಲೇ ಮನುಷ್ಯವಂಶ ಶ್ರವಿಸುತ್ತಾ ಬಂದಿದೆ.

ದೈವ ಏಕನೆಂದೂ ಸತ್ಯ, ಧರ್ಮ, ನೀತಿ ಮಾತ್ರವೇ ವಿಜಯಗೊಳ್ಳುವುದೆಂದೂ ಉಚ್ಚಘೋಷಣೆ ಮಾಡಿದ ಓರ್ವ ಧರ್ಮಾತ್ಮ 2500 ವರ್ಷಗಳ ಮೊದಲು ತಪೋಬದ್ಧ ಭಾರತದಲ್ಲಿ ಜೀವಿಸಿದ್ದರು. ಆ ಮಹಾಪುರುಷನೇ ಅಹಿಂಸೆಯ ಅವತಾರವೆಂದೂ ಕರುಣೆಯ ಪ್ರತಿಬಿಂಬವೆಂದೂ ಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟ ಮಹಾತ್ಮ ಬುದ್ಧ. ದೀನದಯಾಳುತ್ವದ ಮತ್ತು ಕರುಣಾರ್ದ್ರತೆಯ ಪ್ರಬೋಧಕನೂ ಅಹಿಂಸೆಯ ಪ್ರವಾದಿಯೂ ಎಂಬುದಕ್ಕಿಂತ ಹೆಚ್ಚಾಗಿ ಮಹಾತ್ಮ ಬುದ್ಧ ಭಾರತ ಭೂಖಂಡದ ಧಾರ್ಮಿಕ ಪುನರ್ನಿರ್ಮಾಣಕ್ಕಾಗಿ ಪರಮಾತ್ಮನಿಂದ ನಿಯುಕ್ತನಾದ ಓರ್ವ ಪ್ರವಾದಿಯಾಗಿದ್ದರು. ಆರ್ಯಾವರ್ತದ ಜನಸಮೂಹವು ಧಾರ್ಮಿಕಪಥದಿಂದ ವ್ಯತಿಕ್ರಮಿಸಿ ಅಜ್ಞಾನಿಗಳೂ ಅಂಧವಿಶ್ವಾಸಿಗಳೂ ಆಗಿ ಜೀವಿತ ಯಾಪನಮಾಡಿಕೊಂಡಿದ್ದ ಮಲಿನವಾದ ಒಂದು ಕಾಲಘಟ್ಟದಲ್ಲಿ ಮಹಾತ್ಮಬುದ್ಧ ಆವಿರ್ಭವಿಸಿದರು. ಅಲ್ಪ ಸಮಯದಲ್ಲಿ ಆ ಮಹಾತ್ಮನಿಗೆ ಏಕದೈವಾರಧಕರೂ ದೀನದಯಾಳುಗಳೂ ಆಗಿದ್ದ ಒಂದು ಜನಸಮೂಹವನ್ನು ಆಯ್ಕೆಮಾಡಲು ಸಾಧ್ಯವಾಯಿತು. ಈ ಭಕ್ತವೃಂದವು ಬುದ್ಧನ ಕಾಲನಂತರ ಅವರ ಶಾಂತಿ ಸಂದೇಶವನ್ನು ಎಲ್ಲೆಲ್ಲೂ ಪ್ರಚುರಪಡಿಸಿದರು. ಆದರೆ, ಇಂದು ಅದೇ ಸಂದೇಶದಲ್ಲಿ ನಂಬಿಕೆಯಿರಿಸಿಕೊಂಡವರೂ ತಥಾಗತನ ಅನುಚರರೆಂದು ಅಭಿಮಾನಗೊಳ್ಳುವವರೂ ಸಹ ಬುದ್ಧ ಯಾರೆಂದಾಗಲೀ, ಅವರ ಆಗಮನೋದ್ದೇಶ ಏನಾಗಿತ್ತೆಂದಾಗಲೀ, ತಿಳಿದಿಲ್ಲ. ವಿಶ್ರುತ ಭಾರತೀಯ ಚಿಂತಕನೂ ಹಿಂದೂಮತ ಪಂಡಿತನೂ ಆದ ಕಾಕಾ ಕಾಲೇಲ್ಕರ್ ಹೇಳಿದಂತೆ "ಭಾರತವರ್ಷದ ಜನರು ಭಗವಾನ್ ಬುದ್ಧನನ್ನು ಮರೆತಿರುವರು. ಪಂಡಿತರ ಅಭಿಪ್ರಾಯಗತಿಗಳು ಸಹ ವಿಕೃತವಾಗಿವೆ".

## ಅರಮನೆಯಲ್ಲಿ ಒಂದು ಅನುಗ್ರಹ

ಕ್ರಿಸ್ತಪೂರ್ವ 623ರಲ್ಲಿ ಕಪಿಲವಸ್ತುವಿಗೆ ಹದಿನಾಲ್ಕು ಮೈಲುಗಳಷ್ಟು ದೂರವಿರುವ ಲುಂಬಿಣಿಯಲ್ಲಿ ಶಾಕ್ಯ ವಂಶಜನಾದ ಶುದ್ಧೋದನ ಮಹಾರಾಜನ ಏಕಸಂತಾನವಾಗಿ ಸಿದ್ಧಾರ್ಥ ರಾಜಕುಮಾರ ಜನಿಸಿದನು. ದೀರ್ಘ ಕಾಲದ ನಿರಂತರವಾದ ಪ್ರಾರ್ಥನೆಗಳ ಮತ್ತು ದಾನ ಧರ್ಮಾದಿಗಳ ಫಲವಾಗಿ ಶುದ್ಧೋದನ ರಾಜನ ಅರಮನೆಯನ್ನು ಪ್ರಭಾಪೂರಿತವನ್ನಾಗಿ ಮಾಡಿದ ಆ ಪ್ರಕಾಶವು ಭಾರತದ ಅನುಗ್ರಹ ಹಾಗೂ ಪರಮಾತ್ಮನ ಅಸ್ತಿತ್ವದ ಕುರುಹು ಆಗಿತ್ತು. ನವಜಾತ ಶಿಶು ರಾಜನಿಗೆಂಬಂತೆ ಪ್ರಜೆಗಳಿಗೂ ಸಂತೋಷದಾಯಕವಾಗಿತ್ತು. ನಗರದ

ಬೀದಿಗಳನ್ನು ಅಲಂಕರಿಸಿ ಸ್ತುತಿಗಾನಗಳನ್ನು ಹಾಡಿ ಅವರು ತಮ್ಮ ಸಂತೋಷವನ್ನು ಪ್ರಕಟಗೊಳಿಸಿದರು. ರಾಜಶಿಶುವಿನ ಸುಂದರ ಮುಖವನ್ನು ಒಮ್ಮೆ ದರ್ಶಿಸಿ ಸಂತೃಪ್ತಿಗೊಳ್ಳಲಿಕ್ಕಾಗಿ ದೂರದ ರಾಜ್ಯಗಳಿಂದ ಸಹ ಜನರು ಬರುತ್ತಿದ್ದರು. ಹೀಗೆ ಅಲ್ಲಿ ಸನ್ನಿಹಿತರಾದವರ ಪೈಕಿ ವೇದಶಾಸ್ತ್ರಪಾರಂಗತನೂ ಪಂಡಿತಾಗ್ರೇಸರನೂ ಆಗಿದ್ದ ಅಸಿತಋಷಿ ಸಹ ಇದ್ದನು. ಮಗುವಿನ ಮುಖಾರವಿಂದವನ್ನು ಪ್ರಕಾಶಭರಿತಗೊಳಿಸಿದ ಅಭೌಮ ತೇಜಸ್ಸು ಅಸಿತಋಷಿಯ ಅಂತರ್ದೃಷ್ಟಿಗೆ ಗೋಚರವಾಯಿತು. ಬುದ್ಧನ ಆಕರ್ಷಕವಾದ ಸುಂದರ ಮುಖವನ್ನು ತುಂಬಾ ಹೊತ್ತು ನೋಡಿ ನಿಂತಾಗ ಪಕ್ಕನೆ ಅವರ ಕಣ್ಣುಗಳು ನೀರಿನಿಂದ ತುಂಬಿ, ಮುಖವು ಮ್ಲಾನವಾಯಿತು. ಋಷಿಯ ಈ ಮುಖಭಾವವನ್ನು ಕಂಡು ರಾಜಕುಟುಂಬದವರು ವ್ಯಾಕುಲಗೊಂಡರು. ಶುದ್ಧೋದನ ಮಹಾರಾಜ ಉತ್ಕಂಠತೆಯಿಂದಲೂ ಉದ್ವೇಗದಿಂದಲೂ ವಿಚಾರಿಸಿದನು: "ಸ್ವಾಮಿ, ತಮ್ಮ ಸಂತಾಪದ ಕಾರಣವನ್ನು ತಿಳಿಯುವರೆ ನಮಗೆ ಅತೀವ ಆಶೆ ಇದೆ".

ಅವರು ಹೇಳಿದರು: "ರಾಜಾಗ್ರಿಮಾ, ತಮ್ಮ ಪುತ್ರ ಮನುಷ್ಯರಲ್ಲಿ ಶ್ರೇಷ್ಠನಾಗುವನು. ಆ ಅನುಗ್ರಹೀತ ಕಾಲದಲ್ಲಿ ಈತನ ಧರ್ಮೋಪದೇಶವನ್ನು ಆಲಿಸಲು ನನಗೆ ಸಾಧ್ಯವಿಲ್ಲವಲ್ಲಾ ಎಂದು ನೆನಸಿ ನಾನು ಶೋಕಗೊಂಡೆನು".

ಬುದ್ಧ ಜನಿಸಿದ ಏಳನೆಯ ದಿನದಂದು ಆತನ ಮಾತೆ ಮಾಯಾದೇವಿ ಮೃತ್ಯುವಶಳಾದಳು. ಅದರ ನಂತರ ಮಹಾ ಪ್ರಜಾಪತಿ ಎಂಬೋರ್ವ ಸ್ತ್ರೀರತ್ನ ಆತನ ಪಾಲನೆಪೋಷಣೆ ಮಾಡಿದಳು. ಶ್ರೀಬುದ್ಧ ಯುಕ್ತ ಪ್ರಾಯದಲ್ಲೇ ದಾಂಪತ್ಯ ಜೀವನಕ್ಕೆ ಪ್ರವೇಶಿಸಿ ಸಂತೋಷದಾಯಕವಾದ ಒಂದು ಕುಟುಂಬ ಜೀವಿತವನ್ನು ನಡೆಸಿದರು. ಶ್ರೀಬುದ್ಧ ಮತ್ತು ಧರ್ಮಪತ್ನಿ ಯಶೋಧರಳ ಶಾಂತಪೂರ್ಣವಾದ ದಾಂಪತ್ಯ ಜೀವನದ ಮಧುರ ಫಲ ರಾಹುಲನಾಗಿದ್ದಾನೆ.

## ಬುದ್ಧನ ಗೃಹತ್ಯಾಗ

ಮಹಾತ್ಮ ಬುದ್ಧನ ಯೌವನ ಕಾಲವನ್ನು ಸಂಬಂಧಿಸಿದ ವಸ್ತುನಿಷ್ಠವೂ ಸತ್ಯಸಂಧವೂ ಆದ ಚರಿತ್ರೆ ನಿರ್ಭಾಗ್ಯವಶಾತ್ ನಮಗೆ ಇಷ್ಟರ ತನಕ ಲಭಿಸಿಲ್ಲ. ರೋಗ, ಮುಪ್ಪು, ಶವ ಇತ್ಯಾದಿಗಳನ್ನು ಕಂಡು ಶೋಕಾಕುಲನಾದ ಶ್ರೀಬುದ್ಧ ತನ್ನ ಸಂಬಂಧಿಕರಿಗೆ ಕೂಡ ತಿಳಿಯದ ರೀತಿಯಲ್ಲಿ ಗೃಹವನ್ನು ತ್ಯಜಿಸಿದರೆಂದು ಒಂದು ಕಲ್ಪಿತ ಕಥೆಗೆ ಸರ್ವತ್ರ ಪ್ರಚಾರ ಲಭಿಸಿರುತ್ತದೆ. ಇತ್ತೀಚೆಗೆ ಪ್ರಕಟವಾದ ಹೆಚ್ಚಿನ ಚರಿತ್ರೆ ಗ್ರಂಥಗಳಲ್ಲೂ ಈ ಸಂಭವಕ್ಕೆ ಅನರ್ಹವಾದ ಪ್ರಾಧಾನ್ಯ ನೀಡಲಾಗಿದೆ. ಆದರೆ ಬುದ್ಧನ ಯಥಾರ್ಥ ಚರಿತ್ರೆಗಳಲ್ಲಿ ಕೆಲವನ್ನು ಒಳಗೊಂಡಿರುವ ಪಾಲಿ ಸಾಹಿತ್ಯದ ಪ್ರಾಚೀನ ಗ್ರಂಥಗಳಲ್ಲಿ ಇದರ ಸಂಬಂಧಿಸಿ ಏನೂ ಪ್ರಸ್ತಾಪಿಸಲಾಗಿಲ್ಲ. ಭಾರತವರ್ಷದ ಜನಸಮೂಹಗಳನ್ನು ದುಃಖ-ಕ್ಲೇಶಗಳಿಂದ ವಿಮುಕ್ತಿಗೊಳಿಸಲು ಆಗಮಿಸಿದ ಓರ್ವ ಆಧ್ಯಾತ್ಮಿಕ ಪುರುಷ ತನ್ನ ಸ್ವಂತ ಬಂಧುಗಳನ್ನು ಅನಂತವಾದ ಸಂತಾಪಸಾಗರದಲ್ಲಿ ನೂಕಿ, ಯಾರಿಗೂ ತಿಳಿಯದಂತೆ ಒಂದು ರಾತ್ರಿಯಲ್ಲಿ ಅರಮನೆಯನ್ನು ಬಿಟ್ಟೋಡಿದರು ಎಂದು ನಂಬುವುದು ಪ್ರಯಾಸಕರವಾಗಿದೆ. ಬುದ್ಧಶಾಕ್ಯನ ವ್ಯಾಕುಲಹೇತು ಯಥಾರ್ಥದಲ್ಲಿ ನಶ್ವರವಾದ ಭೌತಿಕ ಶರೀರವನ್ನು ಬಾಧಿಸಿದ ರೋಗ-ಮುಪ್ಪುಗಳಾಗಿರಲಿಲ್ಲ; ಸಮುದಾಯ ಶರೀರವನ್ನು ನಾಶಗೊಳಿಸುತ್ತಿದ್ದ ಆಧ್ಯಾತ್ಮಿಕ ರೋಗ-ಮುಪ್ಪುಗಳಾಗಿದ್ದವು. ಭಾರತವರ್ಷದಲ್ಲಿ ಅಂದಿನ ಕಾಲದಲ್ಲಿ ಗೋಚರವಾಗಿದ್ದ ಅತ್ಯಂತ ದಯನೀಯ ದುಷ್ಕರ್ಮ ಪ್ರವಣತೆಯೂ ಯಜ್ಞಯಾಗ ಹೋಮಾದಿಗಳ ಆಸಕ್ತಿಯೂ ಆ ಮಹಾಪುರುಷನನ್ನು ಚಿಂತಾಕುಲನನ್ನಾಗಿ ಮಾಡಿತು. ಭಾರತದ ಆಧ್ಯಾತ್ಮಿಕ ಹಾಗೂ ನೈತಿಕ ಮಟ್ಟವನ್ನು ಹಾನಿಗೊಳಿಸುತ್ತಿದ್ದ ವಿಶ್ವಾಸಾಚಾರಗಳು ಶ್ರೀಬುದ್ಧನನ್ನು ವ್ಯಸನಾಕ್ರಾಂತನನ್ನಾಗಿ ಮಾಡಿದವು. ಈ ದುಃಸ್ಥಿತಿಯ ವಿಮೋಚನೆಗೆ ಮಾರ್ಗವನ್ನರಸಲು ಹೆಚ್ಚಿನ ಸೌಕರ್ಯ ಮತ್ತು ಸ್ವಸ್ಥತೆಯನ್ನು ಪಡೆಯಲು ಅವರು ಸಂಕೀರ್ಣವಾದ ಕುಟುಂಬ ಬಂಧದಿಂದ ತುಸು ದೂರವಿರಲು ನಿರ್ಬಂಧಿತರಾದರು. ಈ ವಸ್ತುತವನ್ನು ಅವರು ತನ್ನ ಬಂಧುಜನರಿಗೆ ತಿಳಿಸಿದ್ದರು. ಆಧುನಿಕ ಚರಿತ್ರೆಗಾರರಲ್ಲಿ ಕೆಲವರು ಈ ವಾಸ್ತವಿಕತೆಯನ್ನು ಒಪ್ಪಿರುವರು. ಸುಪ್ರಸಿದ್ಧ ಪಂಡಿತರಾದ ಶ್ರೀ ಕಾಕಾ ಕಾಲೇಲ್ಕರ್ ಹೇಳುತ್ತಾರೆ: "ರೋಗ, ಮುಪ್ಪು, ಮರಣಗಳನ್ನು ನೋಡಿ ಆಶ್ಚರ್ಯಚಕಿತನಾದ ಸಿದ್ಧಾರ್ಥ ರಾಜಕುಮಾರ ಅರಮನೆ ಬಿಟ್ಟು ಓಡಿದನೆಂದು ಬುದ್ಧನ ಗೃಹತ್ಯಾಗದ ಕುರಿತು ಈಗ ಪ್ರಚಾರದಲ್ಲಿರುವ ಕಾವ್ಯಮಯ ವೃತ್ತಾಂತ ಕೇವಲ ಕಲ್ಪಿತ ಕಥೆಯಾಗಿದೆ". ಬೌದ್ಧ ಜ್ಞಾನದ ಮೂಲವಾದ ಪಾಲಿ ಸಾಹಿತ್ಯದಲ್ಲಿ ಉತ್ತಮ ಪಾಂಡಿತ್ಯವನ್ನು ಗಳಿಸಿದ ಶ್ರೀ ಧರ್ಮಾನಂದ

ಕೋಸಂಬಿ ಪ್ರಸ್ತಾವಿಸುತ್ತಾರೆ: "ಆದಿಕಾಲದ ಕಥೆಗಳಲ್ಲೂ ಬುದ್ಧಚರಿತ್ರೆ ಕಾವ್ಯಗಳಲ್ಲೂ ಈ ಸಂಭವ (ಗೃಹತ್ಯಾಗ)ದ ಕುರಿತು ವರ್ಣಿಸಲಾಗಿದೆ. ಬೌದ್ಧ ಚಿತ್ರಕಲೆಗಳಲ್ಲೂ ಇದು ಉತ್ತಮ ರೀತಿಯಲ್ಲಿ ಚಿತ್ರಣವಾಗಿದೆ. ಆದರೆ ಇದರಲ್ಲಿ ಏನೂ ವಾಸ್ತವಿಕಾಂಶ ಇಲ್ಲವೆಂದೂ ಇದ್ದರೆ ಸಹ ಅತ್ಯಲ್ಪವೆಂದೂ ತೋರುತ್ತದೆ. ಏಕೆಂದರೆ ಪ್ರಾಚೀನ ಸುತ್ತಗಳಲ್ಲೊಂದರಲ್ಲೂ ಈ ಅಸಂಭಾವ್ಯ ಐತಿಹ್ಯಗಳಿಗೆ ಏನೂ ಆಧಾರ ಸಿಗುವುದಿಲ್ಲ".

ಮೇಲಿನ ಉದ್ಧಾರಣೆಗಳು ಬುದ್ಧನ ಗೃಹತ್ಯಾಗ ಸಂಭವದ ಕಾಲ್ಪನಿಕತೆಯನ್ನು ಸ್ಪಷ್ಟಪಡಿಸುತ್ತವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಮಹಾತ್ಮ ಬುದ್ಧ ಸ್ವತಃ ತನ್ನ ಗೃಹತ್ಯಾಗ ಸಂಭವದ ಕುರಿತು "ಅರಿಯಪರಿಯೇನಸುತ್ತ"ದಲ್ಲಿ ಪ್ರಖ್ಯಾಪಿಸಿದ್ದಾರೆ. ಅದು ಈ ರೀತಿಯಾಗಿದೆ:

"ಎಲೈ ಭಿಕ್ಷುಗಳೇ, ಹೀಗೆ ಆಲೋಚಿಸಿ ಒಮ್ಮೆ, ಅಂದು ನಾನು ಯುವಕನಾಗಿದ್ದರೂ ನನ್ನ ತಲೆಗೂದಲ್ ನರೆತಿರದಿದ್ದರೂ ನಾನು ವಿರಕ್ತನಾದೆನು. ನನ್ನ ಮಾತಾಪಿತರು ನನಗೆ ಒಪ್ಪಿಗೆ ಕೊಡಲಿಲ್ಲ. ಕಣ್ಣುಗಳಿಂದ ಪ್ರವಹಿಸಿದ ಕಣ್ಣೀರಿನಿಂದ ಅವರ ಮುಖ ನೆನೆಯಿತು. ಅವರು ಅತ್ಯಧಿಕ ವಿಲಾಪಿಸಿದರು. ಆದರೂ ನಾನು ಶಿರೋಮುಂಡನಮಾಡಿ ಕಾಷಾಯ ವಸ್ತ್ರ ಧರಿಸಿ ಗೃಹದಿಂದ ನಿರ್ಗಮಿಸಿದೆ".

ಬುದ್ಧನ ತಾಯಿ, ಬುದ್ಧ ಜನಿಸಿ ಕೆಲವು ದಿನಗಳಲ್ಲೇ ಮೃತ್ಯುವಶವಾದುದರಿಂದ ಅವರು ಇಲ್ಲಿ ತಾಯಿಯೆಂದು ಸಂಬೋಧಿಸಿದ್ದು ಸಾಕುತಾಯಿಯಾದ ಮಹಾಪ್ರಜಾಪತಿಯನ್ನು ಕುರಿತಾಗಿದೆ. ಬುದ್ಧನ ಗೃಹತ್ಯಾಗ ಕಥೆ ಬರೇ ಭಾವನಾಪರ ಮಾತ್ರವೆಂದೂ ಅವರು ಎಲ್ಲರೂ ತಿಳಿಯುವಂತೆ ಮನೆಯನ್ನು ತ್ಯಜಿಸಿದರೆಂದೂ ಸಮರ್ಥಿಸಲು ಇದಕ್ಕಿಂತ ಹೆಚ್ಚಿನ ಸಾಕ್ಷ್ಯದ ಅಗತ್ಯವಿದೆಯೆಂದು ತೋರುವುದಿಲ್ಲ. ಮಹಾತ್ಮ ಬುದ್ಧ ಮಾತಾಪಿತರ ಮತ್ತು ಸಹಧರ್ಮಿಣಿಯ ಒಪ್ಪಿಗೆ ಪಡೆದ ನಂತರ ಗೃಹವನ್ನು ತ್ಯಜಿಸಿ ಹೋದುದೆಂದು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ಪ್ರಸ್ತಾಪಿಸಿದ್ದು ಇಲ್ಲಿ ಸ್ಮರಣೀಯವಾಗಿದೆ.

## ದೈವಿಕ ಪ್ರಜ್ಞೆ

ಗೃಹತ್ಯಾಗದ ನಂತರ ಬುದ್ಧನ ಜೀವನದಲ್ಲಿ ನಿರ್ಣಾಯಕವಾದ ಹಲವು ಬದಲಾವಣೆಗಳು ಗೋಚರವಾಯಿತು. ಸಂಕೀರ್ಣವಾದ ಕುಟುಂಬ ವಿಚಾರಗಳಿಂದ ದೂರವಿದ್ದು ಅವರು ಸದಾ ಸಮಯ ಪರಮಾತ್ಮನ ಧ್ಯಾನದಲ್ಲಿಯೂ ಏಕಾಂತಚಿಂತನದಲ್ಲಿಯೂ ಮಗ್ನರಾದರು. ಭಾರತವನ್ನು ಬಾಧಿಸಿದ ಆಧ್ಯಾತ್ಮಿಕ ತೊಡಕುಗಳಿಗೆ ನಿವಾರಣೆಯನ್ನುಂಟುಮಾಡಲು ಪರ್ಯಾಪ್ತವಾದ ಒಂದು ಮಾರ್ಗವನ್ನು ಕಾಣಲು ಅವರು ಆತ್ಮಾರ್ಥವಾಗಿ ಇಚ್ಛಿಸಿದರು. ಗಂಗಾ ನದಿಯ ವಾಯವ್ಯ ಭಾಗದಲ್ಲಿರುವ ಸಸ್ಯಸಮೃದ್ಧವಾದ ವಿಶಾಲ ಪ್ರದೇಶದಲ್ಲಿರುವ ಒಂದು ದೊಡ್ಡ ಬೋಧಿವೃಕ್ಷದಡಿಯಲ್ಲಿ ಸರ್ವಸಂಗ ಪರಿತ್ಯಾಗಿಯಾದ ಏಕಾಂತಧ್ಯಾನಿಯಾಗಿ ಮಹಾತ್ಮ ಬುದ್ಧ ದೀರ್ಘಕಾಲವನ್ನು ಕಳೆದರು. ಅನುಗ್ರಹೀತವಾದ ಈ ಕಾಲದಲ್ಲಿ ಆ ಪುಣ್ಯಪುರುಷ ತನ್ನ ಸಮುದಾಯದ ಆಧ್ಯಾತ್ಮಿಕ ಉನ್ನತಿಗಾಗಿ ಸರ್ವೇಶ್ವರನೊಡನೆ ಹೃದಯ ನೊಂದು ಪ್ರಾರ್ಥಿಸುತ್ತಿದ್ದರು. ಹಾಗೆ ಇರುವಾಗ ಒಂದು ದಿನ ಅವರು ಅಭೌಮವಾದ ಜ್ಞಾನದಿಂದ ಅನುಗ್ರಹೀತರಾದರು. ಹೌದು, ಆ ಮಹಾತ್ಮನಿಗೆ ದೈವಿಕ ಜ್ಞಾನ ಲಭಿಸಿತು. ಭಾರತವರ್ಷದ ನಶಿಸಿ ಹೋದ ಆಧ್ಯಾತ್ಮಿಕ ಯಶಸ್ಸನ್ನು ಪುನಸ್ಥಾಪಿಸಲಿಕ್ಕೂ, ಸತ್ಯಮಾರ್ಗಕ್ಕೆ ಜನರನ್ನು ಆಮಂತ್ರಿಸಲಿಕ್ಕೂ ಅವರು ಆಜ್ಞಾಪಿತರಾದರು. ಈ ದೈವಿಕ ಅನುಜ್ಞೆ ಮೂಲಕ ಶಾಕ್ಯಮುನಿ ಪ್ರವಾದಿತ್ವದ ಪ್ರತ್ಯೇಕ ಸ್ಥಾನಕ್ಕೇರಿದರು.

## ಪ್ರಬೋಧನೆ

ಮಹಾತ್ಮ ಬುದ್ಧ ಸಂಬೋಧಿ ಜ್ಞಾನ ಗಳಿಸಿದ ನಂತರ ದಿವ್ಯವಾದ ಒಂದು ಶಕ್ತಿಯ ಅನುಗ್ರಹದಿಂದ ತನ್ನ ಹೊಸ ಆದರ್ಶಸಂಹಿತೆಯ ದೀವಿಗೆಯನ್ನು ಹಿಡಿದು ಕರ್ಮಧೀರನಾದ ಓರ್ವ ಧರ್ಮಭಟನೆಂಬ ರೀತಿಯಲ್ಲಿ ಸಮೂಹದ ಮಧ್ಯದಲ್ಲಿ ಪ್ರತ್ಯಕ್ಷರಾದರು. ಧರ್ಮದ ಹೆಸರಿನಲ್ಲಿ ಭಾರತೀಯರು ಕೈಗೊಂಡಿದ್ದ ಅಂಧ ವಿಶ್ವಾಸಾಚಾರಗಳಿಗೆ ದುರಾಗಿ ಆ ಮಹಾಪುರುಷ ಶಬ್ದವೆತ್ತಿದರು. ಭೂತ, ಪ್ರೇತ, ಯಕ್ಷ ವಿಶ್ವಾಸವನ್ನೂ ಯಾಗ ಹೋಮ ಪ್ರೇಮವನ್ನೂ ಪರಿತ್ಯಜಿಸಿ ಸತ್ಕರ್ಮಗಳನ್ನು ಗೈಯ್ದು ವಿಕಾರ ವಿಚಾರಗಳನ್ನು ಶುದ್ಧೀಕರಿಸಿ ಪವಿತ್ರವಾದ ಜೀವನವನ್ನು ಕೈಗೊಳ್ಳಲು ಅವರು ಜನರಿಗೆ ಉಪದೇಶಿಸಿದರು. ಪರಮಾತ್ಮನ ಸನ್ನಿಧಿಗೆ ತಲಪುವರೆ ಪರ್ಯಾಪ್ತವಾದ ಸರಳವೂ ಋಜುವೂ ಆದ ಒಂದು ಧರ್ಮಮಾರ್ಗವನ್ನು ತಾನು ಕಂಡುಹಿಡಿದಿದ್ದೇನೆ ಎಂದೂ ಅದರ ಮೂಲಕ ಪ್ರಯಾಣಿಸಿ ಗುರಿಯನ್ನು ತಲಪಿರೆಂದೂ ಅವರು ಜನರೊಡನೆ ಹೇಳಿದರು.

ತನ್ನ ಹೊಸ ಸಿದ್ಧಾಂತಗಳನ್ನು ಶ್ರೀಬುದ್ಧ ಮೊದಲಿಗೆ ಉಪದೇಶಿಸಿದ್ದು ತನ್ನ ಪೂರ್ವಕಾಲ ಸ್ನೇಹಿತರಿಗಾಗಿತ್ತು. ಅವರೆಲ್ಲರೂ ಶಾಕ್ಯಮುನಿಯ ಆದಿಕಾಲ ಜೀವಿತದ ಸೂಕ್ಷ್ಮಚಲನೆಗಳನ್ನು ಅರಿತವರಾಗಿದ್ದರು. ಆದಕಾರಣದಿಂದಲೇ ತನ್ನ ಪರಿಶುದ್ಧ ಜೀವಿತದಲ್ಲಿ ಅತ್ಯಂತ ವಿಶ್ವಾಸವುಂಟೆಂದು ಭರವಸೆಯುಳ್ಳ ಈ ಐದು ಜನರನ್ನು ತನ್ನ ನಂಬಿಕೆಯ ವೃತ್ತಕ್ಕೆ ಪ್ರಥಮವಾಗಿ ತರಲು ಅವರು ಇಚ್ಛಿಸಿದರು. ಪಂಚವರ್ಗೀಯರೆಂದು ಪ್ರಸಿದ್ಧರಾದ ಇವರು ಆ ಕಾಲದಲ್ಲಿ ಕಾಶಿಯಲ್ಲಿ ವಾಸವಾಗಿದ್ದರು. ಮಹಾತ್ಮ ಬುದ್ಧ ತನ್ನ ಆದರ್ಶ ಸಂಹಿತೆಯ ಸಹಿತ ನಗ್ನಪಾದನಾಗಿ ದೀರ್ಘಕಾಲ ನಡೆದ ನಂತರ ಆಷಾಢಪೌರ್ಣಿಮೆಗೆ ಮೊದಲಾಗಿ ಪಂಚವರ್ಗೀಯನ್ನು ಭೇಟಿಯಾದರು.

ಆದರೆ ಅಂದಿನ ಆಚಾರಕರ್ಮಗಳನ್ನು ದೃಢವಾಗಿ ನಂಬಿಕೊಂಡಿದ್ದ ಅವರು ಬುದ್ಧನ ನವೀನ ಧರ್ಮಮಾರ್ಗದ ಕುರಿತು ಶ್ರವಿಸಲು ತಯಾರಾಗಲಿಲ್ಲ. ಅವರು ಬುದ್ಧನೊಡನೆ ಕೇಳಿದರು: "ಗೌತಮನೇ, ನಿಮ್ಮ ಕಠಿಣವಾದ ತಪಸ್ಸಿನಿಂದ ನಿಮಗೆ ಕೂಡ ಸದ್ಧರ್ಮಮಾರ್ಗದ ಬೋಧೆ ಲಭಿಸಿಲ್ಲವಲ್ಲಾ? ಈಗ ನೀವು ತಪೋಭ್ರಷ್ಟನಾಗಿ ಅನ್ನಪಾನಾದಿಗಳಲ್ಲಿ ಶ್ರದ್ಧಾಲು ಆಗಿರುವಿರಿ. ಹಾಗಿರುವಾಗ ನಿಮಗೆ ಸದ್ಧರ್ಮ ಬೋಧೆ ಹೇಗುಂಟಾದೀತು?

ಅದನ್ನು ಕೇಳಿ ಶ್ರೀಬುದ್ಧ ಉತ್ತರಿಸಿದರು: "ಇದಕ್ಕಿಂತ ಮೊದಲು ನಾನು ತಪ್ಪಾದ ರೀತಿಯಲ್ಲಿ ಯಾವಾಗಲಾದರೂ ಏನನ್ನಾದರೂ ಹೇಳಿರುವೆನೇ? ಇಲ್ಲವಾದರೆ ನನ್ನ ಮಾತಿಗೆ ನೀವು ಗಮನಕೊಡಿರಿ. ಅಮೃತತ್ವಕ್ಕಿರುವ ಮಾರ್ಗವನ್ನು ಕಂಡುಹಿಡಿದಿದ್ದೇನೆ. ಈ ಮಾರ್ಗವನ್ನು ಅವಲಂಬಿಸುವುದಾದರೆ ನಿಮಗೆ ಬೇಗನೆ ಮುಕ್ತಿ ಲಭಿಸೀತು".

"ಇದಕ್ಕಿಂತ ಮುಂಚೆ ತಪ್ಪಾಗಿ ಯಾವಾಗಲಾದರೂ ಏನನ್ನಾದರೂ ಹೇಳಿರುವೆನೇ?" ಎಂಬ ಶಾಂತ ಗಂಭೀರವೂ ಅರ್ಥಗರ್ಭಿತವೂ ಆದ ಪ್ರಶ್ನೆಗೆ ಉತ್ತರ ನೀಡಲಾರದೆ ಅವರು ಮೂಕರಾದರು. ಆ ಮಹತ್ತಾದ ಜೀವಿತದಲ್ಲಿ ಪಾಪದ ಸೂಕ್ಷ್ಮ ರೇಖೆಯನ್ನಾಗಲಿ ಕಾಣಲು ಅವರಿಗೆ ಸಾಧ್ಯವಾಗಲಿಲ್ಲ.

ಓರ್ವ ಪ್ರವಾದಿಯ ಸತ್ಯಕ್ಕೆ ಅತ್ಯಂತ ದೊಡ್ಡ ಪುರಾವೆ ಆತನ ಪ್ರವಾದಿತ್ವ ವಾದಕ್ಕೆ ಮೊದಲಿನ ಜೀವಿತವೂ ಪ್ರವರ್ತನೆಯೂ ಆಗಿದೆ ಎಂದು ಪವಿತ್ರ ಖುರ್ಆನ್ ತಿಳಿಸಿಕೊಡುತ್ತದೆ. ಲೋಕದಲ್ಲಿ ಇಂದಿನ ವರೆಗೆ ಆವಿರ್ಭವಿಸಿದ ಎಲ್ಲಾ ಪ್ರವಾದಿಗಳೂ ಅವರ ಸತ್ಯವಾದಕ್ಕೆ ಸಾಕ್ಷ್ಯವಾಗಿ ತಮ್ಮ ಆದಿಕಾಲ ಜೀವಿತದ ಪರಿಶುದ್ಧತೆಯನ್ನು ಎತ್ತಿತೋರಿಸಿರುವರು. ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರು ಮಕ್ಕಾದ ಮುಖಂಡರೊಡನೆ ಕೇಳಿದ್ದು ಸಹ ಇದನ್ನೇ ಆಗಿತ್ತು. (ಖುರ್ಆನ್ 10 : 17). ಶ್ರೀಬುದ್ಧ ಪರಮಾತ್ಮನ ವರಿಷ್ಠದಾಸರಾಗಿದ್ದರೆಂಬುದಕ್ಕೆ ಪ್ರಬಲ ಪುರಾವೆಗಳ ಪೈಕಿ ಇದು ಸಹ ಪ್ರಧಾನವಾದುದಾಗಿದೆ.

ಮಹಾತ್ಮ ಬುದ್ಧ ತನ್ನ ನೂತನ ಧರ್ಮಮಾರ್ಗವನ್ನು ಪಂಚವರ್ಗೀಯರಿಗೆ ಸಾವಕಾಶವಾಗಿ ಹೇಳಿಕೊಟ್ಟರು. ಕ್ರಮೇಣ ಬುದ್ಧ ಹೇಳುವುದರಲ್ಲಿ ಸತ್ಯವುಂಟೆಂದು ಅವರಿಗೆ ಮನವರಿಕೆಯಾಯಿತು. ಹೆಚ್ಚಿನ ಏಕಾಗ್ರತೆಯಿಂದ ಪರಿಚಿಂತನೆ ಮಾಡಿದಾಗ ಬೌದ್ಧ ಸಂದೇಶವು ತಾವಿಷ್ಟರವರೆಗೆ ತಿಳಿದವುಗಳಲ್ಲಿ ಅತ್ಯಂತ ಉದಾತ್ತವಾದುದೆಂದು ಅವರಿಗೆ ತಿಳಿದು, ಹಾಗೆ ಅವರು ಬುದ್ಧನ ಅನುಯಾಯಿಗಳಾದರು. ನಂತರದ ಕಾಲದಲ್ಲಿ ಬುದ್ಧಮತ ಪ್ರಚಾರದಲ್ಲಿ ಪಂಚವರ್ಗೀಯರು ವಹಿಸಿದ ಪಾತ್ರವೂ ಸಹಿಸಿದ ಯಾತನೆಗಳೂ ಅವಿಸ್ಮರಣೀಯ. ಪಾಲಿ ಸಾಹಿತ್ಯದ ಪೌರಾಣಿಕ ಗ್ರಂಥಗಳಲ್ಲಿ ಈ ವಸ್ತುತಗಳು ಉಲ್ಲೇಖಿತವಾಗಿವೆ.

### ಶಾಕ್ಯಮುನಿ ನಾಸ್ತಿಕನೇ?

ಮಹಾತ್ಮ ಬುದ್ಧ ಪರಮಾತ್ಮನೊಡನೆ ನಂಬಿಕೆಯುಳ್ಳವರಾಗಿದ್ದರೋ ಎಂಬುದು ನಿರ್ಭಾಗ್ಯವಶಾತ್ ಇಂದೊಂದು ವಾದವಿಷಯವಾಗಿದೆ. ಪಾಶ್ಚಾತ್ಯ ಪಂಡಿತರಲ್ಲಿ ಒಂದು ಗುಂಪು ಶ್ರೀಬುದ್ಧ ನಾಸ್ತಿಕರಾಗಿದ್ದರು ಎಂಬ ಅಭಿಪ್ರಾಯದವರಾಗಿದ್ದಾರೆ. ಪಾರಸ್ಯ ತ್ತ್ವವಿಜ್ಞಾನಿಗಳಲ್ಲಿ ಪ್ರಾವಿಣ್ಯವನ್ನು ಪಡೆದ ಪಾಶ್ಚಾತ್ಯ ಪಂಡಿತರಾದ ಡಾ। ಮೊನಿಯರ್ ವಿಲ್ಯಂ, ಡಾ। ಮೆನ್ಸಿಸ್ ಎಂಬಿವರು ಶ್ರೀಬುದ್ಧ ಸೃಷ್ಟಿಕರ್ತನ ಅಸ್ತಿತ್ವವನ್ನು ನಂಬಿರಲಿಲ್ಲ ಎಂದು ಹೇಳುತ್ತಾರೆ. ಆದರೆ ಹೆಚ್ಚು ಸಂತಾಪಕರವೇನೆಂದರೆ ಮಹಾತ್ಮ ಬುದ್ಧರ ಅನುಚರರೆಂದು ಅಭಿಮಾನಿಸುವವರ ಪೈಕಿ ದೊಡ್ಡ ಒಂದು ವಿಭಾಗ ತಮ್ಮ ನಾಯಕ ನಾಸ್ತಿಕನಾಗಿದ್ದನು ಎಂದು ನಂಬುವುದಾಗಿದೆ. ಎಂದು ಮಾತ್ರವಲ್ಲ ಇತರ ಮತಗಳಿಗಿಲ್ಲದ ಬುದ್ಧಮತಕ್ಕಿರುವ ವಿಶಿಷ್ಟತೆ ಇದೆಂದು ಸಹ ಹೇಳುವ ಸಾಹಸವನ್ನು ಅವರು ತೋರಿ

ಸುತ್ತಾರೆ. ಆದರೆ ಸಂಶೋಧಕರು ಎಷ್ಟು ಪ್ರಯಾಸಪಟ್ಟರೂ, ಬೌದ್ಧರು ತಮ್ಮ ಉಪದೇಶಕನನ್ನು ದೈವನಿಷೇಧಿಯೆಂದು ಚಿತ್ರೀಕರಿಸಲು ಎಷ್ಟು ಪ್ರಯತ್ನಪಟ್ಟರೂ, ಮಹಾತ್ಮ ಬುದ್ಧ ದೈವವಿಶ್ವಾಸಿಯಾಗಿದ್ದರು ಎಂಬುದು ಸತ್ಯ. ಬುದ್ಧಮುನಿ ಮತ್ತು ಆದಿಕಾಲದ ಶಿಷ್ಯರು ದೇವರ ಅಸ್ತಿತ್ವದಲ್ಲಿ ನಂಬಿಕೆಯುಳ್ಳವರಾಗಿದ್ದರು; ಮಾತ್ರವಲ್ಲ ಅವರ ಸಂಘಟನೆಯ ಅಸ್ತಿವಾರ ಸಹ ಅದೇ ಆಗಿತ್ತು. ಈ ಚರಿತ್ರೆ ಸತ್ಯಕ್ಕೆ ಭಾರತೀಯ ಚಿಂತಕರು ಹಿಂತಿರುಗಲು ತೊಡಗಿರುವರೆಂಬುದು ಆಶ್ವಾಸದಾಯಕವಾಗಿದೆ. ಬೌದ್ಧ ಉಪಾಸಕನಾದ ಕೋಸಂಬಿ ಹೇಳುತ್ತಾರೆ: "ಅವರು (ಶ್ರೀಬುದ್ಧ) ನಾಸ್ತಿಕರೆಂದು ಕೆಲವರು ಹೇಳುತ್ತಾರೆ. ಬೌದ್ಧ ಸಾಹಿತ್ಯವನ್ನಾಗಲೀ ಪ್ರಾಚೀನ ಉಪನಿಷತ್ತುಗಳನ್ನಾಗಲೀ ಪರಿಶೋಧಿಸುವುದಾದರೆ ಈ ಅಭಿಪ್ರಾಯ ತಪ್ಪೆಂದು ಕಾಣಬಹುದು".

ಬುದ್ಧನ ಪ್ರಬೋಧನೆಯ ಕಾಲದಲ್ಲಿ ಭಾರತದ ಬ್ರಾಹ್ಮಣರು ಮೋಕ್ಷಪ್ರಾಪ್ತಿಯ ಮಾರ್ಗವಾಗಿ ಕಠಿಣವಾದ ತಪಸ್ಸು, ನಿರಂತರವಾದ ಯಾಗಹೋಮಾದಿಗಳು ಇತ್ಯಾದಿಗಳನ್ನು ಅಂಗೀಕರಿಸಿದ್ದರು. ಹೋಮಕರ್ಮಗಳಿಗೂ ಯಾಗಗಳಿಗೂ ಗಾತ್ರವ್ಯತ್ಯಾಸಗಳಿದ್ದವು. ಇಂತಿಂತಹ ವಸ್ತುಗಳನ್ನು ಹೋಮಮಾಡಿದರೆ, ಇಂತಿಷ್ಟ ಮೃಗಗಳನ್ನು ಬಲಿಕೊಟ್ಟರೆ ಇಂತಿಂತಹ ಕಾರ್ಯಗಳು ಸಿದ್ಧಿಸುತ್ತವೆಯೆಂದು ಪುರೋಹಿತರು ವಿಧಿಸಿದರು. ರಾಜರು, ಮಧ್ಯಮ ವರ್ಗದವರು, ಜನಸಾಮಾನ್ಯರು, ಮೊದಲಾದವರು ಮಾಡಬೇಕಿದ್ದ ಕರ್ಮಗಳ ಪರಿಮಿತಿಯನ್ನೂ ಅವರು ನಿರ್ಣಯಿಸಿದರು. ಇಂತಹ ವಿಚಿತ್ರವಾದ ಆಚಾರ ಕರ್ಮಗಳನ್ನು ಶ್ರೀಬುದ್ಧ ಮೊತ್ತಮೊದಲಿನಲ್ಲೇ ವಿರೋಧಿಸಿದರು. ತಮ್ಮ ಜೀವಿತೋಪಾದಿಯಾದ ಇಂತಹ ಕಾರ್ಯಗಳಲ್ಲಿ ಶ್ರೀಬುದ್ಧ ಮಧ್ಯಪ್ರವೇಶಿಸುವುದನ್ನು ಸಹಿಷ್ಣುತೆಯಿಂದ ಕಾಣಲು ಅವರಿಗೆ ಸಾಧ್ಯವಾಗಲಿಲ್ಲ. ಆದುದರಿಂದ ಅವರು ಶ್ರೀಬುದ್ಧನನ್ನು ನಾಸ್ತಿಕನೆಂದು ಚಿತ್ರೀಕರಿಸಿದರು. ಸಂದರ್ಭವನ್ನೂ ಸೌಕರ್ಯವನ್ನೂ ನೋಡಿ ಅವರು ಈ ವಿಶ್ವಾಸವನ್ನು ಜನರೆಡೆಯಲ್ಲಿ ಪ್ರಚುರಪಡಿಸಿದರು. ಕಾಲ ಕ್ರಮೇಣ ಈ ವಿಚಾರ ಸಾರ್ವತ್ರಿಕವಾಗಿ ಪ್ರಚಾರಗೊಂಡಿತು. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಶ್ರೀಬುದ್ಧನ ಕುರಿತು ಅಧ್ಯಯನ ಮಾಡಲು ಹೊರಟ ಕೆಲವು ಪಾಶ್ಚಾತ್ಯ ಚರಿತ್ರೆಗಾರರು ಬುದ್ಧನಿಗೆ ವಿರುದ್ಧವಾಗಿ ಬರೆಯಲಾದ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಮಾತ್ರ ಶ್ರೀಬುದ್ಧ ನಾಸ್ತಿಕನೆಂದು ಬರೆದರು. ಆದರೆ ಅಶೋಕನ ಕಾಲದ ವರೆಗೆ ಬುದ್ಧಮತಾನುಯಾಯಿಗಳು ಪರಮಾತ್ಮನನ್ನು ನಂಬಿಕೊಂಡಿದ್ದರು ಎಂಬುದಕ್ಕೆ ಸಾಕ್ಷ್ಯಗಳಿವೆ.

ಬೌದ್ಧ ಸಾಹಿತ್ಯದಲ್ಲಿ ಪ್ರಧಾನವಾದ ಬುದ್ಧ-ವಾಸಿಷ್ಠ ಸಂಭಾಷಣೆಯಲ್ಲಿ ತಥಾಗತನು ಅಂದು ಭಾರತದಲ್ಲಿದ್ದ ವಿಶ್ವಾಸಾಚಾರಗಳೊಂದು ಸಹ ಮೋಕ್ಷಪ್ರಾಪ್ತಿಗೆ ಉಪಯುಕ್ತವಲ್ಲವೆಂದೂ ತಾನು ದೇವರನ್ನೂ ದೇವರ ಸಾಮ್ರಾಜ್ಯವನ್ನೂ ಯಥಾರ್ಥದಲ್ಲಿ ತಿಳಿಯುವುದರಿಂದಾಗಿ ತನ್ನ ಮುಖಾಂತರ ಮಾತ್ರವೇ ದೈವಸಂಪರ್ಕ ಸಾಧ್ಯವೆಂದೂ ಬಹಳ ಸ್ಪಷ್ಟವಾಗಿ ಪ್ರಸ್ತಾವಿಸಿರುವರು.

ಮಹಾತ್ಮ ಬುದ್ಧನ ಅಧ್ಯಾಪನೆ ಅದರ ಯಥಾರ್ಥ ರೂಪದಲ್ಲಿ ಅಧಿಕ ಕಾಲ ಬಾಕಿಯುಳಿಯದಿದ್ದರೂ ಭಾರತದ ಹಲವೆಡೆಗಳಲ್ಲಿ ಹರಡಿಕೊಂಡಿರುವ ಶಿಲಾಲಿಖಿತಗಳಲ್ಲಿ ಅವರ ಯಥಾರ್ಥ ಅಧ್ಯಾಪನೆಗಳಲ್ಲಿ ಕೆಲವನ್ನು ಈಗಲೂ ಕಾಣಲು ಸಾಧ್ಯವಿದೆ. ಕೆಲವು ಚರಿತ್ರೆ ಸಂಶೋಧಕರ ತೀವ್ರ ಪರಿಶ್ರಮದ ಫಲವಾಗಿ ಈ ಶಿಲಾಲಿಖಿತಗಳಲ್ಲಿ ಪರಮಾತ್ಮನ ಕುರಿತು ವಿವರಿಸಲಾಗಿದೆ ಎಂದು ವ್ಯಕ್ತವಾಗಿದೆ. ಇಂತಹ ಎರಡು ಶಿಲಾಲಿಖಿತಗಳು ಆರ್ಥರ್ ಲಿಲ್ಲಿಯ India in Primitive Christianity ಎಂಬ ಗ್ರಂಥದಲ್ಲಿ ಉಲ್ಲೇಖಿತವಾಗಿವೆ. ಅವು ಈ ರೀತಿ ಇದೆ:

"......... ಪರಮಾತ್ಮನನ್ನು ನಂಬಿ ಅವನ ಗುಣಸ್ವಭಾವವನ್ನು ಉದ್ಘೋಷಿಸಿರಿ. ಅನುಸರಣೆಗೂ ವಿಧೇಯತೆಗೂ ಪಾತ್ರವಾಗಿರುವುದು ಅವನ ಸತ್ತೆ ಮಾತ್ರವಾಗಿದೆ. ಸ್ವರ್ಗಪ್ರಾಪ್ತಿಗೋಸ್ಕರ ಈ ನಂಬಿಕೆಗೆ ತುಲ್ಯವಾಗಿ ಬೇರೊಂದು ಮಾರ್ಗವನ್ನು ನಿಮಗೆ ಕಂಡುಹಿಡಿಯಲು ಸಾಧ್ಯವಿಲ್ಲವೆಂದು ನಾನು ನಿಮಗೆ ಬಹಿರಂಗವಾಗಿ ತಿಳಿಯಪಡಿಸಿಕೊಳ್ಳುತ್ತೇನೆ. ಎಲ್ಲೈ ಜನರೇ, ಈ ಅಮೂಲ್ಯ ಸಂಪತ್ತನ್ನು ಕರಗತಮಾಡಲು ನೀವು ಪ್ರಯತ್ನಿಸಿರಿ." (ಪುಟ 85).

ಈ ಉದ್ಧಾರಣೆಯು ಭಾರತದ ಪೂರ್ವತೀರದ ಕಟಕ್ ಪ್ರದೇಶದ ಜಗನ್ನಾಥದಿಂದ 20 ಮೈಲುಗಳಷ್ಟು ದೂರವಿರುವ ಧೂಳಿ ಎಂಬಲ್ಲಿಯ ಶಿಲೆಯಿಂದ ಆಯ್ದುದಾಗಿದೆ. ಇನ್ನೊಂದು 7ನೇ ಕ್ರಮಾಂಕ ಅಶೋಕಶಿಲೆಯಲ್ಲಿರುವುದಾಗಿದೆ. ಅದು ಈ ರೀತಿ ಇದೆ:

"ಪ್ರಿಯದರ್ಶಿರಾಜ (ಅಶೋಕ) ಹೀಗೆ ಅನುಶಾಸಿಸುತ್ತಾನೆ: ಇಂದು ನಾನು ಜನರಿಗೆ ಧರ್ಮವನ್ನು ಉಪ

### ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ:

# ಪೈಗಂಬರರ ಜನನಕಾಲದಲ್ಲಿ ಅರಬ್‌ದೇಶದ ಸ್ಥಿತಿ

ಪೈಗಂಬರರು ಅರೇಬಿಯಾದ ಮಕ್ಕಾ ಎಂಬ ಪಟ್ಟಣದಲ್ಲಿ ಕ್ರಿ. ಶ. 570ನೇ ಅಗೋಸ್ತ್ ತಿಂಗಳಲ್ಲಿ ಜನಿಸಿದರು. ಅವರಿಗೆ ಸ್ತುತಿಸಲ್ಪಟವ ಎಂದರ್ಥವಿರುವ ಮುಹಮ್ಮದ್ ಎಂದು ನಾಮಕರಣ ಮಾಡಲಾಯಿತು. ಅವರ ಜೀವನವನ್ನೂ ಸ್ವಭಾವಗುಣಗಳನ್ನೂ ತಿಳಿಯಲು ಅವರು ಜನಿಸಿದ ಕಾಲದಲ್ಲಿ ಅರಬ್ ದೇಶದ ಸ್ಥಿತಿಯನ್ನೂ ಅಲ್ಲಿ ಪ್ರಚಾರದಲ್ಲಿದ್ದ ಸಾಮೂಹ್ಯ ಜೀವನ ಕ್ರಮಗಳನ್ನೂ ತಿಳಿದುಕೊಳ್ಳಬೇಕಾಗಿರುವುದು ಅಗತ್ಯವಾಗಿದೆ.

ಅವರ ಜನ್ಮಕಾಲದಲ್ಲಿ ಅರಬ್ ದೇಶದ ಸಾಮಾನ್ಯ ಎಲ್ಲಾ ಕಡೆಗಳಲ್ಲೂ ಜನರು ಬಹುದೈವಾರಾಧನೆಯಲ್ಲಿ ಆರಾಧಿಸುವವರೂ ಆಗಿದ್ದರು. ತಮ್ಮ ಕೃತ್ಯವನ್ನು ನ್ಯಾಯೀಕರಿಸಲು ಅವರು ಹೇಳುತ್ತಿದ್ದ ಕಾರಣವು — ದೇವರೊಡನೆ ಸಂಪರ್ಕ ಸ್ಥಾಪಿಸುವುದರಲ್ಲಿ ಕೆಲವು ವ್ಯಕ್ತಿಗಳು ಇತರ ಸಾಮಾನ್ಯ ವ್ಯಕ್ತಿಗಳಿಗಿಂತ ಪ್ರಮುಖರೂ ಶ್ರೇಷ್ಠರೂ ಆಗಿರುತ್ತಾರೆ; ಇತರರಿಗಾಗಿ ಅವರು ಮಧ್ಯಸ್ತಿಕೆ ವಹಿಸಿಕೊಂಡು ಮಾಡುವ ವಿಜ್ಞಾಪನೆಗಳನ್ನು ದೇವರು ಸ್ವೀಕರಿಸುವನು; ಸಾಮಾನ್ಯ ಜನರಿಗಾದರೆ ದೇವರನ್ನು ತಲಪುವುದು ಕಷ್ಟ ಸಾಧ್ಯ. ಆದುದರಿಂದ ಸಾಮಾನ್ಯ ಜನರಿಗೆ ದೇವರ ಸಹಾಯವೂ ತೃಪ್ತಿಯೂ ದೊರೆಯಬೇಕೆಂದಾದರೆ, ಅವರು ಇಂತಹ ಮಧ್ಯವರ್ತಿಗಳನ್ನು

ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ವಿಶ್ವಾಸವುಳ್ಳವರಾಗಿದ್ದರು. ಅರಬರು ಪ್ರವಾದಿ ಇಬ್ರಾಹೀಂ (ಅಬ್ರಹಾಂ)ರವರ ವಂಶದವರೆಂದು ಅವರ ಪಾರಂಪರ್ಯ ದಾಖಲೆಗಳು ಸೂಚಿಸುತ್ತವೆ. ಇಬ್ರಾಹೀಂ (ಅ)ರವರು ಏಕದೈವ ತತ್ವವನ್ನು ಬೋಧಿಸಿದ ಒಬ್ಬ ಮಹಾತ್ಮರೆಂಬುದು ಅವರಿಗೆ ತಿಳಿದಿತ್ತು. ಆದರೂ, ಪೈಗಂಬರರ ಜನ್ಮಕಾಲದಲ್ಲಿ ಅರಬರು ಮೂರ್ತಿಪೂಜೆಯಲ್ಲಿ ವಿಶ್ವಾಸವುಳ್ಳವರೂ ಅನೇಕ ದೇವರುಗಳನ್ನು ಸ್ವೀಕರಿಸಬೇಕಾಗಿರುತ್ತದೆ. ಈ ರೀತಿಯಾಗಿ ಅವರು ತಮ್ಮ ಬಹು ದೈವಾರಾಧನೆಯ ತತ್ವವನ್ನು ಇಬ್ರಾಹೀಂ (ಅ)ರ ಘನತೆಯೊಂದಿಗೆ ಸಂಯೋಜಿಸುತ್ತಿದ್ದರು. ಪ್ರವಾದಿ ಇಬ್ರಾಹೀಂ ಒಬ್ಬ ಸತ್ಪುರುಷನಾಗಿದ್ದುದರಿಂದ ಯಾರ ಮಧ್ಯಸ್ತಿಕೆಯೂ ಕೂಡದೆ ಅವರಿಗೆ ದೇವರನ್ನು ಹೊಂದಲು ಸಾಧ್ಯವಾಯಿತು; ಆದರೆ, ಮಕ್ಕಾದ ಸಾಮಾನ್ಯ ಜನರಿಗೆ ಇದು ಸಾಧ್ಯವಿಲ್ಲವೆಂದು ಅವರು ಹೇಳುತ್ತಿದ್ದರು. ಆದುದ

(9ನೇ ಪುಟದಿಂದ)

ದೇಶಿಸಲು ಏರ್ಪಾಡು ಮಾಡಿ ಮನುಷ್ಯರು ಉಪದೇಶವನ್ನು ಕೇಳುವುದರೊಂದಿಗೆ ಸನ್ಮಾರ್ಗದಲ್ಲಿ ನಡೆಯಲು ತೊಡಗಲಿಕ್ಕೂ ದೇವರ ಮಹತ್ವವನ್ನು ಮತ್ತು ಪ್ರಭಾವವನ್ನು ಘೋಷಿಸಲಿಕ್ಕೂ ಪ್ರೇರಿತರಾಗುವ ರೀತಿಯಲ್ಲಿ ಧರ್ಮಶಾಸನಗಳನ್ನು ಅನುಷ್ಠಾನದಲ್ಲಿ ತರಬೇಕೆಂದು ಇದರ ಮೂಲಕ ಆಜ್ಞಾಪಿಸುತ್ತೇನೆ" (ಪುಟ 86).

ಎಷ್ಟು ಸ್ಪಷ್ಟವಾಗಿ ಮಹಾತ್ಮ ಬುದ್ಧ ಪರಮಾತ್ಮನ ಕುರಿತು ಘೋಷಿಸಿರುವರು ! ಆ ಮಹಾಪುರುಷ ಪರಮಾತ್ಮನ ಓರ್ವ ವರಿಷ್ಠದಾಸನೆಂದೂ ಅವರು ದೇವರ ಅಸ್ತಿತ್ವದಲ್ಲಿ ಪೂರ್ಣವಾಗಿ ವಿಶ್ವಾಸವಿರಿಸಿದ್ದರೆಂದೂ ಜನರಿಗೆ ಅವರು ನೀಡಿದ ಪಾಠ ದೈವಾಸ್ತಿಕ್ಯದ ಕುರಿತಾಗಿದ್ದಿತೆಂದೂ ವ್ಯಕ್ತಪಡಿಸಲು ಇದಕ್ಕಿಂತ ಬೇರಾವ ಪುರಾವೆಗಳು ಬೇಕು ? ಸಹಸ್ರಾಬ್ದಗಳಿಂದ ತಲತಲಾಂತರವಾಗಿ ಗೌರವಿಸಲ್ಪಟ್ಟ ಓರ್ವ ಮಹಾತ್ಮ ಒಮ್ಮೆಗೂ ದೈವನಿಷೇಧಿ ಅಥವಾ ಅಧರ್ಮಿಯಾಗಿರಲು ಸಾಧ್ಯವಿಲ್ಲ. ಕೋಟಿಗಟ್ಟಲೆ ಜನರ ಹೃದಯಂತರಾಳದಲ್ಲಿ ಮುದ್ರೆ ಒತ್ತಲ್ಪಟ್ಟ ಮಹಾತ್ಮ ಬುದ್ಧನ ನಾಮಧೇಯ ಕಾಲಾವಸಾನದ ವರೆಗೆ ಭಕ್ತ್ಯಾದರಗಳಿಂದ ಸ್ಮರಿಸಲ್ಪಡುವುದೆಂಬುದರಲ್ಲಿ ಸಂದೇಹವಿಲ್ಲ. ●

ರಿಂದ ಮಕ್ಕಾದ ಜನರು ಪವಿತ್ರಾತ್ಮರೂ ಸತ್ಪುರುಷರೂ ಆದ ಮಹಾ ವ್ಯಕ್ತಿಗಳ ಮೂರ್ತಿಗಳನ್ನು ಮಾಡಿಟ್ಟು ಅದರ ಮೂಲಕ ದೇವರನ್ನು ತೃಪ್ತಿಪಡಿಸಲಿಕ್ಕಾಗಿ ಅವುಗಳನ್ನು ಪೂಜಿಸುತ್ತಲೂ ತಮ್ಮ ಕಾಣಿಕೆಗಳನ್ನು ಅವುಗಳಿಗೆ ಅರ್ಪಿಸುತ್ತಲೂ ಇದ್ದರು. ಪುರಾತನವಾದ ಈ ಆಚಾರವು ವಿಚಾರವಿರುದ್ಧವೂ ನ್ಯೂನತಾಪೂರ್ಣವೂ ಆಗಿದೆ. ಆದರೆ, ಮಕ್ಕಾದ ಜನರಿಗೆ ಇದರ ಚಿಂತೆಯಿರಲಿಲ್ಲ. ಒಂದು ದೀರ್ಘಕಾಲದಿಂದಲೂ ಅವರೆಡೆಯಲ್ಲಿ ಏಕದೈವ ಪ್ರಬೋಧಕರಾರೂ ಅವತರಿಸದ ಕಾರಣ ಒಮ್ಮೆ ತಲೆಯೆತ್ತಿದ ಬಹುದೈವ ವಿಶ್ವಾಸವು ಪರಿಧಿಯನ್ನು ಭೇಧಿಸಿ ವಿಸ್ತರಿಸ ತೊಡಗಿತ್ತು. ದೇವರ ಸಂಖ್ಯೆಯು ಹೆಚ್ಚುತ್ತಲೂ ಇತ್ತು. ಪ್ರವಾದಿ ಇಬ್ರಾಹೀಂ ಮತ್ತು ಅವರ ಪುತ್ರ ಇಸ್ಮಾಯೀಲ್ ರವರಿಂದ ನಿರ್ಮಿಸಲ್ಪಟ್ಟ ಎಲ್ಲಾ ಮುಸ್ಲಿಮರ ಪವಿತ್ರ ಮಸೀದಿಯೂ ಆರಾಧನಾಲಯವೂ ಆದ 'ಕಅಬಾ'ದಲ್ಲಿಯೇ ಪೈಗಂಬರರ ಜನನಕಾಲದಲ್ಲಿ 360 ವಿಗ್ರಹಗಳಿದ್ದವೆಂದು ಹೇಳಲ್ಪಡುತ್ತದೆ. ಚಾಂದ್ರಮಾನ ಮಾಸದ ಪ್ರತಿಯೊಂದು ದಿವಸವೂ ಒಂದೊಂದು ವಿಗ್ರಹವನ್ನು ಅವರು ಪೂಜಿಸುತ್ತಿದ್ದರೆಂದು ತೋರುತ್ತದೆ. ಅರೇಬಿಯಾದ ಇತರ ಪ್ರಮುಖ ಕೇಂದ್ರಗಳಲ್ಲಿ ಇತರ ವಿಗ್ರಹಗಳೂ ಆರಾಧಿಸಲ್ಪಡುತ್ತಿದ್ದುವು. ಅಂತೂ ಅರೇಬಿಯಾವು ಸಂಪೂರ್ಣ ಮೂರ್ತಿ ಪೂಜೆಯ ವಿಶ್ವಾಸದಲ್ಲಿ ಮುಳುಗಿತ್ತು ಎಂಬುದಾಗಿ ಇದರಿಂದ ತಿಳಿದುಕೊಳ್ಳಬಹುದು.

ಅರಬರು ಉತ್ತಮ ಭಾಷಾಜ್ಞಾನಿಗಳೂ ಮಾತುಗಾರಿಕೆಯಲ್ಲಿ ಅತೀವ ಆಸಕ್ತಿಯುಳ್ಳವರೂ ಆಗಿದ್ದರು. ತಾವು ಮಾತನಾಡುವ ಭಾಷೆಯ ಕುರಿತು ಶ್ರದ್ಧೆಯುಳ್ಳವರೂ ಅದರ ಪುರೋಗತಿಯನ್ನು ಇಚ್ಛಿಸುವವರೂ ಆಗಿದ್ದರು. ಹಾಗಿದ್ದರೂ, ಬುದ್ಧಿಶಕ್ತಿಯಲ್ಲಿ ಅವರು ಹಿಂದುಳಿದಿದ್ದರು. ಚರಿತ್ರೆ, ಭೂಗೋಳ ವಿಜ್ಞಾನ, ಗಣಿತ ಶಾಸ್ತ್ರ ಮೊದಲಾದವುಗಳ ಕುರಿತು ಅವರಿಗೆ ಏನೂ ತಿಳಿದಿರಲಿಲ್ಲ. ಆದರೆ, ಅವರು ಮರುಭೂಮಿಯ ನಿವಾಸಿಗಳಾಗಿದ್ದುದರಿಂದ, ಗುರುತು ಕಲ್ಲುಗಳ ಸಹಾಯವಿಲ್ಲದೆಯೇ ಮರುಭೂಮಿಯಲ್ಲಿ ತಮ್ಮ ದಾರಿಯನ್ನು ಕಂಡುಕೊಳ್ಳಬೇಕಾಗಿದ್ದುದರಿಂದ, ಖಗೋಳ ಶಾಸ್ತ್ರದಲ್ಲಿ ಉತ್ತಮ ಪ್ರಗತಿಯನ್ನು ಹೊಂದಿದ್ದರು. ಸಂಪೂರ್ಣ ಅರಬ್ ದೇಶದಲ್ಲಿ ಒಂದೇ ಒಂದು ಶಾಲೆಯೂ ಇರಲಿಲ್ಲ. ಮಕ್ಕಾ ನಗರದಲ್ಲೇ ಕೇವಲ ಕೆಲವು ವ್ಯಕ್ತಿಗಳು ಮಾತ್ರ ಓದು ಬರಹ ಬಲ್ಲವರಾಗಿದ್ದರೆಂದು ಹೇಳಲ್ಪಡುತ್ತದೆ.

ಧಾರ್ಮಿಕವಾಗಿ ನೋಡುವುದಾದರೆ, ಅರಬರು ವಿರುದ್ಧಾತ್ಮಕ ಗುಣವುಳ್ಳವರಾಗಿದ್ದರು. ಅವರ ನೈತಿಕ ಗುಣಮಟ್ಟವು ಅಧಃಪತನ ಹೊಂದಿದ್ದರೂ ಕೆಲವು ಪ್ರಶಂಸನೀಯ ಗುಣಗಳೂ ಅವರಲ್ಲಿ ಕಂಡು ಬರುತ್ತಿದ್ದುವು. ಅವರು ಅಮಿತವಾಗಿ ಮದ್ಯಸೇವನೆ ಮಾಡುತ್ತಿದ್ದರು. ಕುಡಿದು ಮತ್ತರಾಗಿ ಕಿರಾತರಂತೆ ಓಡಾಡುವುದನ್ನು ಒಂದು ದುರ್ನಡತೆಯೆಂದೇ ಅವರು ತಿಳಿದಿರಲಿಲ್ಲ; ಬದಲಾಗಿ ಅದೊಂದು ಸದ್ಗುಣವೆಂದು ಅವರು ತಿಳಿಯುತ್ತಿದ್ದರು. ಮದ್ಯಪಾನ ಸಮಾರಂಭಗಳನ್ನೇರ್ಪಡಿಸಿ ತನ್ನ ಬಂಧು ಮಿತ್ರಾದಿಗಳನ್ನು ಉಪಚರಿಸುವುದರಲ್ಲಿ ಮಿಗಿಲಾದವನೇ ಅವರ ದೃಷ್ಟಿಯಲ್ಲಿ ಯೋಗ್ಯ ಗೃಹಸ್ಥ. ಪ್ರತಿಯೊಬ್ಬ ಶ್ರೀಮಂತನೂ ದಿನಂಪ್ರತಿ ಕನಿಷ್ಠಪಕ್ಷ ಐದು ಸಲವಾದರೂ ಈ ರೀತಿಯ ಪಾನ ಕೂಟವನ್ನು ಏರ್ಪಡಿಸಬೇಕಿತ್ತು. ಜೂಜಾಟವು ಅವರ ರಾಷ್ಟ್ರೀಯ ಪಂದ್ಯಾಟವಾಗಿತ್ತು. ಆದರೆ, ಅವರು ಅದನ್ನು ಒಂದು ಉತ್ತಮ ಕಲೆಯನ್ನಾಗಿ ಮಾಡಿದ್ದರು. ಧನ ಸಂಪಾದನೆಗೋಸ್ಕರ ಅವರು ಜೂಜಾಟವಾಡುತ್ತಿರಲಿಲ್ಲ. ವಿಜಯಿಯಾದವನು ತನ್ನ ಮಿತ್ರರನ್ನು ಉಪಚರಿಸಿ ಮನರಂಜನೆ ಮಾಡಬೇಕಾಗಿತ್ತು. ಯುದ್ಧದ ವೇಳೆಗಳಲ್ಲಿ ಅವರು ಜೂಜಾಡಿಯೇ ಧನ ಸಂಗ್ರಹ ಮಾಡುತ್ತಿದ್ದರು. ಇಂದು ನಾವು ಕೂಡಾ ಪ್ರೈಜ್‌ಬಾಂಡ್ ವ್ಯವಸ್ಥೆಯ ಮೂಲಕ ಯುದ್ಧ ವೇಳೆಗಳಲ್ಲಿ ಧನ ಸಂಗ್ರಹ ಮಾಡುವ ಸಂಪ್ರದಾಯವನ್ನು ಇಟ್ಟುಕೊಂಡಿದ್ದೇವೆ. ಈ ಹಳೆಯ ಸಂಪ್ರದಾಯವು ಪುನಃ ನಮ್ಮೆಡೆಯಲ್ಲಿ ಚೇತರಿಸಿಕೊಳ್ಳುವಂತೆ ಮಾಡಿದವರು ಯುರೋಪ್ ಮತ್ತು ಅಮೆರಿಕನರಾಗಿದ್ದಾರೆ. ಆದರೆ, ಈ ರೀತಿ ಮಾಡುವುದರಿಂದ ಆಧುನಿಕ ಕಾಲದಲ್ಲೂ ತಾವು ಪುರಾತನ ಅರಬರನ್ನೇ ಅನುಕರಿಸುತ್ತಿದ್ದೇವೆಂಬುದನ್ನು ಅವರು ಮರೆತಿದ್ದಾರೆ. ಯುದ್ಧ ಮಾಡಬೇಕಾಗಿ ಬಂದಾಗ ಅರಬ್ ಗೋತ್ರದವರು ಒಂದು ಜೂಜಾಟ ಸಮಾರಂಭವನ್ನೇ ಏರ್ಪಡಿಸುತ್ತಿದ್ದರು. ಯಾರು ಗೆಲ್ಲುವರೋ ಅವರೇ ಯುದ್ಧದ ಖರ್ಚಿನಲ್ಲಿ ಬಹುದೊಡ್ಡ ಪಾಲನ್ನು ವಹಿಸಬೇಕಾಗಿತ್ತು.

ನಾಗರಿಕ ಜೀವನದ ಸೌಂದರ್ಯದ ಕುರಿತು ಅಂದಿನ ಅರಬರಿಗೆ ಏನೂ ತಿಳಿದಿರಲಿಲ್ಲ. ಅವರ ಮುಖ್ಯ ಕಸುಬು ವ್ಯಾಪಾರವಾಗಿತ್ತು. ಅದಕ್ಕಾಗಿ ಅವರು ಅಬಿಸ್ಸೀನಿಯ, ಸಿರಿಯ, ಪೆಲೆಸ್ತೀನ್, ಭಾರತ ಮೊದಲಾದ ದೂರ ದೇಶಗಳಿಗೂ ತಮ್ಮ ವ್ಯಾಪಾರ ತಂಡಗಳನ್ನು ಕಳುಹಿಸುತ್ತಿದ್ದ

ರು. ಭಾರತದ ಖಡ್ಗಗಳನ್ನು ಅರಬ್ ಶ್ರೀಮಂತರು ಬಹಳವಾಗಿ ಮೆಚ್ಚುತ್ತಿದ್ದರು. ಯೆಮನ್ ಮತ್ತು ಸಿರಿಯಾ ಅವರಿಗೆ ಧರಿಸಲು ಬಟ್ಟೆಬರೆಗಳನ್ನು ಒದಗಿಸುತ್ತಿದ್ದವು. ವ್ಯಾಪಾರ ಕೇಂದ್ರಗಳು ಮುಖ್ಯವಾಗಿ ಪಟ್ಟಣಗಳಾಗಿದ್ದುವು. ಯೆಮನ್ ಮತ್ತು ಉತ್ತರಭಾಗದ ಕೆಲವು ಪ್ರದೇಶಗಳ ಹೊರತು ಅರೇಬಿಯಾದ ಇತರ ಭಾಗಗಳು ಅಲೆದಾಡುವ ಅರಬಿಗಳಿಂದ (Bedouin) ತುಂಬಿಕೊಂಡಿತ್ತು. ಅಲ್ಲಿ ಅವರಿಗೆ ಸ್ಥಿರವಾದ ವಾಸಸ್ಥಾನಗಳಾಗಲೀ ವಸತಿಗಳಾಗಲೀ ಇರಲಿಲ್ಲ. ರಾಜ್ಯವನ್ನು ಗೋತ್ರಗಳು ತಮ್ಮೊಳಗೆ ವಿಭಜಿಸಿಕೊಂಡು ತಮ್ಮ ಪಾಲಿನ ಪ್ರದೇಶಗಳಲ್ಲಿ ಸ್ವೇಚ್ಛೆಯಿಂದ ಅಲೆದಾಡುತ್ತಿದ್ದರು. ಯಾವುದಾದರೂ ಪ್ರದೇಶದಲ್ಲಿ ಜಲಕ್ಷಾಮವುಂಟಾಯಿತೆಂದಾದರೆ ಅಲ್ಲಿನ ಜನರು ಆ ಸ್ಥಳವನ್ನು ಬಿಟ್ಟು ಬೇರೆಡೆಗೆ ಹೋಗಿ ವಾಸಿಸುತ್ತಿದ್ದರು. ಆಡು, ಕುರಿ, ಒಂಟೆ ಇವುಗಳೇ ಅವರ ಪ್ರಧಾನ ಆಸ್ತಿ. ಅವುಗಳ ಉಣ್ಣೆಯನ್ನು ವಸ್ತ್ರಕ್ಕಾಗಿಯೂ ಚರ್ಮವನ್ನು ಡೇರೆಗಳಿಗಾಗಿಯೂ ಅವರು ಉಪಯೋಗಿಸುತ್ತಿದ್ದರು. ಉಪಯೋಗಿಸಿ ಉಳಿದುದನ್ನು ಸಂತೆಗಳಲ್ಲಿ ಮಾರುತ್ತಿದ್ದರು. ಚಿನ್ನ ಮತ್ತು ಬೆಳ್ಳಿಯ ಕುರಿತು ಅವರಿಗೆ ತಿಳಿಯದಿರಲಿಲ್ಲ. ಆದರೆ, ಅದರ ಉಪಯೋಗವು ಬಹಳ ಕಡಿಮೆಯಾಗಿತ್ತು. ಬಡ ಮತ್ತು ಸಾಮಾನ್ಯ ಜನರು ಕವುಡಿ ಮತ್ತು ಪರಿಮಳಯುತವಾದ ಕಾಯಿಗಳಿಂದ ಮಾಡಿದ ಆಭರಣಗಳನ್ನು ಧರಿಸುತ್ತಿದ್ದರು. ಕಲ್ಲಂಗಡಿಯಂತಹ ಹಣ್ಣುಗಳ ಬೀಜಗಳನ್ನು ಶುಚಿ ಮಾಡಿ ಒಣಗಿಸಿ ಅವುಗಳನ್ನು ಹೆಣೆದು ಹಾರ ಮಾಡುತ್ತಿದ್ದರು. ಅರಬ್ ರಾಜ್ಯದಲ್ಲಿಡೀ ಮಿತಿ ಮೀರಿದ ಅಪರಾಧಗಳೂ ದುರಾಚಾರಗಳೂ ನಾಟ್ಯವಾಡುತ್ತಿದ್ದವು. ಕಳ್ಳತನವು ಬಹಳ ಕಡಿಮೆಯಿದ್ದರೂ ದರೋಡೆಯು ಸರ್ವಸಾಮಾನ್ಯವಾಗಿತ್ತು. ಪರಸ್ಪರ ಆಕ್ರಮಿಸಿ ಇದ್ದುದನ್ನು ಕಿತ್ತುಕೊಂಡು ಎದುರಾಳಿಯನ್ನು ನಿರಾಶ್ರಿತನನ್ನಾಗಿ ಮಾಡುವುದು ಜನ್ಮಸಿದ್ಧ ಹಕ್ಕೆಂದು ತಿಳಿಯಲ್ಪಡುತ್ತಿತ್ತು. ಆದರೆ ಅದೇ ವೇಳೆ ಕೊಟ್ಟ ಮಾತನ್ನು ಪಾಲಿಸುವುದರಲ್ಲಿ ಅರಬರು ಇತರ ಜನರಿಗಿಂತ ಮಿಗಿಲಾಗಿದ್ದರು. ಒಬ್ಬ ವ್ಯಕ್ತಿಯು ಒಂದು ಗೋತ್ರದ ಬಳಿಗೆ ಯಾ ಒಬ್ಬ ಶಕ್ತಿವಂತ ಗೋತ್ರನಾಯಕನ ಬಳಿಗೆ ಹೋಗಿ ರಕ್ಷಣೆಯನ್ನು ಯಾಚಿಸಿದನಾದರೆ, ಆ ಗೋತ್ರನಾಯಕನು ಯಾ ಗೋತ್ರದವರು ಆ ವ್ಯಕ್ತಿಗೆ ರಕ್ಷಣೆಯನ್ನೀಯಲು ಸಿದ್ಧವಾಗಿರಬೇಕು. ಇಲ್ಲವಾದರೆ, ಆ ಗೋತ್ರವು ಸಮಸ್ತ ಅರೇಬಿಯಾದಲ್ಲಿ ಕುಲಹೀನವೆಂದು ಪರಿಗಣಿಸಲ್ಪಡುತ್ತಿತ್ತು. ಕವಿಗಳಿಗೆ ಬಹು ದೊಡ್ಡ ಪ್ರಖ್ಯಾತಿ ಇತ್ತು. ರಾಷ್ಟ್ರೀಯ ನಾಯಕರಂತೆ ಅವರೂ ಗೌರವಿಸಲ್ಪಡುತ್ತಿದ್ದರು. ಅವರ ಗೋತ್ರನಾಯಕನು ಮಿಗಿಲಾದ ವಾಕ್ ಸಾಮರ್ಥ್ಯವುಳ್ಳವನೂ ಕವಿತೆಗಳನ್ನು ರಚಿಸಲು ಸಮರ್ಥನೂ ಆಗಿರಬೇಕಿತ್ತು. ಅತಿಥಿ ಸತ್ಕಾರವು ಅರಬ್ ರಾಜ್ಯದಲ್ಲಿ ಪ್ರಗತಿ ಹೊಂದಿದ ಒಂದು ಸದ್ಗುಣವಾಗಿತ್ತು. ಒಂದು ಗೋತ್ರದ ಮುಖ್ಯ ಪಟ್ಟಣಕ್ಕೆ ಯಾರಾದರೂ ನಿರ್ಗತಿಕ ಯಾತ್ರಿಕನು ತಲಪಿದನೆಂದಾದರೆ, ಅವರು ಅವನನ್ನು ಅತಿಥಿಯಂತೆ ಗೌರವಿಸುತ್ತಿದ್ದರು. ಅವನೊಡನೆ ಉತ್ತಮ ರೀತಿಯಲ್ಲಿ ವರ್ತಿಸುತ್ತಿದ್ದರು. ಆಗಂತುಕನು ಯಾರೆಂಬುದು ಅವರಿಗೆ ಪ್ರಶ್ನೆಯಲ್ಲ. ಬಂದವನು ಯಾರಾದರೂ ಸರಿಯೇ, ಅವನನ್ನು ಉತ್ತಮ ರೀತಿಯಲ್ಲಿ ಉಪಚರಿಸುವುದು ಅವರ ಸ್ವಭಾವವಾಗಿತ್ತು. ಒಂದು ಗೋತ್ರದ ಬಳಿಗೆ ಹೊರಗಿನ ಯಾರಾದರೂ ಬರುವುದೆಂದರೆ ಆ ಗೋತ್ರಕ್ಕೆ ಅದೊಂದು ಅಭಿಮಾನದ ಸಂಗತಿ. ಆದುದರಿಂದ ಅತಿಥಿಗಳನ್ನು ಅತಿ ಗೌರವದಿಂದ ಕಾಣಬೇಕಾದುದು ತಮ್ಮ ಕರ್ತವ್ಯವೆಂದು ಅವರು ತಿಳಿಯುತ್ತಿದ್ದರು.

ಅಂದಿನ ಅರಬ್ ಸಮಾಜದಲ್ಲಿ ಮಹಿಳೆಯರಿಗೆ ಯಾವರೀತಿಯ ಪದವಿಯೂ ಹಕ್ಕೂ ಇರಲಿಲ್ಲ. ಹೆಣ್ಣು ಶಿಶುಗಳನ್ನು ಕೊಲ್ಲುವುದು ಹಿರಿಮೆಯೆಂದು ತಿಳಿಯುವವರೂ ಸಹ ಅವರೆಡೆಯಲ್ಲಿದ್ದರು. ಈ ರೀತಿಯ ಶಿಶುಹತ್ಯಾ ಸಂಪ್ರದಾಯವು ರಾಷ್ಟ್ರದಲ್ಲಿಡೀ ಪ್ರಚಾರದಲ್ಲಿತ್ತೆಂದು ತಿಳಿಯುವುದು ತಪ್ಪು. ಇಂತಹ ಅಪಾಯಕರವಾದ ಆಚಾರವು ರಾಷ್ಟ್ರದಾದ್ಯಂತ ವಿಸ್ತರಿಸಿರಲು ಸಾಧ್ಯವಿಲ್ಲ. ಅಂತಾದರೆ, ಅದರ ಅರ್ಥವು ಜನಾಂಗವೇ ನಿರ್ಮೂಲವಾಯಿತೆಂದಾಗುವುದಿಲ್ಲವೇ ? ನಿಜ ಸ್ಥಿತಿಯೇನೆಂದರೆ, ಅರೇಬಿಯಾದಲ್ಲಾಗಲೀ, ಶಿಶುಹತ್ಯೆಯು ಪ್ರಯೋಗದಲ್ಲಿದ್ದ ಇನ್ನಾವುದೇ ರಾಜ್ಯದಲ್ಲಾಗಲೀ ಅದು (ಕೇವಲ) ಕೆಲವು ಪ್ರತ್ಯೇಕ ಕುಟುಂಬಗಳಲ್ಲಿ ಮಾತ್ರವೇ ಪರಿಮಿತವಾಗಿತ್ತು. ಅರಬರೆಡೆಯಲ್ಲಿ ಇದನ್ನು ರೂಢಿಮಾಡಿಕೊಂಡಿದ್ದ ಕುಟುಂಬದವರು ಸಮಾಜದಲ್ಲಿ ತಮ್ಮ ಪದವಿಯ ಕುರಿತು ಒಂದು ರೀತಿಯ ಉತ್ಪ್ರೇಕ್ಷಾಭಾವನೆಯನ್ನಿಟ್ಟುಕೊಂಡವರೋ ಅಥವಾ ಇನ್ನಾವುದೇ ರೀತಿಯಲ್ಲಿ ನಿರ್ಬಂಧಕ್ಕೊಳಗಾದವರೋ ಆಗಿರಬಹುದು. ಬಹುಶಃ ಮಗಳಿಗೆ ಯೋಗ್ಯವರನನ್ನು ಕಂಡುಕೊಳ್ಳುವುದು ಪ್ರಯಾಸವೆಂದು ನೆನಸಿಯೇ ಅವರು ತಮ್ಮ ಹೆಣ್ಣು ಶಿಶುಗಳನ್ನು ಕೊಲ್ಲುತ್ತಿದ್ದರು. ಕ್ರೂರತನ ಮತ್ತು ಅನಾಗರಿಕತೆಯೇ ಈ ಸಂಪ್ರದಾಯದಲ್ಲಿದ್ದ

ಕೆಡುಕೇ ಹೊರತು ಅದು ರಾಷ್ಟ್ರದ ಜನಸಂಖ್ಯೆಯ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆಯೆಂಬುದಲ್ಲ. ಜೀವಂತ ಹೂಳಿಡುವುದು, ಕುತ್ತಿಗೆ ಹಿಚುಕುವುದು ಮೊದಲಾದ ವಿವಿಧ ಕ್ರಮಗಳಿಂದ ಹೆಣ್ಣು ಶಿಶುಗಳನ್ನು ಅವರು ಕೊಲ್ಲುತ್ತಿದ್ದರು.

ಅರಬ್ ಸಮಾಜದಲ್ಲಿ ನಿಜವಾದ ತಾಯಿಯನ್ನು ಮಾತ್ರವೇ ಮಾತೆಯೆಂದು ಪರಿಗಣಿಸುತ್ತಿದ್ದರು. ಮಲತಾಯಿಗೆ ಮಾತೆಯ ಸ್ಥಾನವಿರಲಿಲ್ಲ; ಮಾತ್ರವಲ್ಲ, ತಂದೆಯ ಮರಣಾನಂತರ ಮಲತಾಯಿಯನ್ನು ಮದುವೆಯಾಗುವುದು ಸಹ ಅವರೆಡೆಯಲ್ಲಿ ವಿರೋಧಿಸಲ್ಪಟ್ಟಿರಲಿಲ್ಲ. ಬಹುಪತ್ನಿತ್ವವು ಸರ್ವಸಾಮಾನ್ಯವಾಗಿತ್ತು. ಒಬ್ಬನು ತನಗೆ ಇಷ್ಟವಿರುವಷ್ಟು ಪತ್ನಿಯರನ್ನು ಮದುವೆಯಾಗಬಹುದಾಗಿತ್ತು. ಒಬ್ಬನೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸಹೋದರಿಯರನ್ನು ಸಹ ಏಕಕಾಲದಲ್ಲಿ ಪತ್ನಿಯರನ್ನಾಗಿ ಸ್ವೀಕರಿಸಬಹುದಿತ್ತು.

ಯುದ್ಧ ವೇಳೆಗಳಲ್ಲಿ ವಿರೋಧಿಗಳು ಪರಸ್ಪರ ಅತಿ ನೀಚತನದಿಂದ ವರ್ತಿಸುತ್ತಿದ್ದರು. ಹೆಚ್ಚಿನ ಹಗೆತನವಿದ್ದರೆ, ಗಾಯಗೊಂಡು ಬಿದ್ದ ಶತ್ರುವಿನ ಶರೀರವನ್ನು ಸೀಳಿ ನರಭಕ್ಷಕರಂತೆ ಅದರ ಕೆಲವು ಭಾಗಗಳನ್ನು ತೆಗೆದು ತಿನ್ನುವುದಕ್ಕೂ ಅವರು ಹೇಸುತ್ತಿರಲಿಲ್ಲ. ಮೃತ ಶತ್ರುವಿನ ಅಂಗಾಂಗಗಳನ್ನು ಕತ್ತರಿಸುವುದು ಸಹ ಅವರ ಪಾಡಿಕೆಯಾಗಿತ್ತು. ಮೂಗು ಅಥವಾ ಕಿವಿಗಳನ್ನು ಕತ್ತರಿಸುವುದು ಇಲ್ಲವೇ ಕಣ್ಣುಗಳನ್ನು ಕಿತ್ತು ತೆಗೆಯುವುದು ಇತ್ಯಾದಿ ಕ್ರೂರತನವು ಸಾಮಾನ್ಯವಾಗಿ ರೂಢಿಯಲ್ಲಿತ್ತು. ಗುಲಾಮಗಿರಿಯು ಸರ್ವತ್ರ ಪ್ರಚಲಿತವಾಗಿತ್ತು. ಅಶಕ್ತ ಗೋತ್ರದವರನ್ನು ಸೆರೆಹಿಡಿದು ಗುಲಾಮರನ್ನಾಗಿ ಮಾಡುತ್ತಿದ್ದರು. ಗುಲಾಮರಿಗೆ ಯಾವ ತರದ ಅಂಗೀಕೃತ ಹಕ್ಕುಗಳೂ ಇರಲಿಲ್ಲ. ಯಜಮಾನರಿಗೆ ಗುಲಾಮರೊಡನೆ ತಮಗಿಷ್ಟಕಂಡ ರೀತಿಯಲ್ಲಿ ವರ್ತಿಸಬಹುದಿತ್ತು. ತನ್ನ ಗುಲಾಮನನ್ನು ಹಿಂಸಿಸಿದ ಯಜಮಾನನನ್ನು ಕೇಳುವವರಿರಲಿಲ್ಲ. ಗುಲಾಮನನ್ನು ಕೊಂದರೂ ಸಹ ಯಜಮಾನ ಪ್ರಶ್ನಿಸಲ್ಪಡುತ್ತಿರಲಿಲ್ಲ. ಒಬ್ಬ ಯಜಮಾನನು ಇನ್ನೊಬ್ಬನ ಗುಲಾಮನನ್ನು ಕೊಂದರೂ ಕೂಡಾ ಘಾತಕನಿಗೆ ಮರಣದಂಡನೆಯು ವಿಧಿಸಲ್ಪಡುತ್ತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ಕೊಲ್ಲಲ್ಪಟ್ಟ ಗುಲಾಮನ ಯಜಮಾನನಿಗೆ ನಷ್ಟ ಪರಿಹಾರವನ್ನು ನೀಡಿದರೆ ಸಾಕು. ರತಿಸುಖವನ್ನು ಪಡೆಯಲು ಸ್ತ್ರೀಯರನ್ನು ದಾಸಿಯರನ್ನಾಗಿ ಇಟ್ಟುಕೊಳ್ಳುತ್ತಿದ್ದರು. ದಾಸಿಯರಲ್ಲಿ ಜನಿಸಿದ ಮಕ್ಕಳನ್ನು ಗುಲಾಮರನ್ನಾಗಿಯೇ ಕಾಣುತ್ತಿದ್ದರು. ಮಕ್ಕಳಿಗೆ ಜನ್ಮವಿತ್ತ ದಾಸಿಯು ಮತ್ತೂ ದಾಸಿಯಾಗಿಯೇ ಉಳಿಯುತ್ತಿದ್ದಳು. ಒಟ್ಟಿನಲ್ಲಿ ಹೇಳುವುದಾದರೆ, ನಾಗರಿಕತೆ ಮತ್ತು ಸಾಮಾಜಿಕ ಪ್ರಗತಿಯಲ್ಲಿ ಅಂದಿನ ಅರಬರು ಬಹಳ ಹಿಂದುಳಿದಿದ್ದರು. ಪರಸ್ಪರ ದಯೆ ಮತ್ತು ಅನುಕಂಪವೆಂಬುದು ಅವರಿಗೆ ತಿಳಿದೇ ಇರಲಿಲ್ಲ. ಮಹಿಳೆಯರು ಅತ್ಯಂತ ಕೀಳು ದರ್ಜೆಯಲ್ಲಿದ್ದರು. ಆದರೂ ಕೂಡಾ, ಅರಬರಲ್ಲಿ ಕೆಲವು ಒಳ್ಳೆಯ ಗುಣಗಳೂ ಇದ್ದವು. ಉದಾಹರಣೆಗೆ, ವೈಯಕ್ತಿಕ ಪರಾಕ್ರಮ ಮತ್ತು ಧೈರ್ಯ; ಅದು ಕೆಲವೊಮ್ಮೆ ಅತ್ಯುನ್ನತ ಮಟ್ಟವನ್ನೂ ತಲಪುತ್ತಿತ್ತು.

ಈ ರೀತಿಯ ಒಂದು ಜನ ಸಮುದಾಯದೆಡೆಯಲ್ಲಿ ಇಸ್ಲಾಂ ಧರ್ಮದ ಪ್ರವಾದಿ ಜನ್ಮ ತಾಳಿದರು. ಅವರ ಜನನದ ಮೊದಲೇ ತಂದೆ ಅಬ್ದುಲ್ಲ ಮರಣ ಹೊಂದಿದರು. ಹಾಗೆ, ಮಗುವನ್ನೂ ತಾಯಿ ಆಮಿನಾರನ್ನೂ ರಕ್ಷಿಸುವ ಭಾರ ತಾತನಾದ ಅಬ್ದುಲ್ ಮುತ್ತಲಿಬ್ ವಹಿಸಿಕೊಂಡರು. ತಾಇಫ್‌ಗೆ ಸಮೀಪ ವಾಸಿಸುವ ಒಬ್ಬ ಗ್ರಾಮೀಣೆ ಶಿಶು ಮುಹಮ್ಮದ್‌ನಿಗೆ ಮೊಲೆಯುಣಿಸಿದರು. ಎಳೆಗೂಸುಗಳನ್ನು ಗ್ರಾಮಾಂತ ಪ್ರದೇಶದ ಸ್ತ್ರೀಯರಿಗೆ ಒಪ್ಪಿಸಿ ಅವರಿಂದ ಮೊಲೆಯುಣ್ಣಿಸುವುದು ಅಂದಿನ ಅರಬ್ ದೇಶದ ಸಂಪ್ರದಾಯವಾಗಿತ್ತು. ಅವರು ಆ ಮಗುವನ್ನು ಚೆನ್ನಾಗಿ ಪಳಗಿಸಿ, ತಮ್ಮ ಭಾಷೆಯನ್ನೂ ಕಲಿಸಿ, ಶಾರೀರಿಕ ಬೆಳವಣಿಗೆಗೆ ಉತ್ತಮವಾದೊಂದು ಆರಂಭವನ್ನು ಹಾಕಿ ರಕ್ಷಕರಿಗೆ ಹಿಂದಿರುಗಿಸುತ್ತಿದ್ದರು. ಮುಹಮ್ಮದ್‌ರಿಗೆ ಆರು ವರ್ಷ ಪ್ರಾಯವಾದಾಗ ತಾಯಿ ಆಮಿನಾ ನಿಧನರಾದರು. ಮದೀನದಿಂದ ಮಕ್ಕಾದ ಯಾತ್ರೆಮಾಡುತ್ತಿದ್ದಾಗ ಅವರ ಮರಣ ಸಂಭವಿಸಿದ್ದು ದಾರಿಮಧ್ಯದಲ್ಲೇ ದಫನಮಾಡಲಾಯಿತು. ಒಬ್ಬ ಸೇವಕಿಯು ಮಗುವನ್ನು ಮಕ್ಕಾಗೆ ಕರೆತಂದು ತಾತನಿಗೆ ಒಪ್ಪಿಸಿದಳು. ಅವರ 8ನೆಯ ವಯಸ್ಸಿನಲ್ಲಿ ತಾತ ಅಬ್ದುಲ್ ಮುತ್ತಲಿಬ್ ಸಹ ಈ ಲೋಕ ಯಾತ್ರೆಯನ್ನು ಮುಗಿಸಿದರು. ನಂತರ, ತಾತನ ಮೃತಪತ್ರದ ಪ್ರಕಾರ ಚಿಕ್ಕಪ್ಪನಾದ ಅಬೂ ತಾಲಿಬ್ ಮಗುವಿನ ರಕ್ಷಣೆಯನ್ನು ವಹಿಸಿಕೊಂಡರು.

ಅರೇಬಿಯಾದಿಂದ ಹೊರಗೆ ಪ್ರಯಾಣಮಾಡುವ ಎರಡೋ ಮೂರೋ ಸಂದರ್ಭಗಳು ಪೈಗಂಬರರಿಗೆ

ದೊರೆತ್ತಿದ್ದುವು. ಅವುಗಳಲ್ಲಿ ಒಂದು, ತನ್ನ 12ನೆಯ ವರ್ಷ ಪ್ರಾಯದಲ್ಲಿ ಅಬೂತಾಲಿಬ್‌ರ ಸಂಗಡ ಸಿರಿಯಾಕ್ಕೆ ಮಾಡಿದ ಪ್ರಯಾಣ. ಆ ಯಾತ್ರೆಯಲ್ಲಿ ಅವರು ಸಿರಿಯಾದ ಆಗ್ನೇಯ ಭಾಗದಲ್ಲಿದ್ದ ಪಟ್ಟಣಗಳಿಗೆ ಮಾತ್ರವೇ ಹೋಗಿದ್ದರೆಂದು ತೋರುತ್ತದೆ. ಕಾರಣ, ಈ ಯಾತ್ರೆಯ ಕುರಿತಾದ ಚಾರಿತ್ರಿಕ ದಾಖಲೆಗಳಲ್ಲಿ ಜೆರುಸಲೇಮಿನಂತಹ ಪಟ್ಟಣಗಳ ಹೆಸರು ಉಲ್ಲೇಖಿಸಲ್ಪಟ್ಟಿಲ್ಲ. ಅದರ ನಂತರ ಯೌವನದ ವರೆಗೂ ಅವರು ಮಕ್ಕಾದಲ್ಲಿಯೇ ಇದ್ದರು. ಅವರು ಚಿಕ್ಕಂದಿನಿಂದಲೇ ವಿಚಾರ ಮಗ್ನರೂ ಧ್ಯಾನಾಸಕ್ತರೂ ಆಗಿದ್ದರು. ಇತರರ ತಂಟೆ ತಕರಾರುಗಳಲ್ಲಿ, ಅದನ್ನು ನೀಗಿಸುವ ಉದ್ದೇಶದಿಂದಲ್ಲದೆ ಅವರು ಮಧ್ಯ ಪ್ರವೇಶಿಸುತ್ತಿರಲಿಲ್ಲ.

ಅದೇ ಸಮಯದಲ್ಲಿ, ನಿತ್ಯಶಾಶ್ವತವಾದ ರಕ್ತಹಗೆಯಿಂದ ಪರೀಕ್ಷಿಸಲ್ಪಟ್ಟು ಬೇಸತ್ತ ಮಕ್ಕಾದ ಮತ್ತು ಸುತ್ತುಮುತ್ತಲಿನ ಜನರು, ಆಕ್ರಮಣಕ್ಕೂ ಅನ್ಯಾಯಕ್ಕೂ ಬಲಿಯಾಗಿ ದುಃಖ ಪಡುವವರಿಗೆ ಸಹಾಯ ಮಾಡಲಿಕ್ಕಾಗಿ ಒಂದು ಸಂಘವನ್ನು ರೂಪೀಕರಿಸಲು ತೀರ್ಮಾನಿಸಿದ್ದರೆಂದು ಹೇಳಲಾಗುತ್ತಿದೆ. ಪೈಗಂಬರರು ಇದರ ಕುರಿತು ತಿಳಿಯುತ್ತಲೇ ಸಂತೋಷದಿಂದ ಅದರಲ್ಲಿ ಸೇರಿಕೊಂಡರು. ಆ ಸಂಘದ ಸದಸ್ಯರ ಪ್ರತಿಜ್ಞೆಯ ಕುರಿತು ಈ ರೀತಿ ಉಲ್ಲೇಖಿಸಲ್ಪಟ್ಟಿದೆ:

> ಸಮುದ್ರದ ನೀರಿನಲ್ಲಿ ಒಂದು ಬಿಂದು ಸಹ ಉಳಿದಿರುವ ತನಕ ಅವರು ಅಸಹಾಯಕರಿಗೂ ಪೀಡನೆಗೊಳಗಾದವರಿಗೂ ಸಹಾಯ ಮಾಡುವರು: ಅವರ ಹಕ್ಕುಗಳನ್ನು ಸಂರಕ್ಷಿಸುವರು. ಹಾಗೆ ಮಾಡಲು ಸಾಧ್ಯವಾಗದಿದ್ದಲ್ಲಿ ತಮ್ಮ ಸ್ವಂತ ಸಂಪತ್ತಿನಿಂದ ಅನ್ಯಾಯಕ್ಕೊಳಗಾದವರಿಗೆ ಪ್ರತಿಫಲವನ್ನೀಯುವರು.
>
> [ರೌದುಲ್ ಉನುಫ್–ಇಮಾಂ ಸುಹೈಲಿ]

ಶಾಸ್ತ್ರೋಕ್ತವಾಗಿ ಸ್ವೀಕರಿಸಿದ ಈ ಪ್ರತಿಜ್ಞಾವಿಧಿಯನ್ನು ಅನುಷ್ಠಾನಕ್ಕೆ ತರಲು ಆ ಸಂಘದ ಇತರ ಸದಸ್ಯರ‍್ಯಾರಿಗೂ ಸಂದರ್ಭ ಲಭಿಸಿದುದಾಗಿ ತಿಳಿದು ಬರುವುದಿಲ್ಲ. ಆದರೆ, ಪ್ರವಾದಿವರ್ಯರು ತನ್ನ ದಿವ್ಯ ಸಂದೇಶವನ್ನು ಬಹಿರಂಗವಾಗಿ ಸಾರಿದಾಗ ಅವರಿಗೆ ಇಂತಹ ಒಂದು ಸಂದರ್ಭವು ಲಭಿಸಿತು. ಮಕ್ಕಾದ ಮುಖಂಡನೂ ಅಧಿಪತಿಯೂ ಆಗಿದ್ದ ಅಬೂಜಹಲ್ ಪೈಗಂಬರರ ಕಠಿಣ ಶತ್ರುವಾಗಿದ್ದ. ಪೈಗಂಬರರನ್ನು ಸಮಾಜದಿಂದ ಬಹಿಷ್ಕರಿಸಬೇಕೆಂದೂ ಅವರನ್ನು ಜನರು ನಿಂದಿಸಬೇಕೆಂದೂ ಅಬೂಜಹಲ್ ಆಜ್ಞೆ ಹೊರಡಿಸಿದ್ದ. ಆ ಸಮಯದಲ್ಲಿ ಮಕ್ಕಾದ ಹೊರಗಿನಿಂದ ಒಬ್ಬ ವ್ಯಕ್ತಿ ಅಲ್ಲಿಗೆ ಆಗಮಿಸಿದ. ಅಬೂಜಹಲ್‌ನಿಂದ ಆತನಿಗೆ ಸ್ವಲ್ಪ ಹಣ ಸಲ್ಲಬೇಕಾಗಿತ್ತು; ಆದರೆ ಅಬೂಜಹಲ್ ಅದನ್ನು ಕೊಡಲು ನಿರಾಕರಿಸಿದ. ಆತನು ಆ ವಿವರವನ್ನು ಮಕ್ಕಾದ ಜನರೊಡನೆ ಹೇಳಿಕೊಂಡನು. ಇದನ್ನು ಕೇಳಿದ ಕೆಲವು ಯುವಕರು ಬರೇ ಕಿರುಕುಳಮಾಡುವ ಉದ್ದೇಶದಿಂದ ಆತನೊಡನೆ ಪೈಗಂಬರರ ಬಳಿಗೆ ಹೋಗಿ ವಿವರ ತಿಳಿಸುವಂತೆ ಹೇಳಿದರು. ಎಲ್ಲರೂ ಶತ್ರುಗಳಾಗಿದ್ದುದರಿಂದ, ಅಲ್ಲದೆ ಅಬೂಜಹಲ್ ತನ್ನ ಕಠಿಣ ವಿರೋಧಿಯಾಗಿದ್ದುದರಿಂದ ಇದಕ್ಕೆ ಹೆದರಿ ಪೈಗಂಬರರು ಆ ವ್ಯಕ್ತಿಗೆ ಏನೂ ಸಹಾಯ ಮಾಡಲಾರರು ಎಂಬುದು ಅವರ ಊಹೆಯಾಗಿತ್ತು. ಆತನಿಗೆ ಸಹಾಯ ಮಾಡಲು ಅವರು ನಿರಾಕರಿಸುವರಾದರೆ, ಸಂಸ್ಥೆಯ ಕರಾರನ್ನು ಪಾಲಿಸುವಲ್ಲಿ ವಿಫಲರಾದರೆಂದು ಅವರ ಕುರಿತು ಹೇಳಬಹುದೆಂದೂ, ಅಥವಾ ಒಂದು ವೇಳೆ ಆ ವ್ಯಕ್ತಿಗೆ ಸಹಾಯ ಮಾಡಲಿಕ್ಕಾಗಿ ಅಬೂಜಹಲ್‌ನ ಬಳಿಗೆ ಹೋಗಿ ಸಾಲದ ಪಾವತಿ ಮಾಡಲು ಪೈಗಂಬರರು ಹೇಳುವುದಾದರೆ, ಖಂಡಿತವಾಗಿಯೂ ಅಬೂಜಹಲ್ ಅವರನ್ನು ಅಪಮಾನಿಸಿ ಕಳುಹಿಸುವನೆಂದೂ ಅವರು ತಿಳಿದಿದ್ದರು. ಅಂತೂ, ಆ ವ್ಯಕ್ತಿಯು ಪೈಗಂಬರರ ಬಳಿಗೆ ಬಂದು ಅಬೂಜಹಲ್‌ನ ಕುರಿತು ದೂರು ಸಲ್ಲಿಸಿದನು. ಪೈಗಂಬರರು ಸ್ವಲ್ಪವೂ ಅನುಮಾನಿಸದೆ, ಒಡನೆಯೇ ಆ ವ್ಯಕ್ತಿಯೊಂದಿಗೆ ಅಬೂಜಹಲನ ಮನೆಗೆ ಬಂದು ಬಾಗಿಲು ತಟ್ಟಿದರು. ಅಬೂಜಹಲ್ ಹೊರಗೆ ಬಂದು ನೋಡಿದಾಗ ತನ್ನ ಸಾಲಗಾರನು ಪೈಗಂಬರರೊಂದಿಗೆ ನಿಂತಿದ್ದ. ಪೈಗಂಬರರು ಆ ಸಾಲದ ಕುರಿತು ಹೇಳುತ್ತಾ ಅದರ ಪಾವತಿಗಾಗಿ ನಿರ್ದೇಶಿಸಿದರು. ಅಬೂಜಹಲ್ ಭಯ ವಿಹ್ವಲನಾಗಿ, ಯಾವ ನೆಪವನ್ನೂ ಹೇಳದೆ ಒಡನೆಯೇ ಸಾಲವನ್ನು ತೀರಿಸಿದ. ಇದರ ಕುರಿತು ಮಕ್ಕಾದ ಇತರ ಪ್ರಮುಖರು ತಿಳಿದಾಗ, ಅಬೂಜಹಲ್ ಎಷ್ಟೊಂದು ಬಲಹೀನನೂ ಸ್ವೋಕ್ತಿವ್ಯಾಘಾತನೂ ಆಗಿದ್ದಾನೆಂದು ದೂರಿದರು. ಆತನೇ ಪೈಗಂಬರರಿಗೆದುರಾಗಿ ಸಾಮೂಹ್ಯ ಬಹಿಷ್ಕಾರವನ್ನು ಹೊರಡಿಸಿ ಈಗ ಆತನೇ ಪೈಗಂಬರರ ನಿರ್ದೇಶ ಪ್ರಕಾರ ತನ್ನ ಸಾಲಗಾರನಿಗೆ ಹಣವನ್ನು ಪಾವತಿ ಮಾಡಿರುವನು. ಆ ವೇಳೆಯಲ್ಲಿ ಇತರ ಯಾವನೇ ವ್ಯಕ್ತಿಯೂ ಅದೇ ರೀತಿ ಮಾಡುತ್ತಿದ್ದನೆಂದು ಹೇಳಿ ಅಬೂಜಹಲ್ ತನ್ನ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"………ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದುಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ.

"………ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ.

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

# ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: **60** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ


ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

(14ನೇ ಪುಟದಿಂದ)

ಕೃತ್ಯವನ್ನು ಸಮರ್ಥಿಸಿಕೊಂಡನು. ಪೈಗಂಬರರು ತನ್ನ ಬಾಗಿಲ ಬಳಿ ನಿಂತಿರುವುದನ್ನು ಕಂಡಾಗ ಅವರ ಎರಡು ಪಾರ್ಶ್ವಗಳಲ್ಲೂ ಎರಡು ಕ್ರೂರ ಒಂಟೆಗಳು ತನ್ನನ್ನು ಆಕ್ರಮಿಸಲು ತಯಾರಾಗಿ ನಿಂತಿರುವುದನ್ನು ಸಹ ಕಂಡೆನೆಂದು ಅವನು ಅವರೊಡನೆ ಹೇಳಿದನು. ಈ ಅನುಭವವು ಏನಾಗಿತ್ತೆಂದು ಹೇಳಲು ಸಾಧ್ಯವಿಲ್ಲ. ಅದು, ಅಬೂಜಹಲ್‌ನನ್ನು ಬುಡ ಮೇಲಾಗಿಸಲು ತೋರಿಸಲ್ಪಟ್ಟ ಒಂದು ಅದ್ಭುತಕರವಾದ ದೃಶ್ಯವಾಗಿರಬಹುದೇ? ಅಥವಾ ಪೈಗಂಬರರ ಭಯಭರಿತ ಸಾನ್ನಿಧ್ಯವು ಅವನಲ್ಲಿ ಈ ರೀತಿಯ ಒಂದು ಚಿತ್ತ ಭ್ರಮೆಯನ್ನುಂಟುಮಾಡಿರ ಬಹುದೇ? ಪಟ್ಟಣದ ಎಲ್ಲರಿಂದಲೂ ದ್ವೇಷಿಸಲ್ಪಡುವ ಮತ್ತು ಪೀಡಿಸಲ್ಪಡುತ್ತಿರುವ ಒಬ್ಬ ವ್ಯಕ್ತಿ, ಒಬ್ಬಂಟಿಗ ನಾಗಿ ಆ ಪಟ್ಟಣದ ನಾಯಕನ ಬಳಿ ಹೋಗಿ ಸಾಲವನ್ನು ತಿಳಿಸುವಂತೆ ನಿರ್ದೇಶಿಸಿದ ಆ ಅನಿರೀಕ್ಷಿತ ದೃಶ್ಯವೇ ಒಂದು ಗಳಿಗೆ ಅಬೂಜಹಲ್‌ನನ್ನು ಭಯಭೀತನಾಗುವಂತೆ ಮಾಡಿ, ಪೈಗಂಬರರಿಗೆದುರಾಗಿ ಮಾಡಿದ ಪ್ರತಿಜ್ಞೆಯನ್ನು ಮರೆತು ಅವರು ಹೇಳುತ್ತಿರುವಂತೆ ಮಾಡಲು ನಿರ್ಬಂಧಿಸಿರ ಬಹುದು. (ಹಿಶಾಮ್)

# ಯೇಸುವನ್ನು ದಫನ ಮಾಡಿದ್ದು ಎಲ್ಲಿ?

—ಗುಲಾಮ್‌ನಬಿ ಖಯಾಲ್.



ಯೂಸ್ ಆಸಫರ ಸಮಾಧಿ

ಯೇಸುಕ್ರಿಸ್ತರು ಶಿಲುಬೆಯ ಮೇಲೆ ಮರಣ ಹೊಂದಿಲ್ಲ; ಆಕಾಶಕ್ಕೆ ಏರಿ ಹೋಗಲೂ ಇಲ್ಲ. ಅವರು ಕಾಶ್ಮೀರಕ್ಕೆ ಪ್ರಯಾಣಿಸಿ ಅಲ್ಲಿ ಕೆಲವು ಕಾಲ ವಾಸಿಸಿ, ನಂತರ ನೈಸರ್ಗಿಕವಾದ ಮೃತ್ಯುವನ್ನಪ್ಪಿದರು. ಶ್ರೀನಗರದ ಒಳಭಾಗದಲ್ಲಿ ಜನನಿಬಿಡವಾದ ಖಾನ್‌ಯಾರ್‌ನ ರಾಸಾಬಾಲಿನಲ್ಲಿ ಅವರನ್ನು ದಫನ ಮಾಡಲಾಗಿದೆ. ಅಸಂಖ್ಯಾತ ವಿದೇಶಿಯರು ಈ ಸಮಾಧಿಗೆ ಭೇಟಿ ನೀಡುತ್ತಿದ್ದಾರೆ.

ಇಂಡಿಯಾದಲ್ಲಿ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ (1835-1908) ಈ ತತ್ವವನ್ನು 1899ರಲ್ಲಿ ಮಸೀಹ್ ಹಿಂದುಸ್ತಾನ್ ಮೇ' (Jesus in India) ಎಂಬ ತನ್ನ ಗ್ರಂಥದಲ್ಲಿ ಮೊತ್ತಮೊದಲಿಗೆ ಪ್ರತಿಪಾದಿಸಿದರು. ಕ್ರಿಸ್ತನ ಮರಣಕ್ಕೆ ಸಂಬಂಧಿಸಿದ ಸಾರ್ವತ್ರಿಕವಾದ ವಿಶ್ವಾಸವನ್ನು ಪ್ರಶ್ನಿಸಿ ಅವರು ಪಂಥಾಹ್ವಾನ ಒಡ್ಡಿದರು. ಈ ತತ್ವವನ್ನು ಅವರ ಶಿಷ್ಯರಾದ ಮುಫ್ತಿ ಮುಹಮ್ಮದ್ ಸಾದಿಖ್ ('ಖಬ್‌ರೆ ಮಸೀಹ್'-1936), ಖ್ವಾಜಾ ನಜೀರ್ ಅಹ್ಮದ್ (Jesus in Heaven on Earth-1951), ಲಂಡನ್ ಮಸೀದಿಯ ಮಾಜಿ ಇಮಾಂ ಮೌಲಾನಾ ಜಲಾಲುದ್ದೀನ್ ಶಮ್ಸ್ (Where did Jesus Die?*-1945)ಎಂಬಿವರು ವಿಶದೀಕರಿಸಿದರು. ಹಾಗಿದ್ದರೂ ಈ ಸಿದ್ಧಾಂತವು ಸಂಶಯಾತೀತವಾಗಿ ಸಮರ್ಥಿಸಲ್ಪಟ್ಟಿದೆ ಎಂದು ಹೇಳಲಾಗದು. ಅಧಿಕೃತವಾದ ಚಾರಿತ್ರಿಕ ಸಾಕ್ಷ್ಯಗಳಿಂದ ಇದನ್ನು ಸ್ಪಷ್ಟಪಡಿಸಬೇಕಾಗಿದೆ.

ತಮ್ಮ ಸಂಘಟನೆಯ ಸ್ಥಾಪಕರಾದ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿಯನ್ನು ವಾಗ್ದತ್ತ ಮಸೀಹಾ (ಯೇಸುವಿನ ಪ್ರತಿಪುರುಷ) ಎಂದು ಅಹ್ಮದಿಯರು ನಂಬುತ್ತಾರೆ. ಯೇಸು ಮೃತಪಟ್ಟು 19 ಶತಮಾನಗಳು ಕಳೆದ ನಂತರ ಭಾರತದಲ್ಲಿ ಜನಿಸಿದ ಅವರು

---

*ಯುಗರಶ್ಮಿಯ ಪುಸ್ತಕ ವಿಭಾಗದಲ್ಲಿ ಇದರ ಭಾಷಾಂತರ ಪ್ರಕಟವಾಗುತ್ತಿದೆ. —ಸಂಪಾದಕ.

ಈ ಭೂಖಂಡದಲ್ಲೇ ಮೃತಿಹೊಂದಿದರು. ಯೇಸು ಕಾಶ್ಮೀರದಲ್ಲಿ ಮರಣ ಹೊಂದಿರುವರೆಂದು ಲೋಕದಲ್ಲೆಲ್ಲಾ ಪ್ರಚಾರಪಡಿಸಲು ಅಹ್ಮದಿಯಾ ಸಂಘದವರು ಬಹಳ ಪ್ರಯತ್ನಪಡುತ್ತಾರೆಂಬುದು ಸರ್ವವಿದಿತ. ಅಮೃತಸರಕ್ಕೆ ಸಮೀಪ ಮಿರ್ಜಾ ಖಾದಿಯಾನಿ ಈಸಾನಬಿಯ ಪ್ರತಿ ಪುರುಷರಾಗಿ ಜನ್ಮವೆತ್ತಿದರೆಂದು ಅವರು ನಂಬುತ್ತಾರೆ. ಈ ವಿಶ್ವಾಸದ ಆಧಾರದಲ್ಲಿ, ಮುಹಮ್ಮದ್ ಪೈಗಂಬರ್ ಅಂತ್ಯಪ್ರವಾದಿಯೆಂದು ಮುಸ್ಲಿಮರೆಡೆಯಲ್ಲಿ ಪ್ರಚಾರದಲ್ಲಿ ರುವ ವಿಶ್ವಾಸವನ್ನು ಮಿರ್ಜಾ ಖಾದಿಯಾನಿಯ ಅನುಯಾಯಿಗಳು ಅಂಗೀಕರಿಸುವುದಿಲ್ಲ. ಆ ಕಾರಣ ದಿಂದಾಗಿ ಅವರನ್ನು ಪಾಕಿಸ್ತಾನದಲ್ಲಿ ಅಮುಸ್ಲಿಮರೆಂದು ಪ್ರಖ್ಯಾಪಿಸಲಾಗಿದೆ.

ಶ್ರೀನಗರದ ರೌಸಾಬಾಲಿನಲ್ಲಿರುವ ಪುಣ್ಯಕುಟೀರವು ಯೂಸ್‌ಆಸಫರ ಸಮಾಧಿಯಾಗಿದೆಯೆಂದು ಹೇಳಲ್ಪಡುತ್ತದೆ. ಈ ಯೂಸ್‌ಆಸಫ್ ಯಾರು? ಕಾಶ್ಮೀರದ ಪ್ರಥಮ ಚರಿತ್ರೆಗಾರನಾದ ಮುಲ್ಲಾ ನಾದಿರಿ 'ತಾರೀಖೆ ಕಾಶ್ಮೀರ್' ಎಂಬ ಗ್ರಂಥದಲ್ಲಿ ಈ ರೀತಿ ಬರೆದಿರುತ್ತಾರೆ. ''ರಾಜ ಗೋಪದತ್ತನ ಕಾಲದಲ್ಲಿ (ಕ್ರಿ. ಶ. 49-109) ಬೈತುಲ್ ಮುಖ್‌ದಸ್‌ನಿಂದ (ಪೆಲೆಸ್ತೀನದಿಂದ) ಈ ಪವಿತ್ರ ಕಣಿವೆಗೆ ಬಂದ ಹಝ್ರತ್ ಯೂಸ್ ಆಸಫ್ ತಾನು ಪ್ರವಾದಿ ಎಂದು ವಾದಿಸಿದರು. ಆ ಮಹಾತ್ಮ ರಾತ್ರಿ ಹಗಲೆನ್ನದೆ ಪ್ರಾರ್ಥನೆಯಲ್ಲಿ ಮಗ್ನರಾಗಿರುತ್ತಿದ್ದರು. ಮತಭಕ್ತಿಯ ಹಾಗೂ ಸದ್ಗುಣದ ಉನ್ನತ ಸ್ಥಾನವನ್ನು ತಲುಪಿದ ಅವರು ತಾನು ಕಾಶ್ಮೀರದ ಜನರಿಗಾಗಿ ದೇವರಿಂದ ನಿಯುಕ್ತರಾದ ಓರ್ವ ದೂತನೆಂದು ಘೋಷಿಸಿದರು ....... ಈ ಪ್ರವಾದಿ ಹಝ್ರತ್ ಈಸಾ ರೂಹುಲ್ಲಾ (ದೈವಾತ್ಮನಾದ ಯೇಸು) ಆಗಿದ್ದರೆಂದೂ ಅವರು ಯೂಸ್ ಆಸಫ್ ಎಂಬ ಹೆಸರನ್ನು ಸ್ವೀಕರಿಸಿದರೆಂದೂ ಹಿಂದೂಮತಸ್ಥರ ಒಂದು ಪವಿತ್ರ ಗ್ರಂಥದಲ್ಲಿ ನಾನು ಕಂಡಿರುವೆನು. ಅಕ್ಬರ್ ರಾಜನ ಅರಮನೆಯ ವಿಶ್ರುತ ಕವಿಯಾಗಿದ್ದ ಅಬುಲ್ ಫಝುಲ್ ಫೈಝಿ ಸಹ ಯೇಸುವನ್ನು ಯೂಸ್ ಎಂದೂ ಕ್ರಿಸ್ತ ಎಂದೂ ಕರೆದಿರುವರು''.

ಯೇಸು ಸ್ವದೇಶದಿಂದ ವಲಸೆಹೋಗಬೇಕಾಗಿ ಬಂದಾಗ, ತನ್ನನ್ನು ವೈರಿಗಳು ಗುರುತಿಸಿ ಹಿಂಬಾಲಿಸಿ ಬರದಂತೆ ಯೂಸ್ ಆಸಫ್ ಎಂಬ ಗುಪ್ತನಾಮವನ್ನು ಸ್ವೀಕರಿಸಿರಬಹುದೆಂದು ನಂಬುವುದು ಅಸಂಗತವಲ್ಲ. ಬೈಬಲ್ ಸಹ ಇದನ್ನು ನ್ಯಾಯೀಕರಿಸುತ್ತದೆ. ತನ್ನ ಜೀವ ಅಪಾಯದಲ್ಲಿದೆಯೆಂದು ಕಂಡಾಗ ಅವರು ಅಜ್ಞಾತ ಸ್ಥಳ ಗಳಲ್ಲೂ ಪರ್ವತಗಳ ಮೇಲೆಯೂ ಅಭಯವನ್ನು ಪಡೆದರು. ಅವರನ್ನು ವಧಿಸಲಿಕ್ಕಾಗಿ ಒಂದು ಗುಂಪು ಜನರು ಅವರನ್ನು ಹಿಂಬಾಲಿಸುತ್ತಿದ್ದರು. ಯಹೂದರು ಅವರನ್ನು ಕೊಲ್ಲುವರೆ ಪ್ರಯತ್ನಿಸುತ್ತಿದ್ದರು (ಯೋಹಾನ' 5 : 16, 7 : 19). ಈ ಅಪಾಯದ ಕುರಿತು ಯೇಸುವಿಗೆ ತಿಳಿದಿತ್ತು. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ. ''ಮರಿಯಮಳ ಮಗನನ್ನೂ ಆತನ ತಾಯಿಯನ್ನೂ ನಾವು ಒಂದು ಸಂಕೇತವನ್ನಾಗಿ ಮಾಡಿರುವೆವು; ಹಾಗೂ ಫಲಪುಷ್ಪವೂ ಶುದ್ಧಜಲ ಸಮೃದ್ಧವೂ ಆಗಿರುವ ಒಂದು ಉನ್ನತ ಪ್ರದೇಶದಲ್ಲಿ ಅವರೀರ್ವರಿಗೂ ಅಭಯವನ್ನು ನೀಡಿರುವೆವು". (23 : 50). ಯೇಸು ಜೆರೂಸಲೇಮಿನಿಂದ ದೇಶಾಂತರ ಹೊರಟಾಗ ಮಾತೆಯು ಅವರ ಜೊತೆಗೂಡಿದ್ದರು ಎಂದು ಇದು ಸೂಚಿಸುತ್ತದೆ. ಮರಿಯಂ ದಾರಿಮಧ್ಯೆ ಮೃತಪಟ್ಟಾಗ ಮರ್ರೀ (Murree) ಎಂಬ ಸ್ಥಳದಲ್ಲಿ ದಫನಮಾಡಲಾಯಿತು. ಮರ್ರೀ ಎಂಬ ಸ್ಥಳವು ರಾವಲ್ಪಿಂಡಿ — ಶ್ರೀನಗರ ದಾರಿಯಲ್ಲಿದೆ. Jammoo and Kashmir Territories ಎಂಬ ಪುಸ್ತಕದಲ್ಲಿ ಡ್ರ್ಯೂ (Drew) ಈ ವಸ್ತುತವನ್ನು ಹೀಗೆ ದೃಢೀಕರಿಸಿರುತ್ತಾರೆ: ''ಮರ್ರೀ ಎಂಬ ಪಟ್ಟಣ ಮೇರಿ (Mary) ಎಂಬ ನಾಮಧೇಯದಿಂದ ಉದ್ಭವಿಸಿದೆ. ಕ್ರಿ. ಶ. 1875ರ ವರೆಗೆ ಈ ಸ್ಥಳವು ಮೇರಿ ಎಂದು ತಿಳಿಯಲ್ಪಡುತ್ತಿತ್ತು. ಯೇಸು ಇಸ್ರಾಯೀಲ್ ಸಂತತಿಗಳಿಗಾಗಿ ಕಳುಹಿಸಲ್ಪಟ್ಟ ಓರ್ವ ಪ್ರವಾದಿಯಾಗಿದ್ದರೆಂದು ಪವಿತ್ರ ಖುರ್‌ಆನ್ ಹೇಳುತ್ತದೆ (3 : 49). ಇಸ್ರಾಯೀಲರ ಹತ್ತು ಗೋತ್ರಗಳು ಕಾಶ್ಮೀರಕ್ಕೆ ಬಂದು ಅಲ್ಲಿ ವಾಸಿಸಲು ತೊಡಗಿದ್ದರೆಂದು ಇತಿಹಾಸ ಹೇಳುತ್ತದೆ. ಹಾಗಿರುವಾಗ, ಯೇಸು ಅಲ್ಲಿಗೆ ಬಂದು ಶಾಂತಿ, ಪ್ರೀತಿ ಮತ್ತು ಸಹೋದರತೆಯ ಸಂದೇಶವನ್ನು ''ಇಸ್ರಾಯೀಲ್ ಮಕ್ಕಳಿಗೆ'' ಉಪದೇಶಿಸಿದರು. ಹಾಗೆ ಬೆಳ್ಳಿ ಪ್ರವಾಹಗಳು ಹರಿಯುವ ಕಣಿವೆ, ಮಂಜು ಮುಸುಕಿದ ಪರ್ವತಗಳು ಮತ್ತು ಫಲಪುಷ್ಪಗಳ ನಾಡಾದ ಕಾಶ್ಮೀರ ಇಸ್ರಾಯೀಲ್ ಸಂತತಿಗಳ ವಾಗ್ದತ್ತ ಭೂಮಿಯಾಯಿತು.

'ಹಳೆಯ ಒಡಂಬಡಿಕೆ'ಯಲ್ಲಿ ಹೇಳಲಾದ ಐದು ಸ್ಥಳಗಳಲ್ಲಿ ವಾಗ್ದತ್ತ ಭೂಮಿಯಾದ ಬೇತ್‌ಪುರಿ (Bethpeor)ನ ಅರ್ಥ ತೆರೆಯುವ ಸ್ಥಳ ಎಂದಾಗಿದೆ.

ಜೀಲಂ ನದಿಗೆ ಪರ್ಶಿಯನ್ ಭಾಷೆಯಲ್ಲಿ ಬೇತ್ ಎಂದೂ ಕಾಶ್ಮೀರಿ ಭಾಷೆಯಲ್ಲಿ ವೇತ್ ಎಂದೂ ಹೆಸರಿದೆ. ಬೇತ್‌ಪುರ್ ಜೀಲಂ ನದಿಯ ದಂಡೆಯಲ್ಲಿದ್ದ ಒಂದು ಸ್ಥಳದ ಹಳೆಯ ಹೆಸರಾಗಿರಬಹುದು. 'ರಾಜತರಂಗಿಣಿ' ಅನುಸಾರ ಬಂಡಿಪುರಕ್ಕೆ (Bandipur) ಬೇತ್‌ಪುರ ಎಂದು ಹೆಸರಿತ್ತು. ಇಲ್ಲಿಂದ ಕಾಶ್ಮೀರ ಕಣಿವೆ ಆರಂಭಿಸುತ್ತದೆ. ಜೀಲಂ ನದಿ ಒಂದು ಎಡೆಯಿಂದ ವುಲರ್ (Wular) ಕಣಿವೆಗೆ ಹರಿಯುವುದು ಸಹ ಇಲ್ಲಿಂದಲೇ ಆಗಿದೆ. ಕಾಶ್ಮೀರದ ಬೇತ್‌ಪುರ್ ಯೇಸು ಇಸ್ರಾಯೀಲ್ ಸಂತತಿಗಳಿಗೆ ಉಪದೇಶಿಸಲು ಆಯ್ದ ವಾಗ್ದತ್ತ ಭೂಮಿಯಾಗಿದ್ದಿತೆಂದು ತಿಳಿದುಕೊಳ್ಳಲು ಪ್ರಯಾಸವಿಲ್ಲ.

ವ್ಯಾಸಮಹರ್ಷಿ ರಚಿಸಿದ (ಕ್ರಿ. ಶ. 115) ''ಭವಿಷ್ಯ ಮಹಾಪುರಾಣ'' ಎಂಬ ಸಂಸ್ಕೃತ ಗ್ರಂಥದಲ್ಲಿ, ಶಾಲಿವಾಹನ ರಾಜನು ಒಮ್ಮೆ (ಸುಮಾರು ಕಿ. ಶ. 78ರಲ್ಲಿ) ಹಿಮಾಲಯ ಪರ್ವತದ ಮೇಲೇರಿದ್ದನೆಂದು ಬರೆಯಲಾಗಿದೆ. ಬಿಳಿ ವಸ್ತ್ರಧಾರಿಯಾದ ಶ್ವೇತವರ್ಣದ ಉತ್ತಮಕುಲದ ಓರ್ವ ವ್ಯಕ್ತಿಯನ್ನು ರಾಜನು ಅಲ್ಲಿ ಕಂಡನು. ತಾವು ಯಾರೆಂದು ಆ ವ್ಯಕ್ತಿಯೊಡನೆ ಶಾಲಿವಾಹನ ರಾಜ ಕೇಳಿದನು. ''ನನ್ನನ್ನು ಕನ್ಯೆಗೆ ಹುಟ್ಟಿದ ಈಶಪುತ್ರ ಎಂದು ತಿಳಿ. ಸತ್ಯಮಾರ್ಗದಲ್ಲಿ ನಾನು ಚಲಿಸುವವನಾಗಿದ್ದೇನೆ." ಎಂದು ಉತ್ತರ ಲಭಿಸಿತು. ಆ ಮಹಾತ್ಮನ ಮತ ಯಾವುದೆಂದು ರಾಜ ಕೇಳಿದನು. ಅದಕ್ಕೆ ''ಮಹಾರಾಜ, ಸತ್ಯ ಅಪ್ರತ್ಯಕ್ಷಗೊಂಡಾಗ ನಾನಲ್ಲಿ ಪ್ರತ್ಯಕ್ಷನಾದೆನು. ನನ್ನ ಮುಖಾಂತರ ಅಪರಾಧಿಗಳೂ ದುಷ್ಟರೂ ಕಷ್ಟವನ್ನನುಭವಿಸಬೇಕಾಯಿತು. ಅವರ ಕೈಗಳಿಂದ ನಾನು ಸಹ ಕಷ್ಟವನ್ನನುಭವಿಸಬೇಕಾಯಿತು'' ಎಂದು ಉತ್ತರ ಸಿಕ್ಕಿತು.

ಧರ್ಮವಿಶ್ವಾಸದ ಕುರಿತು ವಿವರಿಸಲಿಕ್ಕಾಗಿ ಅಗತ್ಯಪಡಿಸಿದಾಗ ಆ ಮಹಾತ್ಮ ಹೀಗೆಂದರು: ''ಪ್ರೀತಿ, ಸತ್ಯ ಮತ್ತು ಹೃದಯಶುದ್ಧಿ ನನ್ನ ಧರ್ಮವಾಗಿದೆ. ಆದುದರಿಂದ ನನ್ನನ್ನು ಈಸಾ ಮಸೀಹ್ (ಯೇಸುಕ್ರಿಸ್ತ) ಎಂದು ಕರೆಯುತ್ತಾರೆ.'' ಆ ಪುಣ್ಯಾತ್ಮರಿಗೆ ವಂದಿಸಿದ ನಂತರ ರಾಜ ಅಲ್ಲಿಂದ ಹಿಂತಿರುಗಿದನು.

ಯೇಸುವಿನ ಸಮಾಧಿ ಎಂದು ಕರೆಯಲ್ಪಡುವ ರೌಸಾಬಾಲಿನ ಶಿಲಾಕುಟೀರವನ್ನು ಅಗೆದು ನೋಡುವುದಾದರೆ ಈ ಸಿದ್ಧಾಂತದ ನಿಜತ್ವವೂ ವಿಶ್ವಸನೀಯತೆಯೂ ದೃಢೀಕರಿಸಲ್ಪಡುತ್ತಿತ್ತು. ಹಾಗೆ ಅಗೆದು ನೋಡುವುದಾದರೆ (excavation) ಅಲ್ಲಿ ಸಿಕ್ಕಿದ ಅವಶಿಷ್ಟಗಳನ್ನು ಆಧುನಿಕ ಸಂಶೋಧನೆಗೆ ಗುರಿಪಡಿಸಲಿಕ್ಕೆ ಸಾಧ್ಯವಾದೀತು.* ಆದರೆ ಇದು ಪ್ರಶ್ನೆಯಾಗಿದೆ: ಪಾರಂಪರ್ಯ ಮುಲ್ಲಾಗಳ ಪ್ರಭಾವಕ್ಕೆ ಒಳಗಾಗಿ ಬೆಳೆದು ಬಂದ ಆ ಪ್ರದೇಶದ ಸಾಮಾನ್ಯ ಮುಸ್ಲಿಮರು ಇದಕ್ಕೆ ಒಪ್ಪುವರೇ? ಉತ್ತರ "ಇಲ್ಲ" ಎಂದಾಗಿದೆ. ಯೇಸುವನ್ನು ಅಲ್ಲಿ ದಫನಮಾಡಲಾಗಿದೆಯೋ ಇಲ್ಲವೋ ಎಂಬುದು ಅವರಿಗೆ ಒಂದು ಒಂದು ಪ್ರಶ್ನೆಯೇ ಅಲ್ಲ. ಇದರ ಪರಿಣಾಮ ಸ್ಪಷ್ಟವಿದೆ. ವೈಜ್ಞಾನಿಕವಾದ ಸಾಕ್ಷ್ಯಗಳೇನೂ ಇಲ್ಲದೆಯೇ ಅಹ್ಮದಿಯರು ತಮ್ಮ ನ್ಯಾಯವಾದದಲ್ಲಿ ಧೃಢವಾಗಿ ನಿಲ್ಲುತ್ತಾರೆ. ಕ್ರೈಸ್ತರಾದರೋ, ತಮ್ಮ ರಕ್ಷಕನ ಕುರಿತಿರುವ 'ಆಧಾರರಹಿತವಾದ' ಈ ಐತಿಹ್ಯವನ್ನು ಸಹನೆಯಿಂದ ಕಾಣುವರೆ ತಯಾರಾಗುವರೆಂದು ಫಾದರ್ ಅಜೀಜ್ ವಿಲಿಯಂ ಕೆಲವು ಕಾಲ ಮೊದಲು ಪ್ರಸ್ತಾವಿಸಿರುವರು.

(ಕೃಪೆ: INDIA TODAY)

---

* ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ಈ ರೀತಿ ಹೇಳುತ್ತಾರೆ:

''ಯೇಸುಕ್ರಿಸ್ತರ ಕಾಲದಲ್ಲಿ ಸಮಾಧಿಯೊಳಗೆ ಶಿಲಾರೇಖೆಗಳನ್ನು ಇಡುವ ವಾಡಿಕೆ ಇತ್ತು. ಅವರ ಸಮಾಧಿಯಲ್ಲಿ ಅಂತಹ ಕುರುಹುಗಳು ಲಭಿಸಲಾರವೆಂದು ಹೇಳುವುದು ವಿಚಾರರಹಿತವಾಗಿದೆ. ಸಮಾಧಿಯನ್ನು ಅಗೆದು ನೋಡುವುದಾದರೆ ಚಕಿತಗೊಳಿಸುವ ಹಲವು ರಹಸ್ಯಗಳು ಬಯಲಾಗುವುವು." (ಅಲ್‌ಹುದಾ—ಪುಟ 117)

—ಸಂಪಾದಕ.

READ · MINARET
ENGLISH QUARTERLY JOURNAL
Single Copy: Rs. 1/- Annual Subscription: Rs. 4/-
Apply to: The Manager, Minaret Quarterly,
Ahmadiyya Building, West Silk Street CALICUT-673001.

# ಅಹ್ಮದಿಯಾ ವಾರ್ತೆಗಳು

## ಉತ್ತರ ಪ್ರದೇಶದಲ್ಲಿ ಸಮ್ಮೇಳನ

ಉತ್ತರ ಪ್ರದೇಶ ಅಹ್ಮದಿಯಾ 11ನೇ ವಾರ್ಷಿಕ ಸಮ್ಮೇಳನವು ಅಕ್ಟೋಬರ್ 2 ಮತ್ತು 3 ದಿನಾಂಕಗಳಲ್ಲಿ ಅಮೀನ್‌ದೌಲ ಪಾರ್ಕ್‌ನಲ್ಲಿ ಜರಗಿತು. ಈ ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಅಹ್ಮದಿಯಾ ಕೇಂದ್ರದ ಉನ್ನತ ಅಧಿಕಾರಿಯಾದ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಖಾದಿಯಾನದಿಂದ ಆಗಮಿಸಿದ್ದರು.

ಕೇಂದ್ರದ ಮುಖ್ಯ ಪ್ರಚರಣಾ ಕಾರ್ಯದರ್ಶಿ ಮೌಲಾನ ಶರೀಫ್ ಅಹ್ಮದ್ ಅಮೀನಿಯವರು ಉದ್ಘಾಟನೆ ಭಾಷಣ ಮಾಡಿದರು. ಅಹ್ಮದಿಯಾ ಸಂಘಟನೆಯ ಈಗಿನ ಖಲೀಫರು ಕಳುಹಿಸಿದ ಸಂದೇಶವನ್ನು ಸಮ್ಮೇಳನದಲ್ಲಿ ಓದಲಾಯಿತು. ಸಮ್ಮೇಳನವಲ್ಲಿ ಮಾಡಲಾದ ವಿವಿಧ ಭಾಷಣಗಳನ್ನು ಆಲ್ ಇಂಡಿಯಾ ರೇಡಿಯೋ ಲಕ್ನೋ ಪ್ರಸಾರಮಾಡಿತು. ಟೆಲಿವಿಷನಿನಲ್ಲಿ ಸಹ ಸಮ್ಮೇಳನದ ದೃಶ್ಯಗಳನ್ನು ತೋರಿಸಲಾಯಿತು.

## ಭುವನೇಶ್ವರದಲ್ಲಿ ಪಾರ್ಲಿಮೆಂಟ್ ಓಫ್ ರಿಲಿಜಿಯನ್ಸ್ ಸಮ್ಮೇಳನದಲ್ಲಿ ಅಹ್ಮದಿಯಾ ಪ್ರತಿನಿಧಿಯ ಭಾಷಣ

ಸಪ್ಟೆಂಬರ್ 11ರಂದು ಅಖಿಲ ಭಾರತ ವಿವೇಕಾನಂದ ಯುವ ಮಹಾಮಂಡಲದ ವತಿಯಿಂದ ಭುವನೇಶ್ವರದ (ಒರಿಸ್ಸಾ) ಸೂಚನಾಭವನದಲ್ಲಿ ಪಾರ್ಲಿಮೆಂಟ್ ಓಫ್ ರಿಲಿಜಿಯನ್ಸ್ ಸಮ್ಮೇಳನವು ಬಹಳ ವಿಜೃಂಭಣೆಯಿಂದ ನಡೆಯಿತು.

ಸಮ್ಮೇಳನವನ್ನು ಒರಿಸ್ಸಾದ ರಾಜ್ಯಪಾಲ ಶ್ರೀ ಹರಿಚರಣ್‌ಸಿಂಗ್ ಉದ್ಘಾಟಿಸಿದರು. ಉತ್ಕಲ್ ವಿಶ್ವವಿದ್ಯಾಲಯದ ಪ್ರೊಫೆಸರ್ ಶ್ರೀ ಮನ್ಮಥದಾಸ್ ಅಧ್ಯಕ್ಷತೆಯನ್ನು ವಹಿಸಿದರು.

ಈ ಸಮ್ಮೇಳನದಲ್ಲಿ ಭಾಗವಹಿಸಲು ಹಿಂದೂ, ಸಿಖ್, ಕ್ರೈಸ್ತ, ಜೈನ್, ಬುದ್ಧ, ಇಸ್ಲಾಂ ಮೊದಲಾದ ಧರ್ಮಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು. ಮದರಾಸಿನ ಮುಹಮ್ಮದ್ ಕರೀಮುಲ್ಲಾ ನೌಜವಾನ್ ಸಾಹೇಬರು ಅಹ್ಮದಿಯತ್ತನು ಪ್ರತಿನಿಧೀಕರಿಸಿದರು. ಅವರು Essence of Islam–Message of Ahmadiyat ಎಂಬ ವಿಷಯದ ಕುರಿತು ಇಂಗ್ಲೀಷಿನಲ್ಲಿ ಮಾತನಾಡಿದರು. ಓರ್ವ ಮುಸ್ಲಿಂ ಎಲ್ಲಾ ಮತಾಚಾರ್ಯರನ್ನು ಗೌರವಾದರತೆಯಿಂದ ಕಾಣಬೇಕೆಂದೂ ಮನುಷ್ಯರೆಲ್ಲರೂ ಸೌಹಾರ್ದತೆಯಿಂದಲೂ ಪ್ರೀತಿ ವಾತ್ಸಲ್ಯದಿಂದಲೂ ಕೂಡಿಬಾಳಬೇಕೆಂದೂ ಖುರ್‌ಆನ್ ವಚನಗಳನ್ನೂ ಮುಹಮ್ಮದ್ ಪೈಗಂಬರರ ನುಡಿಗಳನ್ನೂ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದರ ಉಪದೇಶಗಳನ್ನೂ ಉದ್ಧರಿಸುತ್ತಾ ಕರೀಮುಲ್ಲಾ ಸಾಹೇಬರು ಭಾಷಣ ಮಾಡಿದರು. ಇಂದಿನ ಕಾಲದ ಹಲವು ಬಗೆಯ ಅಶಾಂತಿಯ ವಾತಾವರಣವನ್ನು ವಿವರಿಸುತ್ತಾ ಅದಕ್ಕೆ ಪವಿತ್ರ ಖುರ್‌ಆನ್ ಸೂಚಿಸುವ ಪರಿಹಾರವನ್ನು ಅವರು ಪ್ರಸ್ತಾಪಿಸಿದರು.

## ಬೊಂಬಾಯಿ ವಿವೇಕಾನಂದ ಕೇಂದ್ರ ಸೆಮಿನಾರ್‌ನಲ್ಲಿ ಅಹ್ಮದಿಯಾ ಪ್ರತಿನಿಧಿಯ ಭಾಷಣ

ಸಪ್ಟೆಂಬರ್ 11ನೇ ದಿನಾಂಕದಂದು ಬೊಂಬಾಯಿಯ ದಾದರ್‌ನಲ್ಲಿರುವ ವಿವೇಕಾನಂದಕೇಂದ್ರವು ಒಂದು ಸೆಮಿನಾರನ್ನು ಏರ್ಪಡಿಸಿತ್ತು. ಅದರಲ್ಲಿ ವಿಶ್ವಸಹೋದರತೆ (Universal Brotherhood)ಯ ಕುರಿತು ಭಾಷಣಮಾಡಲು ವಿವಿಧ ಮತಸ್ಥರ ಪ್ರತಿನಿಧಿಗಳನ್ನು ಆಮಂತ್ರಿಸಲಾಗಿತ್ತು. ಇಸ್ಲಾಮಿನಲ್ಲಿ ವಿಶ್ವಸಹೋದರತೆ (Universal Brotherhood in Islam) ಎಂಬ ವಿಷಯದ ಕುರಿತು ಬೊಂಬಾಯಿಯ ಅಹ್ಮದಿಯಾ ಪ್ರಚಾರಕರಾದ ಮುಹಮ್ಮದ್ ಫಾರೂಕ್ ಸಾಹೇಬರು ಬರೆದ ಭಾಷಣವನ್ನು ಸ್ಥಳೀಯ ಅಹ್ಮದಿಯಾ ಶಾಖೆಯ ಪ್ರೆಸಿಡೆಂಟರಾದ ಜನಾಬ್ ಮುಹಮ್ಮದ್ ಸುಲೈಮಾನ್ ಸಾಹೇಬರು ಓದಿ ಹೇಳಿದರು. ಈ ಭಾಷಣದ ಕುರಿತು ಸ್ಟೇಜ್ ಸೆಕ್ರೆಟರಿ ತುಂಬಾ ಪ್ರಶಂಸೆ ಮಾಡಿದರು.

## ಅಖಿಲ ಭಾರತ ಅಹ್ಮದಿಯಾ ಸಮ್ಮೇಳನ

86ನೇ ಅಖಿಲ ಭಾರತ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಡಿಸೆಂಬರ್ 18, 19, 20 ದಿನಾಂಕಗಳಲ್ಲಿ ಅಹ್ಮದಿಯಾ ಕೇಂದ್ರವಾದ ಖಾದಿಯಾನಿನಲ್ಲಿ ಜರಗುವುದು. ಇಸ್ಲಾಂ ಮತ್ತು ಇತರ ಮತಗಳೂ ಮತಾಚಾರ್ಯರೂ, ಮತಮೈತ್ರಿ, ರಾಷ್ಟ್ರೀಯ ಭಾವೈಕ್ಯ, ಇಸ್ಲಾಂ ಮತ್ತು ಜಾಗತಿಕ ಶಾಂತಿ, ದೈವಾಸ್ತಿತ್ವ, ಪೈಗಂಬರರ ಜೀವನ ಚರ್ಯೆ, ಮತದ ಆವಶ್ಯಕತೆ, ಖಿಲಾಫತಿನ ಅನುಗ್ರಹಗಳು· ಅಹ್ಮದಿಯಾ ಶತಕ ಜುಬಿಲಿ, ಆಧುನಿಕ ಕಾಲದ ಕುರಿತು ಪವಿತ್ರ ಖುರ್‌ಆನ್ ಮತ್ತು ಹದೀಸಿನ ಭವಿಷ್ಯ ನುಡಿಗಳು, ವಿಜ್ಞಾನ ಮತ್ತು ಸಂಸ್ಕೃತಿಗೆ ಇಸ್ಲಾಮಿನ ಕೊಡುಗೆ, ವಾಗ್ದತ್ತ ಮಸೀಹಾರ ಜೀವನ ಮತ್ತು ಭವಿಷ್ಯನುಡಿಗಳು, ಇಸ್ಲಾಮಿನ ಸಾಮಾಜಿಕ ಹಾಗೂ ಆರ್ಥಿಕ ಕ್ರಮಗಳು, ಅಹ್ಮದಿಯರಿಗೂ ಇತರ ಮುಸ್ಲಿಮರಿಗೂ ಇರುವ ವ್ಯತ್ಯಾಸಗಳು, ಅಹ್ಮದಿಯತ್ತಿನ ಧ್ಯೇಯಧೋರಣೆಗಳು ಮೊದಲಾದ ವಿಷಯಗಳ ಕುರಿತು ವಿದ್ವಾಂಸರಿಂದ ಭಾಷಣಗಳು ನಡೆಯಲಿವೆ. ಈ ಸಮ್ಮೇಳನಕ್ಕೆ ವಿದೇಶದ ಹಲವೆಡೆಗಳಿಂದಲೂ ಪ್ರತಿನಿಧಿಗಳು ಆಗಮಿಸುವ ನಿರೀಕ್ಷೆಯಿದೆ.

## ಟ್ಯೂರಿನ್‌ನಲ್ಲಿರುವ ಯೇಸುಕ್ರಿಸ್ತರ ಪವಿತ್ರ ವಸ್ತ್ರದ ಕುರಿತು
### ಸಿಂಪೋಸಿಯಂ

ಸಪ್ಟೆಂಬರ್ 16 ಮತ್ತು 17ನೇ ದಿನಾಂಕಗಳಂದು ಲಂಡನಿನ ಇನ್‌ಸ್ಟಿಟ್ಯೂಟ್ ಓಫ್ ಕ್ರಿಶ್ಚಿಯನ್ ಸ್ಟಡೀಸ್‌ನಲ್ಲಿ ಟ್ಯೂರಿನ್‌ನಲ್ಲಿರುವ ಯೇಸುಕ್ರಿಸ್ತರ ಶವ-ವಸ್ತ್ರದ ಕುರಿತು ಒಂದು ಸಿಂಪೋಸಿಯಂ ನಡೆಯಿತು. ಇದು ಪ್ರಸ್ತುತ ವಿಷಯದಲ್ಲಿ ಲಂಡನಿನಲ್ಲಿ ನಡೆದ ಪ್ರಥಮ ಸಭೆಯಾಗಿದ್ದು, ವಿವಿಧ ಮತಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ಚಾರಿತ್ರಿಕ ಹಾಗೂ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ವಿಜ್ಞಾನಿಗಳೂ ಬಿಷಪರುಗಳೂ ಭಾಷಣಮಾಡಿದರು. ಅಹ್ಮದಿಯಾ ಲಂಡನ್ ಮಸೀದಿಯ ಇಮಾಂ ಬಿ. ಎ. ರಫೀಕ್‌ರವರು ಭಾಷಣಮಾಡುತ್ತಾ ಅಹ್ಮದಿಯರು ಯೇಸುಕ್ರಿಸ್ತರನ್ನು ದೈವನಿಯುಕ್ತ ಪ್ರವಾದಿಯೆಂದು ನಂಬುತ್ತಾರೆಂದೂ, ಅವರು ಶಿಲುಬೆಯ ಅಗ್ನಿಪರೀಕ್ಷೆಯಿಂದ ಪಾರಾಗಿ, ಅನಂತರ ಇಸ್ರಾಯಿಲ್ ಗೋತ್ರದ ಕಾಣೆಯಾದ ಸಂತತಿಗಳನ್ನು ಹುಡುಕುತ್ತಾ ಹೋದರೆಂದೂ ಹೇಳಿದರು. ಟ್ಯೂರಿನ್‌ನಲ್ಲಿರುವ ವಸ್ತ್ರವು ನಿಜವಾಗಿಯೂ ಯೇಸುಕ್ರಿಸ್ತರ ಶವರೂಪೀ ಜೀವಂತ ಶರೀರವನ್ನು ಹೊದಿಸಿದ್ದಾಗಿತ್ತೇ ಎಂದು ದೃಢಪಡಿಸಲು ಇನ್ನೂ ಹೆಚ್ಚಿನ ಶ್ರಮ ವಹಿಸಲು ಇಮಾಂ ಸಾಹೇಬರು ಸಂಶೋಧಕರನ್ನು ವಿನಂತಿಸಿದರು.

## ಅಹ್ಮದಿಯಾ ವಾಚನಾಲಯ

ಸ್ಥಳೀಯ ಅಹ್ಮದಿಯಾ ಶಾಖೆಯ ವತಿಯಿಂದ ಕುಂಬಳೆಯ ಸಮೀಪದ ಮೊಗ್ರಾಲ್ ಎಂಬಲ್ಲಿ ನವೆಂಬರ್ 28ರಂದು 'ಅಹ್ಮದಿಯಾ ವಾಚನಾಲಯ'ವು ಕೇರಳ ಅಹ್ಮದಿಯಾ ಮಿಶನರಿ ಮೌಲಾನ ಅಬುಲ್ ವಫಾ ಸಾಹೇಬರಿಂದ ಉದ್ಘಾಟಿಸಲ್ಪಟ್ಟಿತು. ಉದ್ಘಾಟಕರಲ್ಲದೆ ಜನಾಬ್ ಉನ್ನೀನ್ ಮೌಲವಿ ಸಾಹೇಬ್, ಜನಾಬ್ ಸಿದ್ದೀಖ್ ಅಮೀರಲಿ ಸಾಹೇಬ್ ಮೊದಲಾದವರು ಅಹ್ಮದಿಯಾ ವಿಶ್ವಾಸಾಚಾರಗಳ ಕುರಿತು ಭಾಷಣಮಾಡಿದರು.

READ

**BADR**

URDU WEEKLY ORGAN OF AHMADIYYA MOVEMENT

Single Copy: 30 Paise    Annual Subscription: Rs. 15/-

*Apply to:* **The Manager, Badr Weekly**

**QADIAN — 143516.**

# ಸಂಪಾದಕರಿಗೆ ಪತ್ರ

ಮಾನ್ಯರೆ,

ವಂದನೆಗಳು, ತಮ್ಮ ಪತ್ರಿಕೆ ಯುಗರಶ್ಮಿ ತಲುಪುತ್ತಿದೆ. ಇದುವರೆಗೆ ಪತ್ರ ಬರೆದು ವೈಯಕ್ತಿಕ ಕೃತಜ್ಞತೆ ಸಲ್ಲಿಸಲಾಗದಿದ್ದುದನ್ನು ಈಗ ಮಾಡುತ್ತಿದ್ದೇನೆ.

ಮುಸ್ಲಿಂ ಬಾಂಧವರ ಧರ್ಮ, ಆಚಾರ ವಿಚಾರಗಳ ಬಗೆಗೆ ತಿಳಿದುಕೊಂಡು ಅವರೊಡನೆ ಆತ್ಮೀಯವಾಗಿರ ಬಯಸುವ ಜಾತ್ಯಾತೀತ, ಧರ್ಮಾತೀತ ಭಾರತದ ನನ್ನಂತಹ ಪೌರರಿಗೆ ತಮ್ಮ ಪತ್ರಿಕೆ ಉಪಯುಕ್ತ.

ಗೆಳೆಯರೆ ಒಂದು ಸಲಹೆ, ಯಾವುದೇ ಧರ್ಮದಲ್ಲಿ ದೇವರ ಹೆಸರಿನಲ್ಲಿ ಮಧ್ಯವರ್ತಿ ದಳ್ಳಾಳಿಗಳು ಸೃಷ್ಟಿಸಿದ ನಿಯಮಗಳು, ಆಚಾರಗಳು ಮೂಢನಂಬಿಕೆಗಳಾಗಿ ಮುಂದುವರಿಯುತ್ತಿರುತ್ತವೆ. ಅಂತಹ ಕಂದಾಚಾರ ನಿಯಮಗಳು, ಮುಸ್ಲಿಂ ಧರ್ಮದಲ್ಲಿ ಇಲ್ಲವೆಂದಿಲ್ಲ. ಅಂತಹವು ಗಳನ್ನು ಪತ್ತೆಹಚ್ಚಿ ಆ ಬಗೆಗೆ ತಿಳಿಸುವತ್ತ ನಿಮ್ಮ ಪರಿಸ್ಥಿತಿಯಲ್ಲಿ ನಿಮಗೆ ಸಾಧ್ಯವಾದಷ್ಟು ಪ್ರಯತ್ನಿಸಿ. ಕೆಲವು ವೇಳೆ ಖಂಡಿಸಿ ಹೇಳಲಾಗದಿದ್ದರೂ ವಿವರಿಸಿ ತೀರ್ಮಾನವನ್ನು ಜನರಿಗೆ ಬಿಟ್ಟುಕೊಡಿ. ಇದರಿಂದ ಮುಸ್ಲಿಂಬಾಂಧವರಲ್ಲಿ ವೈಜ್ಞಾನಿಕ, ವೈಚಾರಿಕ ಸುಧಾರಣೆ ಆದಂತಾಗುತ್ತದೆ.

ವಿ. ಸೂ: ಸುಧಾರಣೆ, ವೈಚಾರಿಕತೆ ಎಂದಾಗ ದೇವರು, ಧರ್ಮ ಧಿಕ್ಕರಿಸಿ ಹೊರಡುವುದಲ್ಲ. ಅವುಗಳನ್ನು ಉಳಿಸಿ, ಬೆಳೆಸಿಕೊಂಡು ಸಾಮಾಜಿಕ ಲಾಭಕ್ಕಾಗಿ ಸರಿ, ತಪ್ಪುಗಳನ್ನು ಹುಡುಕಿಕೊಳ್ಳುವುದು.

ಇಂತು,

**ರಾಮಲಿಂಗಯ್ಯ ಉಪ್ಪಿನಕೆರೆ,**

ಸಂಪಾದಕರು, ಆರೋಗ್ಯನಿಧಿ.

ಮೈಸೂರು.

---

# ಸಾದರ ಸ್ವೀಕಾರ

**GEMS FROM THE EAST**

A Theosophical Birthday-Book of Precepts and Axioms.
Compiled by: H. P Blavatsky
Himalaya Prakashand, Bangalore.
Pages: 52 Price: 2-50

---

"ಸ್ತ್ರೀ"

ಪವಿತ್ರ ಖುರ್‌ಆನಿನ ಪ್ರಾಸಂಗಿಕ ಹಾಗೂ ಕಾಲಕ್ರಮಾಗತ ಮಲೆಯಾಳಂ ಭಾಷಾಂತರ–ಸಂಪುಟ I
ಸಂಗ್ರಹ: ಡಾ। ಪಿ. ಮುಹಮ್ಮದ್ ಅಲಿ.

ಪ್ರಕಾಶಕ: Dr. P. Mohammed Ali,
Sasalza, Vincent Road,
Ernakulam, Cochin-682018
ಪುಟಗಳು: 58 ಬೆಲೆ: ರೂ. 10-00

---

"ಕನ್ನಡಿಗ"

ಕನ್ನಡ ವಾರಪತ್ರಿಕೆಯ ದೀಪಾವಳಿ ಹಾಗೂ 27ನೇ ಹುಟ್ಟುಹಬ್ಬದ ವಿಶೇಷ ಸಂಚಿಕೆ.

ಪುಟ: 28 ಬೆಲೆ: ರೂ. 1-00

ವಿಶ್ವಭಾರತಿ ಪ್ರಕಾಶನ, ಹುಬ್ಬಳ್ಳಿ–580024.

## Ahmadiyya English Literatures

1. Islam-The Need of the Hour
2. Why I Believe in Islam?
3. The Economic Structure of Islamic Society.
4. Ahmadiyya Belief
5. Islamic Teachings on the Moral Condition of man.
6. The Contribution of Islam to the Solution of world problems.
7. Muhammad, the Kindred of Humanity
8. Muhammad, the Liberator of Women.
9. Islam & Communism. By Hazrat Mirza Bashir Ahmad M.A.
10. Islam & Slavery. By Hazrat Mirza Bashir Ahmad, M A.
11. Our Teachings. By Hazrat Mirza Ghulam Ahmad.
12. Meaning of Khatamun Nabiyyin. By A. R. Dard, M.A.
13. Truth About Khatme Nabuwat. By Hazrat Mirza Bashir Ahmad, M. A.
14. Latest Findings About Jesus Christ.
15. Why Did Early Christians Accept Islam? By J. D. Shams.
16. A Review of Christianity from a New point of View.
17. A Message of Peace & A Word of Warning By Hazrat Mirza Nasir Ahmad
18. Jesus in Kashmir.
19. Four Questions by a Christian & Their Answers.
20. The Last Message of the Prince of peace. By Hazrat Mirza Gulam Ahmad.
21. How to Get Rid of the Bondage of Sin? By Hazrat Mirza Ghulam Ahmad.
22. Ahmadis Are Muslims. A Pronouncement of the Head of the Ahmadiyya Movement.
23. Islam and Universal Brother hood.
24. Muhammad in the Bible.
25. A Rejoinder to the Qadiyanies A Non Muslim Minority in Pakistan.

Apply with 25 Paise Stamp to: The Editor: **YUGARASHMI** Kannada Quarterly, 23/1008, Ansari Road, Bunder, Mangalore-575 001.

ಪುಸ್ತಕ ವಿಭಾಗ

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರ: ಅಬೂ ತಾಹಿರ್.

## ಅಧ್ಯಾಯ–12

## " ಯೇಸುಕ್ರಿಸ್ತರ ಅಜ್ಞಾತ ಜೀವನ "
## ಯೇಸುಕ್ರಿಸ್ತರೂ ಬೌದ್ಧರೂ

ಯೇಸುಕ್ರಿಸ್ತರು ಭಾರತಕ್ಕೆ ಬಂದು ದೈವಿಕ ಸಂದೇಶವನ್ನು ತಲುಪಿಸಿದರೆಂದು ಕೆಲವು ಪುರಾತನ ಬೌದ್ಧ ಲೇಖನಗಳಲ್ಲಿ ವ್ಯಕ್ತವಾಗಿ ಸೂಚಿತವಾಗಿರುವುದು ಯೇಸುಕ್ರಿಸ್ತರ ಭಾರತಾಗಮನದ ಕುರಿತು ಇನ್ನೊಂದು ಸಾಕ್ಷ್ಯವಾಗಿದೆ. ಜೋನ್ ಪಿಂಕರ್‌ಟನ್ನನು 1811ರಲ್ಲಿ ಪ್ರಕಟಿತವಾದ ತನ್ನ "Book of Travel" ನಲ್ಲಿ ಈ ರೀತಿ ಬರೆದಿರುವನು:— "ಲಾಮಾಗಳ ಪುರಾತನ ಗ್ರಂಥಗಳಲ್ಲಿ ಕ್ರೈಸ್ತಧರ್ಮದ ಕುರುಹುಗಳು ಕಾಣುತ್ತವೆಯೆಂದು ಹಲವಾರು ಮಿಶನರಿಗಳು ಊಹಿಸುತ್ತಾರೆ. ಅವರಭಿಪ್ರಾಯದಲ್ಲಿ ಈ ಉಪದೇಶಗಳು ಅವರಿಗೆ ಅಪೋಸ್ತಲರ ಕಾಲದಲ್ಲಿ ದೊರೆಯಿತು.

[Pinkerton: A General collection of the Best and Most interesting voyages and Travels in All parts of the world Vol–7 page554 London1811,]

ಟರ್ಕೋ-ರಶ್ಯನ್ ಯುದ್ಧಾನಂತರ (1877) ನಿಕೋಲಸ್ ನೋಟೋವಿಚ್ ಎಂಬೊಬ್ಬ ರಶ್ಯನ್ ಪ್ರವಾಸಿ ಅನೇಕ ರಾಜ್ಯಗಳಲ್ಲಿ ಸಂಚರಿಸಿ ಕೊನೆಗೆ ಭಾರತಕ್ಕೆ ಬಂದನು (1887). ಒಂದು ಬೌದ್ಧ ಸನ್ಯಾಸಿಮಠವನ್ನು ಸಂದರ್ಶಿಸಿದಾಗ ಆ ಮಠದ ಪ್ರಧಾನ ಸನ್ಯಾಸಿಯು ಬಹಳ ಪ್ರಾಚೀನವಾದ ಲೇಖನಗಳು ಪೌರಾತ್ಯ ದೇಶಗಳ ಕುರಿತು ಮತ್ತು ಯೇಸುಕ್ರಿಸ್ತರ ಕುರಿತು ಲಾಸಾದ ದಾಖಲೆ ಪತ್ರಗಳ ಶೇಖರಣಾಲಯದಲ್ಲಿವೆಯೆಂದು ನಿಕೋಲಸನಿಗೆ ತಿಳಿಸಿದನು. ನಿಕೊಲಸನು ಈ ದಾಖಲೆಗಳನ್ನು ಕಂಡು ಟಿಪ್ಪಣಿಗಳನ್ನು ಗುರುತಿಸಿಕೊಂಡನು. ಆತನು ಯುರೋಪಿಗೆ ಹೋಗಿ ಯೇಸುಕ್ರಿಸ್ತರ ಜೀವನಕ್ಕೆ ಸಂಬಂಧಿಸಿದ ಆ ದಾಖಲೆಗಳನ್ನು ಸರಿಯಾಗಿ ಜೋಡಿಸಿ ಅವುಗಳನ್ನು ಪ್ರಕಟಗೊಳಿಸಲಿಕ್ಕಾಗಿ ಪರಿಶೋಧಿಸಲು ಕೀವ್ ನಗರದ ಆರ್ಚ್ ಬಿಷಪರಾದ ಮೋನ್ಸಿಯುರ್ ಪ್ಲೇಟನ್‌ಗೆ ಸಮರ್ಪಿಸಿದನು. ಅವರಿಗೆ ಈ ಕಂಡುಹಿಡಿತದ ಮಹತ್ವ ಗೊತ್ತಾದರೂ ಅದನ್ನು ಬಹಿರಂಗಗೊಳಿಸುವುದರಿಂದ ಆತನಿಗೆ ಸಹ ದೋಷಕರವಾಗುವುದೆಂದು ಹೇಳಿ ಅದರ ಪ್ರಸಿದ್ಧೀಕರಣವನ್ನು ತಡೆದರು. ಅದರ ಕಾರಣವೇನು? ಅವರು ವಿಶದವಾಗಿ ವಿವರಿಸಲು ಸಮ್ಮತಿಸಲಿಲ್ಲ. ಒಂದು ವರ್ಷದ ನಂತರ ಆತನು ರೋಮಿನಲ್ಲಿದ್ದಾಗ ಒಬ್ಬ ಕಾರ್ಡಿನಲ್‌ನಿಗೆ ಈ ಹಸ್ತಪ್ರತಿಯನ್ನು ಕೊಟ್ಟನು. ಆ ಕಾರ್ಡಿನಲ್ ಪೋಪರಿಂದ ವಿಶೇಷವಾಗಿ ಸನ್ಮಾನಿತನಾಗಿದ್ದನು. "ನೀನು ಇದನ್ನೇಕೆ ಮುದ್ರಿಸುವೆ? ಇದಕ್ಕೆ ಯಾರೂ ಹೆಚ್ಚು ಪ್ರಾಧಾನ್ಯ ಕಲ್ಪಿಸಲಿಕ್ಕಿಲ್ಲ. ಇದರಿಂದ ನಿನಗೆ ಅಸಂಖ್ಯ ಶತ್ರುಗಳುಂಟಾಗುವರು. ನಿನಗೆ ಹಣದ ಅವಶ್ಯವಿದ್ದರೆ

ಈ ಟಿಪ್ಪಣಿಗಳಿಗೆ ಪರಿಹಾರವಾಗಿ ನಾನು ಸ್ವಲ್ಪ ಹಣ ಕೊಡುವೆನು" ಎಂದು ಆತನು ಹೇಳಿದನು. ಈ ಪ್ರಲೋಭನೆಗೆ ಒಪ್ಪದೆ ನಿಕೋಲಸನು ಸ್ವಾಭಾವಿಕವಾಗಿ ತಿರಸ್ಕರಿಸಿದನು. ತಾನು ಕಾನ್‌ಸ್ಟೆಂಟಿನೋಪಲಿನಲ್ಲಿ ಭೇಟಿಯಾಗಿದ್ದ ಕಾರ್ಡಿನಲ್ ರೋಟೆಲ್ಲಿಯು ಮುಂಭಾಗದಲ್ಲಿ ತನ್ನ ಉದ್ದೇಶವನ್ನು ವ್ಯಕ್ತಗೊಳಿಸಿದನು. ಆಗ ಕಾರ್ಡಿನಲ್‌ನು ಅದು ಅಕಾಲಿಕವಾಗುವುದೆಂದು ಅಭಿಪ್ರಾಯ ವ್ಯಕ್ತಗೊಳಿಸಿ ಅದರ ಪ್ರಸಿದ್ಧೀಕರಣವನ್ನು ತಡೆದನು. "ಇಂತಹ ನವೀನ ನಾಸ್ತಿಕ ತತ್ವಗಳ ಪ್ರವಾಹದಿಂದ "ಚರ್ಚ್"ಗೆ ಬಹಳ ದೋಷವುಂಟಾಗುತ್ತದೆ. ಸುವಾರ್ತಾ ಸಿದ್ಧಾಂತಗಳ ವಿರೋಧಿಗಳಿಗೆ ನೀವು ಇದರ ಮೂಲಕ ನವೀನ ಆಹಾರ ಮಾತ್ರ ತಯಾರು ಮಾಡಿಕೊಡುವಿರಿ ಎಂದು ಆತನು ಹೇಳಿದನು. ಕೊನೆಗೆ ನೋಟೋವಿಚನು "ದಿ ಅನ್ ನೋನ್ ಲೈಫ್ ಆಫ್ ಜೀಸಸ್ ಕ್ರೈಸ್ಟ್" (ಯೇಸುವಿನ ಅಜ್ಞಾತ ಜೀವನ) ಎಂಬಹೆಸರಿನಲ್ಲಿ ಈ ಪುಸ್ತಕವನ್ನು ಪ್ರಕಟಗೊಳಿಸಿದನು.*

ಈ ಪುಸ್ತಕದಲ್ಲಿ ಲೇಖಕನು ಈ ರೀತಿ ಬರೆದಿರುವನು: "ನನ್ನ ಈ ಕೃತಿಯನ್ನು ವಿಮರ್ಶಿಸುವ ಮೊದಲು ಶಾಸ್ತ್ರೀಯ ಸಮಿತಿಗಳು, ಹೆಚ್ಚಿನ ಖರ್ಚಿಲ್ಲದೆ ಒಂದು ಸಂಶೋಧಕ ತಂಡವನ್ನು ಏರ್ಪಡಿಸಿ ಈ ಹಸ್ತಪ್ರತಿಗಳನ್ನು ಅವುಗಳಿರುವ ಸ್ಥಳದಲ್ಲೇ ಪರಿಶೋಧಿಸಿ ಅವುಗಳ ಚಾರಿತ್ರಿಕ ಮಹತ್ವಗಳನ್ನು ಮನಗಾಣಲಿ" (ಪುಟ 8, 9, 12).

ಈ ಗ್ರಂಥದ ಲೇಖಕನು ಸನ್ಯಾಸಿಮಠದಲ್ಲಿ ನಡೆದ ಸಂಭಾಷಣೆಯನ್ನು ಈ ರೀತಿ ವಿವರಿಸುತ್ತಾನೆ:-

"ನಿಮ್ಮ ಒಂದು 'ಪೋಪ'ವನ್ನು ಸಂದರ್ಶಿಸಿದಾಗ ಒಬ್ಬ ಲಾಮನು ಈಸ ಎಂಬ ಒಬ್ಬ ಪ್ರವಾದಿಯ ಕುರಿತು, ಅಥವಾ ನೀವು ಪ್ರಾಯಶಃ ಹೇಳುವಂತೆ ಒಬ್ಬ ಬುದ್ಧನ ಕುರಿತು ಹೇಳಿರುವನು. ನಿಮಗೆ ಆತನ ಕುರಿತು ಏನಾದರೂ ತಿಳಿದಿದೆಯೋ?" ನಾನು ಕೇಳಿದೆನು.

"ಈಸನ ಹೆಸರು ಬುದ್ಧರಲ್ಲಿ ಬಹಳ ಆದರಿಸಲ್ಪಡುತ್ತಿದೆ. ಆದರೆ ಆತನ ಜೀವನದ ಕುರಿತು ಚರ್ಮಪತ್ರದಲ್ಲಿ ಬರೆದ ದಾಖಲೆಗಳನ್ನು ಓದಿದ ಪ್ರಧಾನ ಲಾಮಾಗಳಿಗಲ್ಲದೆ ಬೇರೆ ಯಾರಿಗೂ ಹೆಚ್ಚಾಗಿ ತಿಳಿಯದು ಎಂದು ಉತ್ತರಿಸಲಾಯಿತು." (ಪುಟ 90)

"ನಮ್ಮ ಪೋಪ ಭಾಗ್ಯವುಳ್ಳದ್ದಾದುದರಿಂದ ಈಗಲೇ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿದೆ. ಅವುಗಳನ್ನು ನಾನು ವಿಶ್ರಾಂತಿ ಸಮಯದಲ್ಲಿ ಓದಿರುವೆನು. ಇವುಗಳಲ್ಲಿ ನನಗೆ ಈಸನ ಜೀವನ ಮತ್ತು ಕಾರ್ಯಗಳ ಕುರಿತು ವಿವರಣೆಗಳಿವೆ. ಈತನು ಇಂಡಿಯಾದಲ್ಲಿ ಇಸ್ರಾಯೇಲ್ ಸಂತತಿಗಳಿಗೆ ಉಪದೇಶಿಸಿದನು." (ಪುಟ 91).

"ಈಸನ ಜೀವನಕ್ಕೆ ಸಂಬಂಧಿಸಿ ಬರೆಯಲಾದ ಪ್ರಧಾನ ದಾಖಲೆಗಳು ಯಾವ ಭಾಷೆಯಲ್ಲಿ ಬರೆಯಲಾಗಿದೆ?" ನಾನು ಕೇಳಿದೆ.

"ಈಸನ ಜೀವನವನ್ನು ಚಿತ್ರಿಸುವ ದಾಖಲೆಗಳು ಇಂಡಿಯದಿಂದ ನೇಪಾಳಕ್ಕೂ ಅಲ್ಲಿಂದ ಟಿಬೇಟಿಗೂ ತರಲಾಯಿತು. ಅವುಗಳು ಪಾಲಿ ಭಾಷೆಯಲ್ಲಿದ್ದು ಲಾಸಾದಲ್ಲಿದೆ. ನಮ್ಮ ಬಳಿ ನಮ್ಮ ಭಾಷೆಯಾದ ಟಿಬೇಟಿಯನ್ ಭಾಷೆಯಲ್ಲೂ ಒಂದು ಪ್ರತಿ ಇದೆ". (ಪುಟ 93)

"ಕೊನೆಗೆ ನನ್ನ ಒತ್ತಾಯ ಪೂರ್ವಕವಾದ ಅಪೇಕ್ಷೆಯಿಂದ ಮನಪರಿವರ್ತನೆಗೊಂಡವನಾಗಿ ದಪ್ಪ ರಟ್ಟಿನ ಹೊರಾವರಣವನ್ನು ಹೊಂದಿದ ಎರಡು ದೊಡ್ಡ ಗ್ರಂಥಗಳನ್ನು ಆತನು ತಂದನು. ಅದರ ಕಾಗದಗಳು ದೀರ್ಘಕಾಲ ಕಳೆದ ಕಾರಣ ಹಳದಿಯಾಗಿದ್ದುವು. ಆತನು ಈಸನ ಚರಿತ್ರೆಯನ್ನು ಓದಿದಾಗ ನಾನು ಜಾಗ್ರತೆಯಿಂದ ನನ್ನ ಭಾಷಾಂತರಕಾರನ ಮೂಲಕ

---

* ಬ್ರಿಟಿಷ್ ಮ್ಯೂಸಿಯಮ್‌ನಲ್ಲಿ ಈ ಪುಸ್ತಕದ ಎರಡು ಇಂಗ್ಲಿಷ್ ಭಾಷಾಂತರಗಳಿವೆ. ಇದರ ಮೂಲಭಾಷೆ ಫ್ರೆಂಚಾಗಿದೆ. ಒಂದನ್ನು ಅಲೆಕ್ಸಿನಾ ಲೋರೆಂಜರ್ ಭಾಷಾಂತರಿಸಿ Rand Mc Nally & Co., Publishers Chicago and Newyork ಸಂಸ್ಥೆ 1894ರಲ್ಲಿ ಪ್ರಸಿದ್ಧಗೊಳಿಸಿರುವರು. ಇನ್ನೊಂದು ವೊಯಿಲೆಟ್ ಕ್ರಿಸ್ಪ್ ಎಂಬವರಿಂದ ಭಾಷಾಂತರಗೊಂಡು Hutchinson & Co., London ಇವರು ಪ್ರಸಿದ್ಧಗೊಳಿಸಿರುವರು. ನನ್ನ ಉದ್ಧಾರಣೆಗಳು ಮೊದಲಿನ ಪುಸ್ತಕದಿಂದ ಆಯಲಾಗಿದೆ.

ಕೇಳಿ ಬರೆದನು. ಈ ವಿಚಿತ್ರ ಗ್ರಂಥವು ಹೆಚ್ಚಾಗಿ ಪರಸ್ಪರ ಬಂಧವಿಲ್ಲದ ಶ್ಲೋಕಗಳ ರೂಪದಲ್ಲಿ ಬರೆಯಲಾಗಿದೆ ". (ಪುಟ 96)

" ಈ ಪುರಾತನ ಬರವಣಿಗೆಗಳ ಪ್ರಕಾರ ಹದಿಮೂರು ವರ್ಷ ಪ್ರಾಯದವನಾದಾಗ ( ಇಸ್ರಾಯೇಲರು ವಿವಾಹವಾಗುವ ಪ್ರಾಯವಾದಾಗ) ......... ಈಸಾನು ತನ್ನ ತಂದೆಯ ಮನೆಯನ್ನು ಬಿಟ್ಟು ಜೆರೋಸಲೇಮಿನಿಂದ ವ್ಯಾಪಾರಿಗಳ ಜೊತೆಗೆ ಹೊರಟು ದೈವಿಕ ಜ್ಞಾನ ಗಳಿಸಲಿಕ್ಕಾಗಿ ಮತ್ತು ಮಹಾಬುದ್ಧನ ನಿಯಮಗಳನ್ನು ಕಲಿಯಲಿಕ್ಕಾಗಿ ಸಿಂಧಿಗೆ ಬಂದನು." (ಪುಟ 107)

"ಹದಿನಾಲ್ಕು ವರ್ಷ ಪ್ರಾಯವಾದಾಗ ಬಾಲಕನಾದ ಈಸಾ (ದೇವರಿಂದ ಅನುಗ್ರಹಿತನು) ಸಿಂಧಿನಿಂದ ಹೊರಟು ಆರ್ಯರ ಸಂಗಡ ವಾಸಿಸತೊಡಗಿದನು... ಆತನ ಹೆಸರು ಸಿಂಧೂದೇಶದ ಉತ್ತರ ಭಾಗದಲ್ಲಿ ಪ್ರಸಿದ್ಧವಾಗಿತ್ತು. ಆತನು ಪಂಚನದಿಗಳ ದೇಶವನ್ನೂ ರಾಜಪುಠಾನವನ್ನೂ ಹಾದು ಹೋಗುವಾಗ ಜೈನದೇವನ ಆರಾಧಕರು ಆತನನ್ನು ತಮ್ಮ ಜೊತೆ ವಾಸಿಸಲು ಅಪೇಕ್ಷಿಸಿದರು". (ಪುಟ 107)

"ನಂತರ ಆತನು ಓರ್‌ಸಿಸ್ ಪ್ರಾಂತ್ಯದ ಜಗನ್ನಾಥ ಕ್ಷೇತ್ರವನ್ನು ಸಂದರ್ಶಿಸಿದನು. ಬ್ರಹ್ಮದೇವನ ಬಿಳಿ ಪುರೋಹಿತರು ವೇದಗಳನ್ನು ಓದಿ ಅರ್ಥಮಾಡಲು, ಪ್ರಾರ್ಥನೆಯಿಂದ ರೋಗ ಗುಣಪಡಿಸಲು ಪವಿತ್ರ ಗ್ರಂಥಗಳನ್ನು ಓದಿ ವಿವರಿಸಲು, ಕೆಟ್ಟ ಪಿಶಾಚಗಳನ್ನು ಮನುಷ್ಯ ಶರೀರದಿಂದ ಹೊರಹಾಕಿ ಪುನಃ ಮನುಷ್ಯನಂತೆ ಮಾಡಲು ಆತನಿಗೆ ಕಲಿಸಿದರು. ಜಗನ್ನಾಥ, ರಾಜಗೃಹ, ಬನಾರಸ್ ಮುಂತಾದ ಪುಣ್ಯ ನಗರಗಳಲ್ಲಿ ಆತನು ಆರು ವರ್ಷ ವಾಸಿಸಿದನು. ಆತನನ್ನು ಎಲ್ಲರೂ ಪ್ರೀತಿಸುತ್ತಿದ್ದರು. ಆತನು ವೈಶ್ಯರಿಗೂ ಶೂದ್ರರಿಗೂ ಪವಿತ್ರ ಗ್ರಂಥಗಳನ್ನು ಕಲಿಸುತ್ತಿದ್ದನು. ಬ್ರಾಹ್ಮಣರೂ ಕ್ಷತ್ರಿಯರೂ ಆತನನ್ನು ಎದುರಿಸುತ್ತಿದ್ದರು." (ಪುಟ 108) ×

ಈ ಪುರಾತನ ಗ್ರಂಥಗಳಲ್ಲಿ ಬರೆದಿರುವಂತೆ ಯೇಸುಕ್ರಿಸ್ತರು ಭಾರತೀಯರಿಗೆ ಉಪದೇಶಿಸಿದ ತತ್ವಗಳನ್ನು ಈ ಕೆಳಗೆ ಕೊಡುತ್ತೇನೆ: –

1) " ತಂದೆಯಾದ ದೇವರು ತನ್ನ ಮಕ್ಕಳಲ್ಲಿ ಯಾವುದೇ ಬೇಧ ಭಾವ ತೋರಿಸುವುದಿಲ್ಲ. ಎಲ್ಲರೂ ಆತನಿಗೆ ಸಮಾನವಾಗಿ ಪ್ರಿಯರಾಗಿರುವರು ". (ಪುಟ 109).

2) " ದೇವರಿಗೆ ಭಯಪಟ್ಟು, ಆತನ ಮುಂದೆ ಮಾತ್ರ ಮೊಣಕಾಲೂರಿ ಆತನಿಗೆ ಮಾತ್ರ ಅರ್ಪಣೆಗಳನ್ನು ಕೊಡಿರಿ. "

3) ಆತನು ತ್ರಿಮೂರ್ತಿಗಳನ್ನು ನಿಷೇಧಿಸಿದನು. ವಿಷ್ಣು ಮತ್ತು ಶಿವ, ಪರಬ್ರಹ್ಮನ ಅವತಾರಗಳೆಂಬುದನ್ನು ಆತನು ನಿಷೇಧಿಸಿದನು. "ಏಕವೂ ಅವಿಭಾಜ್ಯವೂ ಆದ ಪ್ರಪಂಚಾತ್ಮವು ನಿತ್ಯ ನ್ಯಾಯಾಧಿಪತಿಯೂ ನಿತ್ಯಾತ್ಮನೂ ಆಗಿದ್ದು ಅದೇ ಎಲ್ಲವನ್ನೂ ಸೃಷ್ಟಿಸಿ ಸಂರಕ್ಷಿಸುತ್ತದೆ ಆತನೇ ಎಲ್ಲವನ್ನೂ ಇಚ್ಛಿಸಿ ಸೃಷ್ಟಿಸಿರುವನು. ಆತನು ಅನಾದಿಯಿಂದ ಇದ್ದನು ಮತ್ತು ಅನಂತವಾಗಿರುವನು. ಆತನಿಗೆ ಸಮಾನರು ಆಕಾಶ ಭೂಮಿಗಳಲ್ಲಿಲ್ಲ. ಮಹಾ ಸೃಷ್ಟಿಕರ್ತನಿಗೆ ಆತನ ಶಕ್ತಿಗಳಲ್ಲಿ ಯಾರೂ ಪಾಲುಗಾರರಿಲ್ಲ. ಇದರ ವಿರುದ್ಧ ನಿಮಗೆ ಕಲಿಸಲಾದಂತೆ ಯಾವ ಜೀವಿಗೂ ಆತನ ಶಕ್ತಿಯಲ್ಲಿ ಪಾಲಿಲ್ಲ. ಆತನಿಗೆ ಮಾತ್ರ ಪರಮಾಧಿಕಾರವಿದೆ". (ಪುಟ 110)

" ದೇವರು ಇಚ್ಛಿಸಿದಾಗ ಪ್ರಪಂಚ ಉಂಟಾಯಿತು........ಭೂಮಿ ನೀರು, ಮೃಗ ಮತ್ತು ಇತರ ಆತನ ಸೃಷ್ಟಿಗಳನ್ನು ಮನುಷ್ಯನ ಅಧೀನಕ್ಕೊಳಪಡಿಸಿರುವನು. ಪ್ರತಿಯೊಂದರ ಕಾಲಾವಧಿಯನ್ನು ನಿಶ್ಚಯಿಸಿ ವ್ಯತ್ಯಾಸಗೊಳ್ಳದ ನಿಯಮಗಳಿಂದ ಎಲ್ಲವನ್ನೂ ರಕ್ಷಿಸುತ್ತಿರುವನು". " ದೇವರ ಕೋಪ ಮನುಷ್ಯನ ಮೇಲೆ ಬೇಗನೇ ಎರಗಲಿದೆ. ಏಕೆಂದರೆ ಆತನು ದೇವರನ್ನು ಮರೆತು ಅವನ ದೇವಾಲಯದಲ್ಲಿ ಅಶುದ್ಧವಾದುದನ್ನು ತುಂಬಿಸಿ, ದೇವರು ಮಾನವರಿಗೆ ಅಧೀನಗೊಳಿಸಿರುವ ಜೀವಿಗಳನ್ನು ಪೂಜಿಸುತ್ತಲಿರುವನು ". (ಪುಟ 111)

" ಬಿಳಿ ಪುರೋಹಿತರೂ ಕ್ಷತ್ರಿಯರೂ ಈಸನು ಶೂದ್ರರಿಗೆ ಉಪದೇಶಿಸುವುದನ್ನು ತಿಳಿದು ಆತನನ್ನು ಕೊಲ್ಲಲು ನಿಶ್ಚಯಿಸಿ ಸೇವಕರನ್ನು ಆ ಯುವ ಪ್ರವಾದಿಯನ್ನು ಹುಡುಕಲು ಕಳುಹಿಸಿದರು." (ಪುಟ 112)

" ಈಸನಿಗೆ ಈ ಭಯಾನಕ ವಾರ್ತೆಯನ್ನು ಶೂದ್ರರು ತಿಳಿಸಿದಾಗ ಆತನು ಜಗನ್ನಾಥದಿಂದ ಬುದ್ಧನ ಜನ್ಮಸ್ಥಾನಕ್ಕೆ ರಾತೋರಾತ್ರಿ ಹೊರಟು ಹೋದನು. ಆರು ವರುಷಗಳ ನಂತರ ನೇಪಾಲ ಮತ್ತು ಹಿಮಾಲಯದ ಇತರ ಪರ್ವತ ಪ್ರದೇಶಗಳನ್ನು ತೊರೆದು ಆತನು ರಾಜಪುಠಾನದ ಕಣಿವೆಗೆ ಇಳಿದು ಪಶ್ಚಿಮಕ್ಕೆ ವಿವಿಧ ಜನರಿಗೆ ಮನುಷ್ಯನ ಅಪ್ರತಿಮ ಶ್ರೇಷ್ಠತೆಯನ್ನು ಬೋಧಿಸುತ್ತಾ ಹೋದನು." (ಪುಟ 113)

"ಈಸನ ಉಪದೇಶಗಳ ಕೀರ್ತಿ ಸಮೀಪ ದೇಶಗಳಿಗೆ ವ್ಯಾಪಿಸಿತು. ಆತನು ಪರ್ಶಿಯಾ ದೇಶವನ್ನು ತಲುಪಿದಾಗ ಪುರೋಹಿತರಿಗೆ ಬಹಳ ಹೆದರಿಕೆಯುಂಟಾಯಿತು. ಅವರು ಆತನ ಉಪದೇಶಗಳನ್ನು ಕೇಳಬಾರದೆಂದು ಊರಿನವರೊಡನೆ ಹೇಳಿದರು.'' (ಪುಟ 119)

"ಈಸ ಪ್ಯಾಲೇಸ್ತೀನನ್ನು ತಲುಪಿದಾಗ ಆತನು ಎಲ್ಲಾ ಕಡೆ ಸಂಚರಿಸಿ, ನಿರಾಶರಾಗಿ ಮೃತ ಸಮಾನರಾದ ಯಹೂದ್ಯರನ್ನು ದೈವವಚನಗಳಿಂದ ಉತ್ತೇಜನಗೊಳಿಸಿದನು. ಸಾವಿರಾರು ಜನರು ಆತನ ಉಪದೇಶಗಳನ್ನು ಕೇಳಲು ಗುಂಪುಗೂಡುತ್ತಿದ್ದರು ''. (ಪುಟ 126)

'' ಆದರೆ ನಗರಾಧಿಪತಿಗಳು ಆತನಿಗೆ ಹೆದರಿ ಆತನ ವಿರುದ್ಧ ಜೆರೂಸಲೇಮಿನ ಗವರ್ನರನಾದ ಪಿಲಾತನಿಗೆ ನಿವೇದನಾ ಪತ್ರಗಳನ್ನು ಬರೆದುದರಿಂದ ಗವರ್ನರನು "ಉಪದೇಶಕನಾದ ಈಸ''ನನ್ನು ಬಂಧಿಸಿ ನ್ಯಾಯಾಧಿಪತಿಗಳ ಮುಂದೆ ತರಬೇಕೆಂದು ಆಜ್ಞಾಪಿಸಿದನು. ಆತನು ವೃದ್ಧರಾದ ಯಹೂದಿ ಪಂಡಿತರು ಮತ್ತು ಪುರೋಹಿತರೊಡನೆ ಯೇಸುವಿನ ವಿಚಾರಣೆಯನ್ನು ದೇವಾಲಯದಲ್ಲಿ ಮಾಡಬೇಕೆಂದು ಆಜ್ಞಾಪಿಸಿದನು.'' (ಪುಟ 127)

"ಈಸನನ್ನು ವಿಚಾರಣೆ ಮಾಡಿದವರು ಗವರ್ನರನಿಗೆ ಈ ರೀತಿ ತಿಳಿಸಿದರು:– "ನಮ್ಮ ಜನರನ್ನು ವಿದ್ರೋಹಕ್ಕೆ ಪ್ರೇರೇಪಿಸುತ್ತಾನೆಂದು ನೀವು ಆರೋಪಿಸುವ ವ್ಯಕ್ತಿಯನ್ನು ನಾವು ಕಂಡು ಆತನ ಉಪದೇಶಗಳನ್ನು ಕೇಳಿದೆವು. ಆತನು ನಮ್ಮ ಜನಾಂಗಕ್ಕೆ ಸೇರಿದವನಾಗಿರುವನು ''. (ಪುಟ 131)

"ಗವರ್ನರನು ತನ್ನ ಗುಪ್ತಚಾರರನ್ನು ಕಳುಹಿಸಿದನು. ಕೊನೆಗೆ ಈಸನನ್ನು ಬಂಧಿಸಲಾಯಿತು. ಪಿಲಾತನು ಪ್ರಧಾನ ಅಧಿಕಾರಿಗಳನ್ನೂ ಪುರೋಹಿತರನ್ನೂ ಹಿರಿಯರನ್ನೂ ನ್ಯಾಯಾಧೀಶರನ್ನೂ ಈಸನ ಕುರಿತು ನಿರ್ಣಯಿಸಲು ಕರೆಯಿಸಿದನು. ಈಸನನ್ನು ಜೈಲಿನಿಂದ ಕರೆದುತರಲಾಯಿತು. ಆತನನ್ನು ಗವರ್ನರನ ಮುಂಭಾಗ ಇಬ್ಬರು ಕಳ್ಳರ ಮಧ್ಯದಲ್ಲಿ ಕುಳಿತು ಕೊಳ್ಳುವಂತೆ ಮಾಡಿ ಅವರನ್ನು ವಿಚಾರಿಸಲಾಯಿತು''. (ಪುಟ 140)

"ಅವರು ಪಿಲಾತನೊಡನೆ ಹೇಳಿದರು: ಇಬ್ಬರು ಕಳ್ಳರನ್ನು ಬಿಟ್ಟು ಒಬ್ಬ ನಿರಪರಾಧಿಯನ್ನು ಶಿಕ್ಷಿಸುವ ನಿರ್ಣಯ ನಾವು ಕೈಗೊಳ್ಳಲಾರೆವು. ಅದು ನಮ್ಮ ಕಾನೂನಿಗೆ ವಿರೋಧವಾಗಿದೆ. ನಿನಗಿಷ್ಟವಿದ್ದಂತೆ ಮಾಡು'' ಹೀಗೆ ಹೇಳಿ ಪುರೋಹಿತರೂ, ಬುದ್ಧಿವಂತರೂ ಹೊರಗೆ ಹೋದರು. 'ನೀತಿವಂತನಾದ ಮನುಷ್ಯನ ಮರಣದಲ್ಲಿ ನಮ್ಮ ಪಾತ್ರವೇನೂ ಇಲ್ಲ' ಎಂದು ಹೇಳಿ ಒಂದು ಪವಿತ್ರ ಪಾತ್ರೆಯಲ್ಲಿ ಅವರು ಕೈತೊಳೆದರು.'' (ಪುಟ 143)

'' ಗವರ್ನರನ ಆಜ್ಞೆ ಪ್ರಕಾರ ಯೇಸುವನ್ನು ಶಿಲುಬೆಗೆ ಕೊಡಲಾಯಿತು. ಇದೇ ರೀತಿ ಕಳ್ಳರನ್ನೂ ಶಿಕ್ಷಿಸಲಾಯಿತು. ಆ ದಿನವೆಲ್ಲಾ ಆತನು ಶಿಲುಬೆಯಲ್ಲಿ ತೂಗುತ್ತಾ ಇದ್ದು ಸಾಯಂಕಾಲ ಸತ್ತನು. ಜನರು ಸಾಮೂಹಿಕವಾಗಿ ದಂಗೆಯೇಳುವರೆಂದು ಗವರ್ನರನು ಭಯಗೊಂಡು ಮೂರು ದಿನಗಳ ನಂತರ ಯೇಸುವಿನ ಶರೀರವನ್ನು ಬೇರೆಲ್ಲಿಯಾದರೂ ಹೂಳಲು ತನ್ನ ಸೈನಿಕರನ್ನು ಕಳುಹಿಸಿದನು. ಮರುದಿವಸ ಶವವಿರಿಸಿದ ಸ್ಥಳ ತೆರೆದುದಾಗಿಯೂ ಖಾಲಿಯಾಗಿಯೂ ಇರುವುದನ್ನು ಜನರು ಕಂಡರು. ಆ ನಿರಪರಾಧಿಯ ಭೌತಿಕವಾದ ಅವಶಿಷ್ಟಗಳನ್ನು ಕೊಂಡು ಹೋಗಲು ದೇವತೆಗಳನ್ನೇ ಪರಮ ನ್ಯಾಯಾಧಿಪತಿಯಾದ ದೇವರು ಕಳುಹಿಸಿರುವನೆಂಬ ಸುದ್ದಿ ಹರಡಿತು''. (ಪುಟ 145)

F. A. Plattner (F. A. ಪ್ಲಾಟ್ನರ್) ತನ್ನ ಪುಸ್ತಕವಾದ "Christian India'' ಎಂಬ ಗ್ರಂಥದಲ್ಲಿ ಈ ರೀತಿ ಬರೆದಿರುವನು:

''ಲೇಹ್‌ನಲ್ಲಿ ಯೇಸುಕ್ರಿಸ್ತರು ಈ ಭಾಗವನ್ನು ಸಂದರ್ಶಿಸಿದ ಕಥೆಗಳನ್ನು ಕೇಳಿದೆವು. ಲೇಹ್‌ನ ಹಿಂದೂ ಪೋಸ್ಟ್‌ಮಾಸ್ಟರನೂ ಲಡಾಕಿನ ಹಲವು ಬೌದ್ಧರೂ ಈ ರೀತಿ ಹೇಳಿದರು: ''ಲೇಹ್‌ನಲ್ಲಿ ಬಜಾರಿಗೆ ಹತ್ತಿರವಾಗಿ ಒಂದು ನೀರಿನ ಹೊಂಡವಿದೆ. ಇದರ ಹತ್ತಿರವಿರುವ ಮರದಡಿಯಲ್ಲಿ ಯೇಸುಕ್ರಿಸ್ತರು ತಾನು ಪ್ಯಾಲೇಸ್ತೀನಿಗೆ ಹೋಗುವ ಮೊದಲು ಜನರಿಗೆ ಉಪದೇಶಿಸಿದನು. ಎಂಬ ಐತಿಹ್ಯವಿದೆ ''. ಇನ್ನೊಂದು ಕಥೆಯ ಪ್ರಕಾರ ಯೇಸುಕ್ರಿಸ್ತರು

ವ್ಯಾಪಾರಿ ಸಂಘದ ಜೊತೆಯಲ್ಲಿ ಭಾರತಕ್ಕೆ ಬಾಲ್ಯಕಾಲದಲ್ಲಿ ಬಂದರೆಂದೂ ಹಿಮಾಲಯದಲ್ಲಿ ಜ್ಞಾನಾರ್ಜನೆ ಮಾಡಿದರೆಂದೂ ತಿಳಿದೆವು. ಈ ಕಥೆ ವಿವಿಧ ರೀತಿಯಲ್ಲಿ ಲಡಾಖ್, ಸಿಂಕಿಯಾಂಗ್ ಮತ್ತು ಮಂಗೋಲಿಯಾದಲ್ಲಿ ಹರಡಿವೆ. ಆದರೆ ಎಲ್ಲಾ ಕಥೆಗಳು ಒಂದು ವಿಷಯದಲ್ಲಿ ಒಮ್ಮತವಾಗಿದೆ: ಯೇಸು ಕ್ರಿಸ್ತರು ಪಾಲೇಸ್ತೀನಿನಲ್ಲಿ ಹಾಜರಿಲ್ಲದಾಗ ಅವರು ಭಾರತದಲ್ಲೂ ಏಷ್ಯಾದ ಇನ್ನಿತರ ಭಾಗದಲ್ಲೂ ಇದ್ದರೆಂದು. ಈ ಕಥೆ ಎಲ್ಲಿ ಮತ್ತು ಯಾರಿಂದ ಉದ್ಭವವಾಯಿತು ಎಂಬುದು ಮುಖ್ಯವಲ್ಲ. ಪ್ರಾಯಶಃ ಇದು ನೆಸ್ಟೋರಿಯನ್ ಕ್ರೈಸ್ತರಿಂದ ಉದ್ಭವಿಸಿರಲೂ ಬಹುದು. ಈ ಕಥೆಯನ್ನು ಪೂರ್ಣ ವಿಶ್ವಾಸದಿಂದ ನಿರೂಪಿಸಲಾಗುತ್ತಿರುವುದು ಶ್ರದ್ಧಾರ್ಹವಾಗಿದೆ" (ಪುಟ 29).

ಮೇಲೆ ವಿವರಿಸಲಾದ ಚರ್ಮಪತ್ರದ ಲೇಖನದ ಪ್ರಕಾರ ಯೇಸು ಕ್ರಿಸ್ತರು ಪಾಲೇಸ್ತೀನಿಗೆ ಹಿಂದಿರುಗಿದಾಗ ಅವರಿಗೆ 29 ವರ್ಷವಾಗಿತ್ತು. ಅವರನ್ನು ಯಹೂದಿಗಳು ಎದುರಿಸಲಿಲ್ಲವೆಂದೂ ಅವರನ್ನು ಸ್ವಾಗತಿಸಿ, ಅವರ ಮಾತುಗಳಿಗೆ ಕಿವಿಗೊಟ್ಟು ಅವರಿಗೆ ಸಹಾಯಮಾಡಲು ಮುಂದಾದರೆಂದೂ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ರೋಮನ್ ಗವರ್ನರನಾದ ಪಿಲಾತನು ಅವರನ್ನು ಅನ್ಯಾಯವಾಗಿ ಶಿಕ್ಷಿಸಲು ಉದ್ಯುಕ್ತನಾದನೆಂದೂ ಈ ಚರ್ಮಪತ್ರಗಳಲ್ಲಿ ಬರೆಯಲಾಗಿದೆಯಷ್ಟೆ. ಇದು ಸುವಾರ್ತೆಗಳ ನಿರೂಪಣೆಗೆ ವಿರುದ್ಧವಾಗಿದೆ.

ಇದೇ ರೀತಿಯ ಚಾರಿತ್ರಿಕ ಸಂಗತಿಗಳನ್ನು ನಾವು ಪರಿಶೋಧಿಸುವಂತೆ ಈ ಸಂಗತಿಯನ್ನೂ ಪರಿಶೋಧಿಸಿದರೆ ಸತ್ಯವನ್ನು ತಲುಪಲು ಕಷ್ಟವಾಗದು. ಶಿಲುಬಾ ಸಂಭವದ ವಿವರಣೆಯನ್ನು ಓರ್ವ ದೃಷ್ಟಸಾಕ್ಷಿಯ ವಿವರಣೆಯಲ್ಲ. ಮತ್ತು ಇವುಗಳನ್ನು ನಿರೂಪಿಸಿದವನು ಯೇಸು ಕ್ರಿಸ್ತರ ಶಿಷ್ಯನೂ ಅಲ್ಲ. ಇವುಗಳೆಲ್ಲಾ ಯಾರೋ ಹೇಳಿದುದನ್ನು ಕೇಳಿ ಬರೆದುದಾಗಿವೆ. ಇಲ್ಲಿ ಯಥಾರ್ಥ ಸಂಭವಗಳನ್ನು ವಿವರಿಸುವಾಗ ನಿರೂಪಿಸುವ ವ್ಯಕ್ತಿಗೆ ಮೂಲ ಸಂಗತಿಗಳ ಕುರಿತು ಗಲಿಬಿಲಿಯುಂಟಾಗಿರಬಹುದು. ಅಥವಾ ಕಥೆಗಾರನೇ ತನಗೆ ದೊರೆತ ತಪ್ಪು ಸುದ್ದಿಗಳನ್ನಾಧರಿಸಿ ಕಥೆ ಬರೆದಿರಬಹುದು. ಈ ಪುಸ್ತಕದ ಲೇಖಕನೇ ಇದರ ಕುರಿತು ಈ ರೀತಿ ಬರೆದಿರುವನು:

"ನಮ್ಮ ಕಾಲದ ಹಾಗೆಯೇ ಆ ಪುರಾತನ ಕಾಲದಲ್ಲಿಯೂ ಪೌರ್ವಾತ್ಯ ದೇಶಗಳ ಸಾಮೂಹಿಕ ಜೀವನವು ಪೇಟೆಗಳಲ್ಲಿ ಕೇಂದ್ರೀಕೃತವಾಗಿದ್ದಿತು. ಆ ಸ್ಥಳಗಳಲ್ಲಿ ದೈನಂದಿನ ಸ್ಥಳೀಯ ವಾರ್ತೆಗಳನ್ನೂ ವಿದೇಶೀಯ ವ್ಯಾಪಾರಿಗಳಿಂದಲೂ ಅವರನ್ನು ಹಿಂಬಾಲಿಸುತ್ತಿದ್ದ ಫಕೀರರಿಂದಲೂ ಹರಡಲ್ಪಡುತ್ತಿದ್ದ ವಿದೇಶಿ ವಾರ್ತೆಗಳನ್ನೂ ಕೇಳ ಬಹುದಾಗಿತ್ತು. ಫಕೀರರು ಆಹಾರಕ್ಕೆ ಬದಲಾಗಿ ತಾವು ಕಂಡದ್ದನ್ನೂ ಕೇಳಿದ್ದನ್ನೂ ವಿವರಿಸುತ್ತಿದ್ದರು. ಅವರ ಜೀವನಮಾರ್ಗ ಇದೇ ಆಗಿದ್ದಿತು." (ಪುಟ 150)

"ಹಿಮಿಸ್ ಮಠದ ಲಾಮಾ ನನಗೆ ಓದಿ ಹೇಳಿದ ಎರಡು ಹಸ್ತಪ್ರತಿಗಳು ಟಿಬೇಟಿಯನ್ ಭಾಷೆಯಲ್ಲಿ ವಿವಿಧ ಹಸ್ತಪ್ರತಿಗಳಲ್ಲಿ ಬರೆಯಲ್ಪಟ್ಟ ವಿಷಯಗಳ ಸಾರವನ್ನೊಳಗೊಂಡಿದ್ದಿತು. ಟಿಬೇಟಿಯನ್ ಭಾಷೆಯಲ್ಲಿ ಬರೆಯಲ್ಪಟ್ಟ ಹಸ್ತಪ್ರತಿಗಳು ಲಾಸಾ ಲೈಬ್ರರಿಯಲ್ಲಿ ಭಾರತ, ನೇಪಾಲ ಮತ್ತು ಮಗದ ದೇಶಗಳಿಂದ ಕ್ರಿಸ್ತನ ಜನನದ ಇನ್ನೂರು ವರ್ಷಗಳ ನಂತರ ತಂದು ಶೇಖರಿಸಲ್ಪಟ್ಟ ಸುರುಳಿಪತ್ರಗಳಿಂದ ಭಾಷಾಂತರಿಸಲ್ಪಟ್ಟುವುಗಳಾಗಿದ್ದುವು. ಕ್ರಿಸ್ತನ ಕುರಿತು ಬರೆದ ವಿವರಗಳು ವಿವಿಧ ಸಂಗತಿಗಳ ಜೊತೆ ವಿಚಿತ್ರವಾಗಿ ಮಿಶ್ರ ಗೊಂಡಿದ್ದು ಆ ಕಾಲದ ಇತರ ಸಂಭವಗಳೊಂದಿಗೆ ಯಾವುದೇ ಸಂಬಂಧ ಸೂಚಿಸುವುದಿಲ್ಲ." (ಪುಟ 151).

ಬೌದ್ಧ ಭಿಕ್ಷುಗಳು ಸಮಾಚಾರ ಸಂಗ್ರಹಿಸುವ ಕ್ರಮವನ್ನು ಗಮನಿಸುವುದಾದರೆ ಅವರ ಲೇಖನಗಳು ಅಕ್ಷರಶಃ ಸರಿಯೆಂದು ಹೇಳಲು ಸಾಧ್ಯವಿಲ್ಲ. ಶಿಲುಬೆಯ ಸಂಭವಗಳನ್ನು ವಿವರಿಸಿದ ಕತೆಗಾರನು ಯಾರೆಂದು ತಿಳಿದಿಲ್ಲ. ಆತನು ವಿಶ್ವಾಸಾರ್ಹನೋ ಅಲ್ಲವೋ? ಎಂಬುದು ಸ್ಪಷ್ಟವಾಗಿಲ್ಲ. ಆದರೆ ನಾವು ಸುವಾರ್ತೆಗಳಲ್ಲಿ ಯಹೂದಿಗಳ ಭವಿಷ್ಯದ ಕುರಿತು ಯೇಸುಕ್ರಿಸ್ತರು ನುಡಿದ ಒಂದು ಭವಿಷ್ಯ ವಾಣಿಯನ್ನು ಕಾಣಬಹುದು. ಯಹೂದಿಗಳು ಯೇಸುಕ್ರಿಸ್ತರಿಗೆ ವಿರುದ್ಧವಾಗಿ ವರ್ತಿಸಿದ ಕಾರಣ ಅವರಿಗೆ ದೇವರ ಸಾಮ್ರಾಜ್ಯ ದೊರಕದು (ಎಂದರೆ ಅವರಲ್ಲಿ ಯಾವುದೇ ಪ್ರವಾದಿ ಬರಲಾರರು) ಎಂದು. ಆ ಭವಿಷ್ಯವಾಣಿ ಅಕ್ಷರಶಃ ಪೂರ್ತಿಯಾಗಿದೆ. ಆದುದರಿಂದ ಮೇಲೆ ವಿವರಿಸಲ್ಪಟ್ಟ ಬೌದ್ಧ ಮಠದಲ್ಲಿ ದೊರೆತ ಹಸ್ತ ಪ್ರತಿಗಳು ಸುವಾರ್ತೆಯಲ್ಲಿ ಬರೆಯಲಾದ ಘಟನೆಗಳಿಗೆ ಹೋಲಿಸಿ ನೋಡಿದರೆ ಪೂರ್ಣ ವಿಶ್ವಾಸನೀಯವಲ್ಲವೆಂದು ತೋರುತ್ತದೆ. ಈ ಪುರಾತನ ಲೇಖನಗಳಿಂದ ತಿಳಿದು ಬರುವ ಏಕಮಾತ್ರ ವಿಶ್ವಾಸನೀಯವಾದ ಸಂಗತಿ ಇದಾಗಿದೆ: ಯೇಸುಕ್ರಿಸ್ತರು ಭಾರತಕ್ಕೆ

ಖಂಡಿತವಾಗಿಯೂ ಹೋಗಿ ಅಲ್ಲಿ ದೀರ್ಘಕಾಲ ವಾಸಿಸಿದ್ದರು ಮತ್ತು ಅಲ್ಲಿ ಜನರಿಗೆ ದೇವರ ವಚನಗಳನ್ನು ಉಪದೇಶಿಸಿದ್ದರು. ಅವರು ಉಪದೇಶಿಸಿದರೆಂದು ಹೇಳಲ್ಪಡುವ ವಿಷಯಗಳಲ್ಲಿ ಕೆಲವನ್ನು ನಾನು ಮೇಲೆ ಉದ್ಧರಿಸಿರುವೆನು ಅವು ನಿಜವಾಗಿ ಅತ್ಯುಚ್ಛವೂ ಪ್ರವಾದಿಗೆ ಅನುಯೋಜ್ಯವೂ ಆಗಿದೆ.

ಯೇಸು ಕ್ರಿಸ್ತರು ಭಾರತಕ್ಕೆ ಹೋಗಿಯೇ ಇಲ್ಲವಾದರೆ ಬೌದ್ಧ ಚರಿತ್ರೆಗಾರರು ಅವರು ಭಾರತದಲ್ಲಿ ಉಪದೇಶಿಸಿದ ಕುರಿತು ಬರೆಯುತ್ತಿರಲಿಲ್ಲ. ಯೇಸುಕ್ರಿಸ್ತರು ಭಾರತಕ್ಕೆ ಬಂದು ಉಪದೇಶಿಸುದುದನ್ನು ನಿಷೇಧಿಸಲು ಅವರಿಗೆ ಸಾಧ್ಯವಿರಲಿಲ್ಲ. ಯೇಸು ಕ್ರಿಸ್ತರ ಉಪದೇಶಗಳು ಬೌದ್ಧ ಧರ್ಮೀಯರ ಮತ್ತು ಬ್ರಾಹ್ಮಣರ ಉಪದೇಶಗಳಿಗಿಂತ ಉತ್ತಮವಾಗಿದ್ದುವೆಂದು ಸಹ ಅವರು ಅರಿತಿದ್ದರು. ಆದುದರಿಂದ ಗೌತಮ ಬುದ್ಧನ ಮಹತ್ವವನ್ನು ತೋರಿಸಲಿಕ್ಕಾಗಿ ಅವರು ಉದ್ದೇಶಪೂರ್ವಕವಾಗಿ ಯೇಸುಕ್ರಿಸ್ತರ ಜೀವನ ಚರಿತ್ರೆಯನ್ನು ತಿರುಗುಮುರುಗಾಗಿ ಬರೆದರು. ಪ್ರವಾದಿಯಾಗಿರುವಾಗಲೇ ಯೇಸುಕ್ರಿಸ್ತರು ಭಾರತಕ್ಕೆ ಬಂದಿದ್ದರೆಂದೂ ಪ್ರಸ್ತುತ ಉಪದೇಶಗಳು ಅವರದೇ ಆಗಿವೆಯೆಂದೂ ಸ್ಪಷ್ಟಪಡಿಸುವ ಬದಲು ಅವರು ಭಾರತಕ್ಕೆ ಬಂದುದು ಪ್ರವಾದಿಯಾಗುವ ಮೊದಲೆಂದೂ, ಮದುವೆಯಾಗುವುದರಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಮತ್ತು ಬುದ್ಧನ ತತ್ವಗಳನ್ನು ಕಲಿಯಲಿಕ್ಕಾಗಿ ಚಿಕ್ಕ ವಯಸ್ಸಿನಲ್ಲಿಯೇ ಅವರು ಭಾರತಕ್ಕೆ ಬಂದರೆಂದೂ ಯೇಸುಕ್ರಿಸ್ತರ ಉಪದೇಶಗಳನ್ನು ಬುದ್ಧನ ಉಪದೇಶಗಳೆಂದೂ ಸಹ ಅವರು ಬರೆದರು. ಯೇಸುಕ್ರಿಸ್ತರ ಕಾಲದಲ್ಲಿ ಬೌದ್ಧಧರ್ಮದ ಕುರಿತು ಪಾಲೆಸ್ತೀನ್ ರಾಜ್ಯದಲ್ಲಿ ತಿಳಿದಿಲ್ಲವೆಂಬುದು ಸತ್ಯ ಸಂಗತಿಯಾಗಿದೆ.*

"ಸ್ವಂತ ಮನೆಯ ಪ್ರೀತಿ ಮಾನವ ಹೃದಯದಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಅತ್ಯಂತ ಕಠಿಣ ಪರಿಸ್ಥಿತಿಯಿಂದ ನಿರ್ಬಂಧಿತನಾಗದೆ ಒಬ್ಬನೂ ಸಹ ತನ್ನ ಬಂಧು ಬಾಂಧವರ ಸಂಬಂಧ ತೊರೆಯಲು ಆಲೋಚಿಸಲಾರನು". ಆದರೆ ಇಂತಹ ಕಠಿಣ ಪರಿಸ್ಥಿತಿ ಯೇಸು ಕ್ರಿಸ್ತರ ಜೀವನದಲ್ಲಿ ಶಿಲುಬೆಯ ಸಂಭವದ ನಂತರವಲ್ಲದೆ ಬೇರೆ ಯಾವಾಗಲಾದರೂ ಉಂಟಾಗಲಿಲ್ಲ. ಮೃತ್ಯುವಿನ ದವಡೆಯಿಂದ ರಕ್ಷಿಸಲ್ಪಟ್ಟ ಆ ಸಮಯದಲ್ಲಿ ಅವರಿಗೆ ಪಾಲೆಸ್ತೀನ್ ರಾಜ್ಯದಲ್ಲಿ ಜೀವಿಸಿರಲು ಸಾಧ್ಯವಿರಲಿಲ್ಲ.

ಇನ್ನೊಂದು ಮುಖ್ಯ ಸಂಗತಿ ಸಹ ನಾನು ಇಲ್ಲಿ ವಿವರಿಸಲು ಇಚ್ಛಿಸುತ್ತೇನೆ. ಬುದ್ಧನ ಜೀವನವೂ ಉಪದೇಶಗಳೂ ಯೇಸುಕ್ರಿಸ್ತರ ಜೀವನ ಮತ್ತು ಉಪದೇಶಗಳಿಗೆ ಬಹಳ ಹತ್ತಿರದ ಹೋಲಿಕೆಯನ್ನು ಹೊಂದಿದುದರಿಂದ ಹಲವಾರು ಚಿಂತಾಶೀಲರು ಕ್ರೈಸ್ತಧರ್ಮವು ಬೌದ್ಧಮತದ ಯಥಾಪ್ರತಿಯೆಂದು ಘೋಷಿಸಿರುವರು.

ಡಾ। ಕೆ. ಎಸ್. ಮೆಕ್ ಡೊನಾಲ್ಡ್ ಹೀಗೆಂದು ಬರೆಯುತ್ತಾರೆ:—

"ಮಿಸ್ಟರ್ ಆರ್. ಸಿ. ದತ್ತ್ Ancient India (ಪ್ರಾಚೀನ ಭಾರತ) ಎಂಬ ತನ್ನ ಗ್ರಂಥದಲ್ಲಿ ಬೌದ್ಧ ಮತ್ತು ಕ್ರೈಸ್ತ ಧರ್ಮಗಳ ಕುರಿತು ಬರೆದ ಅಧ್ಯಾಯವನ್ನು ಈ ರೀತಿ ಪ್ರಾರಂಭಿಸಿರುತ್ತಾರೆ: ಬೌದ್ಧ ಧರ್ಮ ಮತ್ತು ಕ್ರೈಸ್ತಧರ್ಮಗಳ ನೈತಿಕ ತತ್ವಗಳೂ ಉಪದೇಶಗಳೂ ಬಹಳ ಸಮಾನತೆಯನ್ನು ಹೊಂದಿವ್ವು

---

*ಅಮೆರಿಕದಲ್ಲಿ ಅಹ್ಮದಿಯಾ ಮಿಶನರಿಯಾಗಿದ್ದ ದಿವಂಗತ ಸೂಫಿ ಎಂ. ಆರ್. ಬಂಗಾಳಿಯವರು ಬರೆದ "ಯೇಸುವಿನ ಸಮಾಧಿ" (The Tomb of Jesus) ಎಂಬ ಪುಸ್ತಕದಲ್ಲಿ ಮಾಕ್ಸ್ ಮುಲ್ಲರ್ ಮತ್ತು ರೈಸ್ ಡೇವಿಸರ ಅಭಿಪ್ರಾಯಗಳನ್ನು ಈ ರೀತಿ ಸೇರಿಸಲಾಗಿದೆ.

ಮಾಕ್ಸ್ ಮುಲ್ಲರ್: "ಕ್ರೈಸ್ತಮತ ಮತ್ತು ಬೌದ್ಧಮತಗಳ ಸಾಮ್ಯತೆಗಳ ಕುರಿತು ಇತ್ತೀಚಿಗೆ ಪದೇ ಪದೇ ಪ್ರಸ್ತಾವಿಸಲಾಗುತ್ತದೆ. ಯೇಸುಕ್ರಿಸ್ತನು ಬೌದ್ಧಮತಗಳಿಂದ ಆಕರ್ಷಿತನಾಗಿದ್ದನು ಎಂಬ ಅಭಿಪ್ರಾಯವನ್ನು ಹಲವು ಪ್ರಸಿದ್ಧ ಲೇಖಕರು ಮುಂದಿಟ್ಟಿದ್ದಾರೆ. ಕ್ರಿಸ್ತನ ಕಾಲದಲ್ಲಿ ಬೌದ್ಧಮತವು ಪೆಲೆಸ್ತೀನಕ್ಕೆ ತಲುಪಲು ಕಾರಣವಾದ ಐತಿಹಾಸಿಕ ಮಾರ್ಗವನ್ನು ಕಂಡುಹಿಡಿಯಲು ಇಂದಿನ ವರೆಗೂ ಕಷ್ಟಕರವಾಗಿದೆ." (Max Muller, Nineteenth Century, Oct. 1894)

ರೈಸ್‌ಡೇವಿಸ್: "ಬೌದ್ಧಮತದಲ್ಲೂ ಕ್ರೈಸ್ತಮತದಲ್ಲೂ ಸಾಮಾನ್ಯವಾಗಿ ತೋರುವ ವಿಚಾರಗಳ ವಾಸ್ತವಿಕ ಹಾಗೂ ನೇರ ಸಂಪರ್ಕದ ಯಾವುದೇ ಪುರಾವೆ ನನಗೆ ಕಂಡುಹಿಡಿಯಲು ಸಾಧ್ಯವಾಗಲಿಲ್ಲ" (Rhys Davids, Lecture on the Origins of Buddhism, Hibbert Lectures, P. 151).

—ಸಂಪಾದಕ.

ಅವುಗಳಲ್ಲಿರುವ ಪರಸ್ಪರ ಬಾಂಧವ್ಯ ಬಹಳ ಕಾಲದಿಂದ ಶಂಕಿಸಲ್ಪಟ್ಟಿದೆ" (The Story of Barlaam and Introduction, P. XLVII, calcutta, 1895)

ಡಾ। ಇ. ಜೆ. ಐಟೆಲ್ ಈ ರೀತಿ ಬರೆದಿರುವರು।–

"ಬುದ್ಧನ ಜೀವನವನ್ನು ಸರಳವಾಗಿ ವಿವರಿಸಿದ ಈ ಲೇಖನವನ್ನು ಲಕ್ಷ್ಯವಿಟ್ಟು ಪಠಿಸಿದ ವಾಚಕರಿಗೆ ಬುದ್ಧನ ಜೀವನದ ಹಲವಾರು ಘಟನೆಗಳು ಸುವಾರ್ತೆಯಲ್ಲಿ ವಿವರಿಸಲಾದ ನಮ್ಮ ರಕ್ಷಕನ (ಯೇಸು ಕ್ರಿಸ್ತರ) ಜೀವಿತ ಘಟನೆಗಳಿಗೆ ಸಮಾನವಾಗಿರುವುದನ್ನು ಕಾಣಬಹುದು.

"ಶಾಕ್ಯಮುನಿ ಬುದ್ಧನು ಸ್ವರ್ಗದಿಂದ ಬಂದನೆಂದೂ ಕನ್ಯೆಗೆ ಜನಿಸಿದನೆಂದೂ ದೇವತೆಗಳು ಸ್ವಾಗತಿಸಿದರೆಂದೂ ಭವಿಷ್ಯವನ್ನು ಬಲ್ಲ ವೃದ್ಧ ಸಂತನಿಂದ ಸ್ವೀಕರಿಸಲ್ಪಟ್ಟನೆಂಬೂ, ದೇವಾಲಯದಲ್ಲಿ ಪ್ರದರ್ಶಿತನಾದನೆಂದೂ, ನೀರಿನಲ್ಲಿಯೂ ಅನಂತರ ಬೆಂಕಿಯಲ್ಲಿಯೂ ಪವಿತ್ರ ಸ್ನಾನ ಮಾಡಿಸಲ್ಪಟ್ಟನೆಂದೂ, ದೊಡ್ಡ ದೊಡ್ಡ ವಿದ್ವಾಂಸರನ್ನು ತನ್ನ ಜ್ಞಾನದಿಂದಲೂ ಸಮರ್ಪಕ ಉತ್ತರದಿಂದಲೂ ಚಕಿತರಾಗುವಂತೆ ಮಾಡಿದನೆಂದೂ, ಸೈತಾನನ ಪ್ರೇರಣೆಗೆ ಒಳಗಾಗದಿದ್ದನೆಂದೂ,ಪಾಪಿಗಳ ಮತ್ತು ಸಾಮಾನ್ಯ ಜನರ ಸ್ನೇಹಿತನಾಗಿದ್ದನೆಂದೂ ಒಂದು ಪರ್ವತದ ಮೇಲೆ ಆತನ ಶರೀರ ರೂಪಾಂತರಗೊಂಡನಂತರ ನರಕಕ್ಕೆ ಇಳಿದು ಸ್ವರ್ಗಕ್ಕೇರಿದನೆಂದೂ ಹೇಳಲಾಗುತ್ತಿದೆ. ಸಂಕ್ಷಿಪ್ತವಾಗಿ ಯೇಸುಕ್ರಿಸ್ತರನ್ನು ಶಿಲುಬೆಗೇರಿಸಲ್ಪಟ್ಟ ಒಂದು ಸಂಗತಿ ಬಿಟ್ಟರೆ ಯೇಸುಕ್ರಿಸ್ತರ ಜೀವಿತದ ಎಲ್ಲಾ ಪ್ರಾಮುಖ್ಯ ಘಟನೆಗಳು ಬೌದ್ಧ ಧಾರ್ಮಿಕ ಗ್ರಂಥಗಳಲ್ಲಿ ಶಾಕ್ಯಮುನಿ ಗೌತಮಬುದ್ಧನ ಜೀವಿತದ ಕುರಿತು ವಿವರಿಸಲಾಗಿ ಕಾಣಬಹುದು. ಈ ಬುದ್ಧ ಕ್ರಿಸ್ತಪೂರ್ವ ಸುಮಾರು 275 ವರ್ಷಗಳಿಂದ 543 ವರ್ಷಗಳಷ್ಟು ಹಿಂದೆ ಜನಿಸಿ ಜೀವಿಸಿದ್ದನು. ಯೇಸುಕ್ರಿಸ್ತರು ತನ್ನ ಬಾಲ್ಯಕಾಲ ಮತ್ತು ಯೌವನದ ಮಧ್ಯದ 18 ವರ್ಷಗಳಷ್ಟು ಕಾಲ ಭಾರತಕ್ಕೆ ಹೋಗಿ ಅಲ್ಲಿಂದ ತನ್ನ ಮೂವತ್ತನೆಯ ಪ್ರಾಯದಲ್ಲಿ ಹಿಂದಕ್ಕೆ ಬಂದು ಶಾಕ್ಯಮುನಿ ಬುದ್ಧನ ತತ್ವಗಳನ್ನೂ ಜೀವನ ರೀತಿಯನ್ನೂ ಅನುಕರಿಸಿದರೆಂದು ನಾವು ಒಬ್ಬ ಶಂಕಿಸುವವ ಹೇಳುವಂತೆ ನಂಬಬೇಕೋ? ಅಥವಾ ಕೆಲವು ಜೆಸ್ಯುವಿಟ್ ಪಾದರಿಗಳು ಹೇಳುವಂತೆ ಮುಂದೆ ಜನಿಸಲಿರುವ ಮೆಸ್ಸಾಯನ ಜೀವನ ಚರಿತ್ರೆಯನ್ನು ಮುಂಚಿತವಾಗಿ ಅರಿತ ಸೈತಾನನು ತಾನೇ ಶಾಕ್ಯಮುನಿ ಬುದ್ಧನಾಗಿ ಜನಿಸಿ ಯೇಸು ಕ್ರಿಸ್ತರ ಜೀವನದ ವ್ಯಂಗಚಿತ್ರ ಪ್ರದರ್ಶಿತಗೊಳಿಸಿದನೆಂಬ ಉಪಾಯಕರವಾದ ಉತ್ತರವನ್ನು ಹೇಳಬೇಕೆ? (Eitel: Lecture on Buddhism, Third edition, London 1884).

ಯೇಸು ಕ್ರಿಸ್ತರ ಜೀವಿತಕಾಲದ ಘಟನೆಗಳೆಂದು ವಿವರಿಸಲ್ಪಟ್ಟ ಸಂಭವಗಳೂ ಅವರ ಉಪದೇಶಗಳೂ ಯಥಾರ್ಥವಾಗಿ ಬೌದ್ಧ ಧರ್ಮದಿಂದ ಎರವಲು ಪಡೆದುವೋ? ಅಥವಾ ಅದು ಡಾಕ್ಟರ್ ಐಟೆಲ್ ಹೇಳುವಂತೆ ಅಸಾಧಾರಣ ಸಾಮ್ಯ ಘಟನೆಗಳೇ? ಅವರು ಯೌವ್ವನ ಕಾಲದಲ್ಲಿ ಭಾರತಕ್ಕೆ ಹೋಗಿದ್ದರೇ? ಅಥವಾ ಇವೆಲ್ಲಾ ಒಬ್ಬ ಜೇಸ್ಸುವಿಟ್ ಪಾದರಿ ಹೇಳುವಂತೆ ಪಿಶಾಚಿಯ ಕೃತ್ಯಗಳೇ? ತೊಡಕಿನ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ. ಈ ಕಾಲದ ಪ್ರವಾದಿಯಾದ ಅಹ್ಮದರು ಈ ವಿಷಯದ ಕುರಿತು ತನ್ನ "ಮಸೀಹ್ ಹಿಂದುಸ್ತಾನ್ ಮೇ" (ಭಾರತದಲ್ಲಿ ಯೇಸು ಕ್ರಿಸ್ತರು) ಎಂಬ ಗ್ರಂಥದಲ್ಲಿ ಈ ರೀತಿ ಬರೆದಿರುವರು:—

"ಬುದ್ಧ ಮತ್ತು ಯೇಸು ಕ್ರಿಸ್ತರು ಹಲವಾರು ಹೋಲಿಕೆಗಳಿಂದ ಸಮಾನರಂತೆ ತೋರಲು ಕಾರಣವೇನೆಂಬ ಪ್ರಶ್ನೆಯ ಕುರಿತು ಗಾಢವಾಗಿ ಚಿಂತಿಸುವುದು ಅಗತ್ಯವಾಗಿದೆ. ಭಾರತದ ಯಾತ್ರೆಯ ಕಾಲದಲ್ಲಿ ಯೇಸು ಕ್ರಿಸ್ತರು ಬೌದ್ಧಮತ ತತ್ವಗಳನ್ನರಿತು ಬುದ್ಧನ ಜೀವನದ ಸಂಭವಗಳನ್ನು ತಿಳಿದುಕೊಂಡು ತನ್ನ ಊರಿಗೆ ಹಿಂತಿರುಗಿದ ನಂತರ ಈ ಜ್ಞಾನದ ಆಧಾರದಿಂದ ಸುವಾರ್ತೆಗಳನ್ನು ವಿರಚಿಸಿದರೆಂದು ಆರ್ಯ ಸಮಾಜದವರು ಹೇಳುತ್ತಾರೆ. ಇದು ಅವರ ತಪ್ಪು ಭಾವನೆಯಾಗಿದೆ. ಯೇಸು ಕ್ರಿಸ್ತರು ಶಿಲುಬೆಯ ಘಟನೆಗೆ ಮೊದಲು ಭಾರತಕ್ಕೆ ಬಂದರೆಂದು ಹೇಳುವುದು ಸರಿಯಲ್ಲ. ಆ ಸಮಯದಲ್ಲಿ ವಿದೇಶಯಾನ ಗೈಯ್ಯುವ ಯಾವುದೇ ಅವಶ್ಯಕತೆ ಅವರಿಗಿರಲಿಲ್ಲ. ಆದರೆ ಶಾಂ (ಸಿರಿಯಾ) ದೇಶದ ಯಹೂದಿಗಳು ಅವರನ್ನು ತಿರಸ್ಕರಿಸಿ ತಮ್ಮ ವಿಶ್ವಾಸ ಪ್ರಕಾರ ಅವರನ್ನು ಶಿಲುಬೆಗೇರಿಸಿ ಕೊಲ್ಲಲು ಪ್ರಯತ್ನಿಸಿದಾಗ ಅಂತಹ ಯಾತ್ರೆ ಅವರಿಗೆ ಅನಿವಾರ್ಯವಾಯಿತು. ತನ್ನ ನಾಡಿನಲ್ಲಿರುವ ಯಹೂದಿಗಳಿಗೆ ಉಪದೇಶಿಸುವುದು ವ್ಯರ್ಥವೆಂದೂ ಅವರು ಸತ್ಯವನ್ನು ಸ್ವೀಕರಿಸಲಾರದಷ್ಟು ಕಠೋರ ಹೃದಯರೂ ದುಶ್ಶೀಲರೂ ಆಗಿರುವರೆಂದೂ ಮನಗಂಡ ಯೇಸುಕ್ರಿಸ್ತರಿಗೆ

ಭಾರತದ ಕಡೆಗೆ ವಲಸೆ ಹೋಗಿರುವ ಯಹೂದಿಗಳ ಹತ್ತು ಗೋತ್ರಗಳ ಕುರಿತು ದೇವರು ತಿಳಿಸಿದುದರಿಂದ ಆ ಪ್ರದೇಶಗಳಿಗೆ ಹೊರಟರು. ಆ ಕಾಲದಲ್ಲಿ ಎಷ್ಟೋ ಯಹೂದಿಗಳು ಬೌದ್ಧಮತಾವಲಂಭಿಗಳಾಗಿ ಪರಿವರ್ತನೆ ಹೊಂದಿರುವುದನ್ನು ಕಂಡಾಗ ತನ್ನ ಲಕ್ಷ್ಯವನ್ನು ಬೌದ್ಧಮತಕ್ಕೆ ಹರಿಯಿಸದೆ ಇರಲು ಅವರಿಗೆ ನಿರ್ವಾಹವಿರಲಿಲ್ಲ. ಬೌದ್ಧ ಮತಸ್ಥರು ಒಬ್ಬ ಮತ್ತೀಯ (ಮೈತ್ರೇಯ) ಬುದ್ಧನ ಆಗಮನದ ನಿರೀಕ್ಷೆಯಲ್ಲಿ ಇದ್ದರು. ಆದುದರಿಂದ ಯೇಸುಕ್ರಿಸ್ತರ ಬಿರುದುನಾಮ ಮತ್ತು ಅವರ ಕೆಲವು ನೈತಿಕ ಉಪದೇಶಗಳೂ (ಉದಾಹರಣೆಗಾಗಿ "ವೈರಿಯನ್ನು ಪ್ರೀತಿಸು". "ಕೆಟ್ಟದ್ದನ್ನು ಎದುರಿಸಬೇಡ") ಶ್ವೇತವರ್ಣದ ಮತ್ತೀಯ (ಎಂದರೆ ಮಸೀಹ ಅಥವಾ ಮೆಸ್ಸಾಯ)ನ ಕುರಿತು ಗೌತಮ ಬುದ್ಧ ಹೇಳಿದ ಭವಿಷ್ಯ ನುಡಿಯೂ ಈ ರೀತಿಯ ಇತರ ಸಾಕ್ಷ್ಯಗಳೂ ಕಾರಣವಾಗಿ ಬೌದ್ಧ ಮತೀಯರು ಯೇಸುಕ್ರಿಸ್ತರನ್ನು ಬುದ್ಧನ ಅವತಾರವೆಂದು ಪರಿಗಣಿಸಿದರು. ಯೇಸುಕ್ರಿಸ್ತರ ಸ್ಥಾನವನ್ನು ಸೂಚಿಸುವ ನಾಮಧೇಯಗಳೂ, ಅವರ ಕೆಲವು ನೈತಿಕ ಉಪದೇಶಗಳೂ ಅವರ ಜೀವಿತದ ಕೆಲವು ಘಟನೆಗಳೂ ಉದ್ದೇಶಪೂರ್ವಕವಾಗಿಯೋ ಅಥವಾ ಅಲ್ಲದೆಯೋ ಬುದ್ಧನಿಗೆ ಸಂಬಂಧಿಸಿದವುಗಳೆಂದು ಸೂಚಿಸಿರುವುದು ಸಂಭವನೀಯವಾಗಿದೆ. ಹಿಂದುಗಳು ಚಾರಿತ್ರಿಕ ಸಂಭವಗಳ ಉಲ್ಲೇಖನದಲ್ಲಿ ಹೆಚ್ಚಿನ ದಕ್ಷತೆಯನ್ನು ತೋರಿಸಿದ ಪುರಾವೆ ಸಿಗದುದರಿಂದ ಹೀಗೆ ಹೇಳಬಹುದಾಗಿದೆ. ಶ್ರೀ ಬುದ್ಧನ ಜೀವನ ಚರಿತ್ರೆ ಯೇಸುಕ್ರಿಸ್ತರ ಕಾಲದ ವರೆಗೆ ಲಿಖಿತರೂಪದಲ್ಲಿ ಸಂಗ್ರಹಿಸಲ್ಪಟ್ಟಿರಲಿಲ್ಲ.* ಆದುದರಿಂದ ಬುದ್ಧಮತದ ಪುರೋಹಿತರು ತಾವು ಇಚ್ಛಿಸಿದುದನ್ನೆಲ್ಲಾ ಬುದ್ಧನಿಗೆ ಸಂಬಂಧಿಸಿದುದಾಗಿ ಬರೆಯಲು ಸಂದರ್ಭ ಒದಗಿತು."

---

*ಡಾ। ಐಟೆಲ್ ಈ ರೀತಿ ಬರೆಯುತ್ತಾರೆ:—

"ಬುದ್ಧನ ಚರಿತ್ರೆಯಲ್ಲಿ ಕಾಣುವ ಕ್ರೈಸ್ತನ ಪ್ರಭಾವದ ಪ್ರತಿಯೊಂದು ಉದಾಹರಣೆಯೂ ತಾರತಮ್ಯವಾಗಿ ನೋಡುವುದಾದರೆ ಆಧುನಿಕವೆಂದು ಹೇಳಬಹುದು. ಸುವಾರ್ತೆಗಳ ಅತ್ಯಂತ ಪ್ರಾಚೀನ ಪ್ರತಿಗಳಿಗಿಂತ ಪ್ರಾಚೀನವಾದ ಯಾವುದೇ ಒಂದು ಬೌದ್ಧಮತ ಸಂಬಂಧವಾದ ಹಸ್ತಪ್ರತಿ ದೊರೆಯುವುದು ದುರ್ಲಭ" (Eitel: Lecture on Buddhism Third edition London 1884 P. 16)

ಡಾಕ್ಟರ್ ಹೆರ್ಮನ್ ಓಲ್ಡನ್‌ಬರ್ಗ್ ಈ ರೀತಿ ಬರೆಯುತ್ತಾರೆ:—

ಶ್ರೀಬುದ್ಧನ ಧಾರ್ಮಿಕ ಉಪದೇಶಗಳ ಕೆಲವು ಉದಾಹರಣೆಗಳನ್ನು ಸೂಚಿಸಿದ ನಂತರ ವಾಗ್ದತ್ತ ಮಸೀಹರಾದ ಹಝ್ರತ್ ಅಹ್ಮದ್ ಈ ರೀತಿ ಬರೆದಿರುವರು: "ಈ ಧಾರ್ಮಿಕ ಉಪದೇಶಗಳೂ ಈ ರೀತಿಯ ದೃಷ್ಟಾಂತ ಕಥನಗಳೂ (ಯೇಸುಕ್ರಿಸ್ತರ ಕಥನ ಶೈಲಿಯನ್ನನುಸರಿಸಿ ನುಡಿದ ಕಥೆಗಳೂ) ಇತರ ಕೆಲವು ಸಂಗತಿಗಳೂ ಇದು ಯೇಸುಕ್ರಿಸ್ತರ ಉಪದೇಶಗಳಅನುಕರಣೆಯೆಂದು ಸೂಚಿಸುತ್ತವೆ. ಯೇಸುಕ್ರಿಸ್ತರು ಭಾರತಕ್ಕೆ ಬಂದು, ಅಲ್ಲಲ್ಲಿ ಉಪದೇಶಿಸಿದಾಗ ಬೌದ್ಧ ಮತಾವಲಂಬಿಗಳು ಅವರನ್ನು ಭೇಟಿಯಾಗಿ ಅವರು ಮಹಾತ್ಮರೆಂದು ಮನಗಂಡು ಅವರ ಉಪದೇಶಗಳನ್ನು ತಮ್ಮ ಗ್ರಂಥಗಳಲ್ಲಿ ಬರೆದಿಟ್ಟರು. ಇಷ್ಟುಮಾತ್ರವಲ್ಲ, ಅವರು ಯೇಸು ಕ್ರಿಸ್ತರನ್ನು ಶ್ರೀಬುದ್ಧ ಎಂದೇ ಕರೆದರು. ಒಳ್ಳೆಯ ವಸ್ತುವನ್ನು ಸ್ವಾಧೀನಪಡಿಸಿಕೊಳ್ಳುವ ಅಭಿಲಾಷೆ ಮನುಷ್ಯ ಸಹಜವಾಗಿದೆ. ತಮ್ಮ ಮುಂದೆ ಯಾರಾದರೂ ಯಾವುದಾದರೂ ಜಾಣ್ಮೆಯ ಅಭಿಪ್ರಾಯ ವ್ಯಕ್ತಗೊಳಿಸಿದರೆ ಅದನ್ನು ಗಮನಿಸಿ ನೆನಪಿನಲ್ಲಿಡುವುದು ಸಹ ಜನರೆಡೆ ಯಲ್ಲಿ ಸಾರ್ವತ್ರಿಕವಾಗಿದೆ".

"ಆದುದರಿಂದ ಬೌದ್ಧ ಮತಾನುಯಾಯಿಗಳು ಸುವಾರ್ತೆಯನ್ನು ಪೂರ್ಣವಾಗಿ ತಮ್ಮ ಗ್ರಂಥಗಳಲ್ಲಿ ಪುನಃ ಚಿತ್ರೀಕರಣ ಮಾಡಿದುದು ಸಂಭಾವ್ಯವಾಗಿದೆ... ಇದು ಸಂಭವಿಸಿದುದು ಯೇಸು ಕ್ರಿಸ್ತರು ಭಾರತಕ್ಕೆ ಭೇಟಿಯಿತ್ತು ಬೌದ್ಧಮತಾನುಯಾಯಿಗಳೊಡನೆ ದೀರ್ಘಕಾಲ ವಾಸಿಸಿದ ಕಾರಣದಿಂದಾಗಿದೆ. ಅವರ ಇರುವಿಕೆ ಬೌದ್ಧಮತಾನುಯಾಯಿಗಳಿಗೆ ಭಾಗ್ಯದಾಯಕವಾಯಿತು".

ಯೇಸು ಕ್ರಿಸ್ತರ ಜೀವಿತ ಘಟನೆಗಳೂ ಧಾರ್ಮಿಕ ಉಪದೇಶಗಳೂ ಬೌದ್ಧ ಧರ್ಮಗ್ರಂಥಗಳಲ್ಲಿ ನುಸುಳಿಕೊಂಡು ಗೌತಮ ಬುದ್ಧನಿಗೆ ಸಂಬಂಧಿಸಿದುದಾಗಿ ಚಿತ್ರೀಕೃತವಾಗಿರಲು ಕಾರಣವೇನು? ಎಂಬ ಪ್ರಶ್ನೆಗೆ ಮೇಲೆ ಬರೆದುದು ವಿಚಾರಪ್ರದವಾದ ವಿವರಣೆಯೂ ಸಮಾಧಾನಕಾರಕ ಉತ್ತರವೂ ಆಗಿದೆಯೆಂದು ನನ್ನ ಅಭಿಪ್ರಾಯವಾಗಿದೆ. ●

---

"ಇದನ್ನೊಂದು ಅತಿ ಪ್ರಧಾನ ಹೇಳಿಕೆಯಾಗಿ ಪರಿಗಣಿಸಬಹುದು; ಪಾಲಿ ಭಾಷೆಯ ಹಸ್ತಪ್ರತಿಗಳಷ್ಟು ಪ್ರಾಚೀನ ಕಾಲದ ಯಾವುದೇ ಬುದ್ಧ ಚರಿತ್ರೆಯು ನಮಗೆ ದೊರಕಿರುವುದಿಲ್ಲ. ಆ ಕಾಲದಲ್ಲಿ ಅಂತಹ ಯಾವುದೇ ಕೃತಿ ರಚಿತವಾಗಿರಲಿಲ್ಲವೆಂದು ಸಹ ಪ್ರತಿಘಟನೆಯ ಭಯವಿಲ್ಲದೆ ನಾವು ಹೇಳಬಲ್ಲೆವು" (Oldenberg: Buddha, His Life, His Doctrine, His Order, Page 78 William & Norgate, 1882) (ಮುಂದುವರಿಯುವುದು)

# ಪಶ್ಚಿಮ ದಿಕ್ಕಿನಿಂದ ಸೂರ್ಯೋದಯ - 3

## ಹೇಂಬರ್ಗಿನ ಫಝ್‌ಲೆ ಉಮರ್ ಮಸೀದಿ

ಜರ್ಮನ್‌ನಲ್ಲಿ ಅಹ್ಮದಿಯಾ ಪ್ರಚಾರ ಕಾರ್ಯವು 1949ರಿಂದ ಪ್ರಾರಂಭವಾಯಿತು. ಚೌಧರಿ ಅಬ್ದುಲ್ ಲತೀಫ್ ಸಾಹೇಬರು ಅಲ್ಲಿಗೆ ಮೊತ್ತಮೊದಲಿನ ಮಿಶನರಿಯಾಗಿ ನಿಯೋಗಿಸಲ್ಪಟ್ಟರು. ಮುಂದೆ ಉತ್ತರ ಯುರೋಪಿನ ಇಸ್ಲಾಮಿಕ ಕೇಂದ್ರವಾಗಿ ಶೋಭಿಸಿದ ಹೇಂಬರ್ಗ್‌ನಲ್ಲಿ ಅವರು ಇಸ್ಲಾಮಿಕ ಪ್ರಬೋಧನಾ ಕಾರ್ಯವನ್ನು ಪ್ರಾರಂಭಿಸಿದರು.

1955ರಲ್ಲಿ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ (ಖಲೀಫತುಲ್ ಮಸೀಹ್ II) ಹೇಂಬರ್ಗ್ ಸಂದರ್ಶಿಸಿದಾಗ ಮಿಶನ್ ಕಾರ್ಯಗಳನ್ನು ವಿಪುಲಗೊಳಿಸುವ ಅನೇಕ ಕಾರ್ಯಕ್ರಮಗಳನ್ನು ರೂಪೀಕರಿಸಲಾಯಿತು. 1957ನೇ ಇಸವಿಯು ಜರ್ಮನಿನ ಇಸ್ಲಾಮಿಕ ಚರಿತ್ರೆಯಲ್ಲಿ ಅತಿ ಮಹತ್ವದ್ದಾಗಿದೆ. ಆ ವರ್ಷ ಫೆಬ್ರವರಿ 23ರಂದು ಹೇಂಬರ್ಗ್ ನಗರದಲ್ಲಿ ಒಂದು ಅಹ್ಮದಿಯಾ ಮಸೀದಿಗೆ ಶಿಲಾನ್ಯಾಸ ಮಾಡಲಾಯಿತು. ಪಾಶ್ಚಾತ್ಯ ಕ್ರೈಸ್ತ ಸಾಮ್ರಾಜ್ಯದ ಹೃದಯದಲ್ಲಿ ಇನ್ನೊಂದು ಮುಸ್ಲಿಂ ಮಸೀದಿ !

'ಫಝ್‌ಲೆ ಉಮರ್ ಮೋಸ್ಕ್' ಎಂಬ ಹೆಸರಿನ ಈ ಮಸೀದಿಯನ್ನು ಅದೇ ವರ್ಷ ಜೂನ್ 22ರಂದು ಚೌಧರಿ ಮುಹಮ್ಮದ್ ಝಫರುಲ್ಲಾ ಖಾನ್ ಸಾಹೇಬರು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಜಾಗತಿಕ ಅಹ್ಮದಿಯಾ ಕೇಂದ್ರವಾದ ರಬಾದಿಂದ ವಿದೇಶ ಪ್ರಚಾರಣಾ ಡೈರೆಕ್ಟರ್ ಮಿರ್ಝಾ ಮುಬಾರಕ್ ಅಹ್ಮದ್ ಸಾಹೇಬರು ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಅಲ್ಲದೆ, ಸರಕಾರದ ಉನ್ನತ ಅಧಿಕಾರಿಗಳೂ ವಿವಿಧ ರಾಷ್ಟ್ರಗಳ ರಾಯಭಾರಿಗಳೂ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳೂ ಪತ್ರಕರ್ತರೂ ಟೆಲಿವಿಜನ್ ಪ್ರತಿನಿಧಿಗಳೂ ಸಮಾರಂಭದಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಉದ್ಘಾಟನಾ ಸಮಾರಂಭವನ್ನೂ ಅಹ್ಮದಿಯಾ ಸಂಘಟನೆಯ ಪ್ರವರ್ತನೆಗಳನ್ನೂ ಟೆಲಿವಿಜನ್ ಹಾಗೂ ರೇಡಿಯೊಗಳ ಮೂಲಕ ಬಿತ್ತರಿಸಲಾಯಿತು. ಟೆಲಿವಿಜನ್‌ನಲ್ಲಿ ಅಹ್ಮದಿಯಾ ಮಸೀದಿಯ ದೃಶ್ಯವು ಪ್ರದರ್ಶಿಸಲ್ಪಟ್ಟಿತು.

ಅಹ್ಮದಿಯಾ ಮಿಶನರಿಗಳ ನಿರಂತರ ಪರಿಶ್ರಮದಿಂದ ಜರ್ಮನ್‌ನಲ್ಲಿ ಸಹಸ್ರಸಂಖ್ಯೆಯಲ್ಲಿ ಜನರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. 1959ರಲ್ಲಿ ಜರ್ಮನಿನ ಫ್ರಾಂಕ್‌ಫರ್ಟ್‌ನಲ್ಲಿ ಮತ್ತೊಂದು ಮಸೀದಿಯು ನಿರ್ಮಾಣವಾಯಿತು. ಅಲ್ಲಿನ ಅಹ್ಮದಿಯಾ ಸಂಘವು ಪವಿತ್ರ ಖುರ್-ಆನಿನ ಜರ್ಮನ್ ಭಾಷಾಂತರವನ್ನು ಪ್ರಕಟಿಸಿದ್ದು ಅದರ ಎರಡನೆಯ ಆವೃತ್ತಿಯೂ ಸಂಪೂರ್ಣ ಮಾರಾಟವಾಗಿರುತ್ತದೆ. ಜರ್ಮನ್ ಭಾಷೆಯಲ್ಲಿ ಅನೇಕ ಇಸ್ಲಾಮೀ ಸಾಹಿತ್ಯಗಳನ್ನು ಪ್ರಕಟಿಸಲಾಗಿದೆ. ಅಹ್ಮದಿಯಾ ಸಂಘವು ಪ್ರಕಟಿಸುತ್ತಿರುವ DER ISLAM ಎಂಬ ಜರ್ಮನ್ ಮಾಸಿಕದ ಮೂಲಕವೂ ಇಸ್ಲಾಂ ಧರ್ಮದ ಉತ್ತಮ ಪ್ರಚರಣವು ಮುಂದುವರಿಯುತ್ತಿದೆ.

1967 ಜುಲೈ ತಿಂಗಳಲ್ಲಿ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ (ಖಲೀಫತುಲ್ ಮಸೀಹ್ III) ತನ್ನ ಐರೋಪ್ಯ ಪರ್ಯಟನ ವೇಳೆಯಲ್ಲಿ ಹೇಂಬರ್ಗ್ ಸಂದರ್ಶಿಸಿ ಇಸ್ಲಾಂ ಧರ್ಮ ಪ್ರಚಾರ ಕಾರ್ಯವನ್ನು ವಿಶಾಲಗೊಳಿಸುವ ಅನೇಕ ಪದ್ಧತಿಗಳನ್ನು ನಿರ್ದೇಶಿಸಿದರು.

—M. P. I.

Regd. with the Registrar of Newspapers for India, Regd. No. R.N. 27354/75
YUGARASHMI Kannada Quarterly,
October - December 1977/Ikha-Fatah 1356

BOOKS ON ISLAM
AND
CONTEMPORARY RELIGIONS

1. Holy Quran with Arabic Text and English Translation 12-00
2. Ahmadiyyat or The True Islam 8-00
By Hazrat Mirza Bashiruddin Mahmud Ahmad
3. New World Order 2-25
By Hazrat Mirza Bashiruddin Mahmud Ahmad
4. The Teachings of Islam 6-00
By Hazrat Mirza Ghulam Ahmad
5. Characteristics of the Quranic Teachings 1-00
By Hazrat Mirza Bashiruddin Mahmud Ahmad
6. Where did Jesus Die? 2-25
By J. D. Shams, Ex Imam, London Mosque
7. The Tomb of Jesus 0-75
By Sufi M. R. Bengali
8. Jesus in India 2-25
By Hazrat Mirza Ghulam Ahmad
9. The Christian Doctrine of Atonement 1-50
By Dr. Mufti Muhammad Sadiq, D.D., LL.D., S.S.P. (Land)
10. An Interpretation of Islam 1-50
By Prof. Dr. Laura Veccia Vaglieri

Write to

NAZIR DAWAT-O-TABLIGH
P. O. QADIAN - 143516. (Punjab)

Printed by: B. Madhava Kulal, at Chandra Printers, Lower Car Street, Mangalore and Edited and Published by Muhammad Yusuf on behalf of Jamath Ahamadiyya Mangalore at 23/1008 Ansari Road, Bunder, Mangalore-575001.